ರಾಯಬಾಗದ ದೇವಾಲಯಗಳು

(ಇತಿಹಾಸ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋದನಾ ಸಂಪ್ರಬಂಧ)

ಸಂಶೋಧಕ

ಶ್ರೀ ಶ್ರೀನಿವಾಸ. ಬಿ. ಅಜೂರ

ಹಾರೂಗೇರಿ ಜಿ.ಬೆಳಗಾವಿ

ಮಾರ್ಗದರ್ಶಕರು

ಡಾ. ಎಸ್. ಪಿ. ಸುರೇಬಾನ್ಕರ.

ಆರ್. ಪಿ. ಡಿ. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಬೆಳಗಾವಿ.

ಶ್ರೀ ಬಿ.ಆರ್.ದರೂರ ಸಂಶೋಧನ ಕೇಂದ್ರ.

ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

2011

ರಾಯಬಾಗದ ದೇವಾಲಯಗಳು

(ಇತಿಹಾಸ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಸಂಶೋಧನಾ ಸಂಪ್ರಬಂಧ)

ಸಂಶೋಧಕ

ಶ್ರೀ ಶ್ರೀನಿವಾಸ. ಬಿ. ಆಜೂರ

ಹಾರೂಗೇರಿ ಜಿ.ಬೆಳಗಾವಿ

ಮಾರ್ಗದರ್ಶಕರು

ಡಾ. ಎಸ್. ಪಿ. ಸುರೇಬಾನ್ಕರ.

ಆರ್. ಪಿ. ಡಿ. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಬೆಳಗಾವಿ.

ಶ್ರೀ ಬಿ.ಆರ್.ದರೂರ ಸಂಶೋಧನ ಕೇಂದ್ರ.

ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೧

ಪ್ರಮಾಣ ಪತ್ರ

ರಾಯಬಾಗದ ದೇವಾಲಯಗಳು ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ಎಸ್. ಪಿ. ಸುರೇಬಾನ್ಕರ್ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ. ಆರ. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇತಿಹಾಸ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ್ದೇನೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದು ಹಾಗೂ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :10-06-2011

ಶ್ರೀ ಶ್ರೀನಿವಾಸ. ಬಿ.ಆಜೂರ
ಸಂಶೋಧನಾ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ
ಸಂಶೋಧನಾ ಕೇಂದ್ರ, ಹಾರೂಗೇರಿ.

ದೃಢೀಕರಣ ಪತ್ರ

ಶ್ರೀನಿವಾಸ. ಬ. ಆಜೂರ ಇವರು **ರಾಯಬಾಗದ ದೇವಾಲಯಗಳು** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧಾನ ಕೇಂದ್ರದ** ಮೂಲಕ **ಹಂಪಿ** ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಯಾವುದೇ ಪದವಿಗಳಿಗಾಗಿ ಅಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎಸ್. ಪಿ. ಸುರೇಬಾನ್ಕರ್
ಮಾರ್ಗದರ್ಶಿಕರು,
ಇತಿಹಾಸ ವಿಭಾಗ ಆರ್. ಪಿ. ಡಿ
ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ
ಬೆಳಗಾವಿ

ಸ್ಥಳ : ಹಾರೂಗೇರಿ
ದಿನಾಂಕ :10 -06-2011

* ಪರಿವಿಡಿ *

ಅಧ್ಯಾಯ – ೧

ಅಧ್ಯಾಯನದ ಉದ್ದೇಶ ಸ್ವರೂಪ ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯನದ ಉದ್ದೇಶ ಸ್ವರೂಪ ವ್ಯಾಪ್ತಿ ಮತ್ತು ವೈಧಾನಿಕತೆ :

ದೇವಾಲಯಗಳು ಒಂದು ರಾಷ್ಟ್ರದ ಸಾಂಸ್ಕೃತಿಕ ಸಂಪತ್ತು. ಇಂತಹ ದೇವಾಲಯಗಳು ಕರ್ನಾಟಕದ ಇತರ ಪ್ರದೇಶಗಳಲ್ಲಿರುವಂತೆ ಬೆಳಗಾವಿ ಜಿಲ್ಲೆಯ ರಾಯಬಾಗದಲ್ಲಿಯೂ ಕಂಡು ಬರುತ್ತವೆ. ದೇವಾಲಯಗಳು ಮತ್ತು ಮೂರ್ತಿ ಶಿಲ್ಪಗಳು ಆ ನಾಡಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿಕೊಂಡಿವೆ. ಆದುದರಿಂದಲೇ ರಾಯಬಾಗವು ಕರ್ನಾಟಕದ ಐತಿಹಾಸಿಕ ಕ್ಷೇತ್ರದಲ್ಲಿ ತನ್ನದೇ ಆದ ಅನನ್ಯತೆಯನ್ನು ಉಳಿಕೊಂಡ ವೈವಿದ್ಯ ಪೂರ್ಣವಾದ ನಗರವಾಗಿದೆ. ಇಂತಹ ದೇವಾಲಯಗಳು ಮಾನವನ ಧಾರ್ಮಿಕ ಕಲ್ಪನೆ ಮತ್ತು ದೈವತ್ವ ನಂಬಿಕೆಯನ್ನು ಪ್ರತಿಬಿಂಬಿಸುತ್ತವೆ. ಆ ಕಾರಣದಿಂದಲೇ ಅನಾದಿ ಕಾಲದಿಂದಲೂ ಆಧುನಿಕ ಕಾಲದವರೆಗೆ ಮಾನವ ತನ್ನ ಧಾರ್ಮಿಕತೆಯ ನಂಬಿಕೆಗಾಗಿ ದೇವಾಲಯಗಳನ್ನು ಸೃಷ್ಠಿಸಿಕೊಂಡಿದ್ದಾನೆ. ಅವನ ಕಲಾಭಿವ್ಯಚಿಯನ್ನು ಹಾಗೂ ದೈವತ್ವದ ಆಚರಣೆಯನ್ನು ಮತ್ತು ಸಂಪ್ರದಾಯವನ್ನು ಬೆಳೆಸಿಕೊಂಡು ಬರುವಲ್ಲಿ ಈ ದೇವಾಲಯಗಳು ಜೀವಂತ ಸಾಕ್ಷಿಯಾಗಿ ನಿಂತಿವೆ.

ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣ ಕಾರ್ಯ ೯ ಮತ್ತು ೧೦ ನೇ ಶತಮಾನದಲ್ಲಿ ತನ್ನ ವೈವಿದ್ಯತೆಯನ್ನು ಪ್ರಚೂರ ಪಡಿಸಿಕೊಂಡ ಯುಗವಾಗಿದೆ. ಆ ಕಾಲದ ಧಾರ್ಮಿಕ ಪಂಥಗಳು ತಮ್ಮ ಧರ್ಮದ ಪ್ರಚಾರ ಹಾಗೂ ಯುದ್ದದಲ್ಲಿ ದಿಗ್ವಿಜಯ ಸಾಧಿಸಿದ ಸವಿ ನೆನಪಿಗಾಗಿ ಮತ್ತು ತಮ್ಮ ರಾಜಕೀಯ ನೆಲೆಯನ್ನು ಭದ್ರ ಪಡಿಸಿಕೊಳ್ಳುವುದಕ್ಕಾಗಿ ಜನರ ಮೇಲೆ ಧಾರ್ಮಿಕತೆಯ ಬೆಳಕನ್ನು ವಿಸ್ತರಿಸುವ ದೃಷ್ಟಿಯಿಂದ ದೇವಾಲಯಗಳು ಸೃಷ್ಠಿಗೊಂಡಿವೆ. ಧರ್ಮ ಮತ್ತು ರಾಜಕೀಯ ಅನಾದಿ ಕಾಲದಿಂದ ಒಂದನ್ನೊಂದು ಪೊಶಿಸಿಕೊಂಡು ಬರುತ್ತಿರುವುದು ಇದಕ್ಕೆ ನಿದರ್ಶನವಾಗಿದೆ. ಇವುಗಳ ಜೊತೆಗೆ ಭಕ್ತಿಯ ಪರಾಕಾಷ್ಟೆಯು ತನ್ನದೇ ಆದ ಮಹತ್ವತೆಯನ್ನು ಪಡೆದುಕೊಂಡು ದೇವಾಲಯಗಳ ಪುನರುಜ್ಜೀವನಕ್ಕೆ ನಾಂದಿಯಾಗಿವೆ.

ಸ್ವಪ್ರತಿಷ್ಠೆಯ ಜೊತೆಗೆ ಧರ್ಮ ಪ್ರಚಾರ ಇವುಗಳು ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಗ್ರಂಥದ ರೂಪದಲ್ಲಿ ಶಾಸನ ರೂಪದಲ್ಲಿ ದೇವಾಲಯ ರೂಪದಲ್ಲಿ ಮುಂದುವರಿಯುತ್ತಾ ಗತಕಾಲದ ಇತಿಹಾಸವನ್ನು ಗರ್ಭಿಸಿಕೊಂಡು ಆಯಾ ಕಾಲದ ಧಾರ್ಮಿಕ ಪ್ರಾಮುಖ್ಯತೆಯನ್ನು ತಿಳಿಸುವಲ್ಲಿ ದೇವಾಲಯಗಳು ಆಧಾರ ಸ್ತಂಭವಾಗಿವೆ. ಇವುಗಳ ಜೊತೆಗೆ ಆಯಾ ಕ್ಷೇತ್ರ ಅಥವಾ ಆಯಾ ವ್ಯಕ್ತಿಯ ಇತಿಹಾಸವನ್ನು ಭವಿಷ್ಯತ್ತಿನಲ್ಲಿ ಅರಿತುಕೊಳ್ಳಲು ಸೃಷ್ಟಿಗೊಂಡಿರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಪ್ರದೇಶದಲ್ಲಿ ಸ್ಥಾಪನೆಯಾದ ದೇವಾಲಯಗಳು, ಬಸದಿಗಳು, ಚರ್ಚಗಳು, ಕೆರೆ, ಬಾವಿಗಳು ರಚನೆಯ ವಿವಿದ ಘಟನೆ ಅಥವಾ ಉದ್ದೇಶವನ್ನು ಗುರುತಿಸಿಕೊಳ್ಳಲು ಇಂತಹ ಅಧ್ಯಯನಗಳ ಮೂಲಕ ಸಾಧ್ಯವಿದೆ.

ಈ ಅಧ್ಯಯನವು ಕೇವಲ ಇತಿಹಾಸವನ್ನಷ್ಟೆ ಬಿಂಬಿಸುವದಷ್ಟೇಯಲ್ಲ ಅದರ ಜೊತೆಗೆ ಆ ಊರಿನ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ಭೌಗೋಳಿಕ ಮುಂತಾದವುಗಳನ್ನು ಗುರುತಿಸುವುದರ ಜೊತೆಗೆ ಆ ಕ್ಷೇತ್ರದ ಮಹತ್ವವನ್ನು ತಿಳಿಯಪಡಿಸುವುದಾಗಿದೆ. ಪ್ರಮುಖವಾದ ಅಂಶವಾಗಿದೆ. ಈ ನಿಟ್ಟಿನಲ್ಲಿ ಈ ಅಧ್ಯಯನವನ್ನು ಆಯ್ಕೆ ಮಾಡಿಕೊಡಿರುವ ಉದ್ದೇಶವನ್ನು ಈ ರೀತಿಯಲ್ಲಿ ಕಲೆ ಹಾಕಲಾಗಿದೆ.

ಅಧ್ಯಯನದ ಉದ್ದೇಶ :

ಇತಿಹಾಸವು ಪೂರ್ವಕಾಲದಲ್ಲಿದ್ದ ಅನೇಕ ಸಂಗತಿಗಳನ್ನು ಘಟನೆಗಳನ್ನು ಇಂತಹ ಅಧ್ಯಯನದ ಮೂಲಕ ತಿಳಿದು ಬರುತ್ತವೆ ಜೊತೆಗೆ ಅವುಗಳ ಸಂಕೀರ್ಣತೆ ಮತ್ತು ವೈವಿದ್ಯತೆ ಕಂಡು ಬರುತ್ತವೆ. ಪ್ರಮುಖವಾಗಿ ಪ್ರಾಚ್ಯಶಾಸ್ತ್ರದ ಹಿನ್ನೆಲೆಯಲ್ಲಿ ನೋಡಿದಾಗ ಶಾಸನಗಳು ನಾಣ್ಯಗಳು ದೇವಾಲಯಗಳು ಮುಂತಾದವುಗಳು ಉತ್ಖನನದಿಂದ ಶೋಧಿಸಲ್ಪಟ್ಟ ವಿವಿಧ ಅಂಕಣಗಳನ್ನು ತೋರ್ಪಡಿಸುತ್ತವೆ. ಈ ಹಿನ್ನೆಲೆಯಲ್ಲಿ ಪ್ರಮುಖವಾಗಿ ದೇವಾಲಯಗಳು ಆ ಕಾಲದ ರಾಜರಿಂದ ಮಾಂಡಲಿಕರಿಂದ ಮುಂತಾದ ಆಡಳಿತ ಕಾರಣದಿಂದ ರಚಿಸಲ್ಪಟ್ಟಿರುತ್ತವೆ. ಇವುಗಳ ಜೊತೆಗೆ ವಿವಿಧ ಸಮುದಾಯಗಳಿಂದ ಧಾರ್ಮಿಕ ನಂಬಿಕೆಯ ಸಲುವಾಗಿ ಕಟ್ಟಲ್ಪಟ್ಟಿರುತ್ತವೆ. ಆ ದೇವಾಲಯಗಳು ಅಂದಿನ ಕಾಲದ ಧಾರ್ಮಿಕ, ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಮೇಲೆ ತನ್ನದೆಯಾದ ಹಿಡಿತವನ್ನು ಸಾಧಿಸುತ್ತವೆ. ಈ ತೆರನಾದ ದೇವಾಲಯಗಳು ವಿವಿಧ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಅವುಗಳಲ್ಲಿ ರಾಯಬಾಗದ ದೇವಾಲಯಗಳು ಒಂದಾಗಿವೆ. ಈ ಹಿನ್ನಲೆಯನ್ನು ಗಮನಿಸಿ ಆ ದೇವಾಲಯಗಳು ಒಳಗೊಂಡಿರುವ ಸಾಂಸ್ಕೃತಿಕ ಚಟುವಟಿಕೆಗಳನ್ನು ಅನುಲಕ್ಷಿಸಿ ಅಧ್ಯಯನಕ್ಕೆ ಪೂರಕವಾಗಿರುವ

ಶಾಸನ ಅಲ್ಲಿಯ ಶಿಲ್ಪ ಕಲೆ, ಕೆರೆ ಇವುಗಳ ಜೊತೆಗೆ ಪ್ರಾಚೀನ ಕಾಲದ ಗ್ರಂಥಗಳನ್ನು ಉಪಯೋಗಿಸಿಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಒಂದು ಅಧ್ಯಯನದ ಉದ್ದೇಶವು ತನ್ನದೇ ಆದ ಚೌಕಟ್ಟನ್ನು ಹೊಂದಿರುತ್ತದೆ. ಅವುಗಳಲ್ಲಿ ಪ್ರಮುಖವಾಗಿ ರಾಯಬಾಗದ ದೇವಾಲಯಯಗಳು ವಿಶಿಷ್ಟವಾದ ಮಹತ್ವವನ್ನು ಉಳಿಸಿಕೊಂಡಿದೆ. ಆ ಕಾರಣದಿಂದಾಗಿ ಇದುವರೆಗೆ ಸ್ಥೂಲವಾಗಿ ರಾಯಬಾಗ ದೇವಾಲಯ ಕುರಿತು ಈ ಪೂರ್ವದಲ್ಲಿ ನಿರ್ಧಿಷ್ಟವಾದ ಅಧ್ಯಯನವು ನೆಡೆದಿಲ್ಲ ಕೆಲವು ಬಿಡಿ ಬಿಡಿ ಲೇಖನದಲ್ಲಿ ಅಲ್ಲಲ್ಲಿ ಕೆಲವು ಕೃತಿಗಳಲ್ಲಿ ಉಲ್ಲೇಖಗೊಂಡಿರುವುದನ್ನು ಬಿಟ್ಟರೆ ಸಂಪೂರ್ಣವಾಗಿ ಅಧ್ಯಯನವು ನಡೆಯದೇ ಇರುವುದರಿಂದ ಈ ಅಧ್ಯಯನವನ್ನು ಕೈಗೊಳ್ಳುವ ಉದ್ದೇಶ ನನ್ನದಾಗಿದೆ.

ಒಂದು ಗ್ರಾಮದ ವೈಶಿಷ್ಟತೆಯನ್ನು ಅದರ ಹಿಂದಿರುವ ಐತಿಹಾಸಿಕ ಮತ್ತು ಚಾರಿತ್ರಿಕ ಮಹತ್ವವನ್ನು ತಿಳಿಸುವ ಜೊತೆಗೆ ರಾಯಬಾಗದ ಸಂಸ್ಕೃತಿಕ ಪರಂಪರೆಯ ವೈಭವವನ್ನು ದೇವಾಲಯಗಳು ಪೂಶಿಸಿಕೊಂಡ ಬಗೆಯನ್ನು ಗುರುತಿಸುವ ಅಭಿಲಾಷೆ ನನ್ನದು. ಪ್ರಾಚೀನ ಮತ್ತು ಆಧುನಿಕ ಕಾಲದ ದೇವಾಲಯಗಳ ವೈಶಿಷತೆಯನ್ನು ಎತ್ತಿ ತೋರಿಸುವುದಾಗಿದೆ. ಒಂದು ಗ್ರಾಮದ ದೇವಾಲಯವು ಆಯಾ ಪ್ರದೇಶದ ಜನಪದ ಆಚರಣೆಯೊಂದಿಗೆ ಹೇಗೆ ಹಾಸು ಹೊಕ್ಕಾಗಿವೆ ಎಂಬುದನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ವಿವಿಧ ಪ್ರದೇಶದ ದೇವಾಲಯಗಳಿಗೂ ರಾಯಬಾಗ ದೇವಾಲಯಗಳಿಗೂ ಇರುವ ಸಾದೃಶ್ಯ ಸಂಬಂಧವನ್ನು ರಚನಾ ವಿನ್ಯಾಸ ಶಿಲ್ಪ ವೈವಿದ್ಯತೆ ಕಾಲಗಳ ಹಿನ್ನೆಲೆ ಮುಂತಾದವುಗಳನ್ನು ಸ್ಪಷ್ಟಪಡಿಸುವುದು ಆ ನಿಮಿತ್ಯ ರಾಯಬಾಗದ ವಿವಿಧ ಸಮೂದಾಯಗಳ ದೈವತ್ವದ ದೇವಾಲಯಗಳನ್ನು ವಿಂಗಡಿಸಿ ನೋಡುವ ದೃಷ್ಠಿ ನನ್ನದಾಗಿದೆ.

ರಾಯಬಾಗ ದೇವಾಲಯಗಳ ಅಧ್ಯಯನದಿಂದ ಪ್ರಾಚೀನ ಕಾಲದ ಸ್ಥಿತಿಗತಿಗಳನ್ನು ಗುರುತಿಸಿ ಅಧ್ಯಯನಕ್ಕೆ ಅಳುವಡಿಸುವುದು ಹಾಗೂ ಧರ್ಮದ ಪ್ರಸಾರಕ್ಕಾಗಿ ಸೃಷ್ಠಿಗೊಂಡ ದೇವಾಲಯಗಳು ಧಾರ್ಮಿಕ ವಿಧಿ–ವಿಧಾನದಲ್ಲಿ ಬೆರೆತುಕೊಂಡು ಬಗೆಯನ್ನು ವಿಶೇಷಿಸುವುದು ರಾಯಬಾಗದ ದೇವಾಲಯಗಳ ಅಧ್ಯಯನದಿಂದ ಆ ಗ್ರಾಮದ ವಿವೇಚನೆಯನ್ನು ಮಾಡುವುದಾಗಿದೆ.

ರಾಯಬಾಗದ ದೇವಾಲಯಗಳ ನಿರ್ಮಾಣ ಕಾಲ ನಿರ್ಮಾತೃಗಳ ಬಗೆಗೆ ನಿರ್ಧಿಷ್ಟವಾದ ದಾಖಲೆಗಳನ್ನು ಉಲ್ಲೇಖಸುವುದು ಹಾಗೂ ಈ ದಾಖಲೆಗಳು ಸಿಗದೇ ಇರುವಂತಹ

ದೇವಾಲಯಗಳನ್ನು ವಾಸ್ತು ಶಿಲ್ಪ ಅವುಳ ರಚಾನಾ ವಿನ್ಯಾಸ ಲಕ್ಷಣ ಜೊತೆಗೆ ಸ್ಥಳೀಯ ಐತಿಹ್ಯ ಜನರ ನಂಬಿಕೆ ಮುಂತಾದವುಗಳನ್ನು ಲಕ್ಷದಲ್ಲಿಟ್ಟುಕೊಂಡು ಕೃಢಿಸರಿಸಿ ನೋಡುವದಾಗಿದೆ. ರಾಯಬಾಗದ ದೇವಾಲಯಗಳ ಅಧ್ಯಯನದ ಉದ್ದೇಶ ಆಯಾ ಸ್ಥಳದ ಮಹಿಮೆಯನ್ನು ಅರಿಯುವುದಾಗಿದೆ ಹಾಗೂ ರಾಯಬಾಗವನ್ನಾಳಿದ ರಾಜ ಮನೆತನಗಳ ದೇವಾಲಯಗಳನ್ನು ಸ್ಥೂಲವಾಗಿ ವಿವೇಚಿಸುವುದಾಗಿದೆ.

ಈ ದೇವಾಲಯಗಳ ಅಧ್ಯಯನದ ಜೊತೆಗೆ ದೇವಾಲಯಕ್ಕೆ ಬಿಟ್ಟ ದಾನ, ದತ್ತಿ ಶಾಸನವನ್ನು ಅಭ್ಯಸಿಸುವ ಮೂಲಕ ಅವುಗಳ ಮಹತ್ವವನ್ನು ಗುರುತಿಸುವುದಾಗಿದೆ. ಒಟ್ಟಿನಲ್ಲಿ ಅಧ್ಯಯನದ ಉದ್ದೇಶವು ಅಂದಿನ ಕಾಲದ ವಾಸ್ತು ಶಿಲ್ಪದ ವಿಶೇಷತೆಯನ್ನು ಗುರುತಿಸಿ ರಾಯಬಾಗದ ದೇವಾಲಯಗಳು ವಿವಿಧ ಪ್ರದೇಶದ ದೇವಾಲಯಗಳಿಗಿಂತ ಹೇಗೆ ವಿಭಿನ್ನವಾಗಿ ಕಂಡುಬರುತ್ತವೆ ಎಂಬುದನ್ನು ಗುರುತಿಸುವುದು ಪ್ರಮುಖ ಉದ್ದೇಶವಾಗಿದೆ.

ಅಧ್ಯಯನದ ಸ್ವರೂಪ :

ರಾಯಬಾಗದ ದೇವಾಲಯಗಳು ಎಂಬ ಅಧ್ಯಯನವು ಸಾಂಸ್ಕೃತಿಕ ಅಧ್ಯಯನದ ಹಿನ್ನೆಲೆಯಾಗಿ ಅಲ್ಲಿಯ ಸಾಮಾಜಿಕ ಅಭಿವ್ಯಕ್ತಿಗೆ ತತ್ವ ಹಾಗೂ ಮೌಲ್ಯವನ್ನು ನಿತ್ಯ ಜೀವನದಲ್ಲಿ ಹಾಗೂ ವಿಶೇಷ ದಿನಮಾನಗಳಲ್ಲಿ ಆಚರಣೆಗಳಲ್ಲಿ ಹಾಸುಹೊಕ್ಕಾಗಿರುವ ಪರಿಯನ್ನು ಈ ಅಧ್ಯಯನದ ಸ್ವರೂಪದಲ್ಲಿ ಈ ರೀತಿಯಲ್ಲಿ ಗುರುತಿಸಲಾಗಿದೆ. ಅಧ್ಯಯನದ ಅನೂಕುಲಕ್ಕಾಗಿ ಸಂಪ್ರಬಂಧವನ್ನು ಆರು ಅಧ್ಯಯಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ ಅವುಗಳ ಸ್ವರೂಪ ಈ ರೀತಿ ಇದೆ.

ಅಧ್ಯಯ ಒಂದರಲ್ಲಿ ಅಧ್ಯಯನದ ಉದ್ದೇಶ ಸ್ವರೂಪ ವ್ಯಾಪ್ತಿಯನ್ನು ಒಳಗೊಂಡಿದ್ದು ಅಧ್ಯಯನವನ್ನು ಕೃಗೆತ್ತಿಕೊಳ್ಳುವ ಪ್ರಮುಖ ಉದ್ದೇಶವನ್ನು ಹಾಗೂ ಅಧ್ಯಯನ ಒಳಗೊಂಡಿರುವ ಸ್ವರೂಪವನ್ನು ಜೊತೆಗೆ ಅದರ ವ್ಯಾಪ್ತಿಯನ್ನು ಆಕರಗಳ ಸಾಮಗ್ರಿಗಳ ಹಿನ್ನೆಲೆಯಲ್ಲಿ ಈ ಅಧ್ಯಯನದಲ್ಲಿ ಚರ್ಚೆಯನ್ನು ಬೆಳೆಸಲಾಗಿದೆ.

ಅಧ್ಯಯ ಎರಡರಲ್ಲಿ ರಾಯಬಾಗದ ಐತಿಹಾಸಿಕ ಹಾಗೂ ಭೌಗೋಳಿಕ ಸ್ವರೂಪವನ್ನು ಒಳಗೊಂಡಿದ್ದು ಈ ಅಧ್ಯಯನದ ರಾಯಬಾಗ ಸ್ಥಳ ವರ್ಣನೆ ಸ್ಥಳ ಪುರಾಣ ಸ್ಥಳನಾಮ ಅಧ್ಯಯನ ರಾಯಬಾಗವನ್ನಾಳಿದ ರಾಜಾವಂಶಗಳ ಉಲ್ಲೇಖ ರಾಯಬಾಗ ಕುರಿತು ಉಲ್ಲೇಖಗಳನ್ನು ಹೊಂದಿದ ಪ್ರಾಚೀನ ಕೃತಿಗಳ ಅಧ್ಯಯನ ಅಲ್ಲಿಯ ಪ್ರಾಕೃತಿಕ ಭೌಗೋಳಿಕ ಪರಿಸರ ರಾಯಬಾಗದ ಐತಿಹ್ಯ ಮುಂತಾದವುಗಳ ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಯ ಮೂರರಲ್ಲಿ ರಾಯಬಾಗದ ದೇವಾಲಯಗಳ ಕುರಿತಾಗಿದ್ದು ಇವುಗಳಲ್ಲಿ ಪ್ರಾಚಿನ ಮತ್ತು ಆಧುನಿಕ ದೇವಾಲಯಗಳು ಬೆರೆತಿದ್ದು ಅವುಗಳನ್ನು ಪ್ರತ್ಯೇಕಿಸಿ ಹೇಳಲಾಗಿದ್ದು ಜೊತೆಗೆ ಅಧ್ಯಯನದ ಅನೂಕುಲಕ್ಕಾಗಿ ಶೈವ ದೇವಾಲಯಗಳು, ಜೀನಾಲಯಗಳು, ಹಾಲುಮತ ಸಮೂದಾಯದ ದೇವಾಲಯಗಳು, ವೈಷ್ಣವ ದೇವಾಲಯಗಳು , ಕೆಳ ವರ್ಗದ ದೇವಾಲಯಗಳು ಇತ್ಯಾದಿಯಾಗಿ ಹಲವು ಪ್ರಕಾರಗಳನ್ನು ಮಾಡಿಕೊಂಡಿದ್ದು ಅವುಗಳ ಸ್ಥೂಲ ಚಿತ್ರಣ ಈ ಅಧ್ಯಯದಲ್ಲಿ ಬಿಂಬಿಸಲಾಗಿದೆ. ಹಾಗೂ ದೇವಲಯಗಳು ಕಂಡುಬಂದ ಶಾಸನಗಳನ್ನು ವಿಶ್ಲೇಷಿಸಲಾಗಿದೆ.

ಅಧ್ಯಯ ನಾಲ್ಕರಲ್ಲಿ ರಾಯಬಾಗ ದೇವಾಲಯಗಳ ರಚನಾ ವಿನ್ಯಾಸವನ್ನು ಒಳಗೊಂಡಿದ್ದು ಪ್ರಾಚೀನ ದೇವಾಲಯಗಳ ರಚೆನೆ ಹಾಗೂ ಅಧುನಿಕ ದೇವಾಲಯಗಳ ರಚನಾ ವಿನ್ಯಾಸಕ್ಕಿರುವ ಸಾದೃಶ್ಯ ಸಂಬಂಧ ಹಾಗು ವಿಭಿನ್ನತೆಯನ್ನು ಶಿಲ್ಪಕಲೆಯ ವೈಶಿಷ್ಠತೆಯನ್ನು ~~ಈ ಅಧ್ಯಾಯದ~~ಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಐದರರಲ್ಲಿ ರಾಯಬಾಗ ದೇವಾಲಯದ ಆಚರಣೆ ಮತ್ತು ಸಂಪ್ರದಾಯ ನಂಬಿಕೆಗಳು ಎಂಬ ಅಧ್ಯಾಯವಾಗಿದ್ದು ರಾಯಬಾಗದ ಪ್ರದೇಶದ ಜನಜೀವನದಲ್ಲಿ ಅಭಿವ್ಯಕ್ತಗೊಂಡಿರುವ ವಿಶಿಷ್ಣವಾದ ಆಚರಣೆಗಳಾದ ಅಲಗ ಹಾಯುವುದು ಕರಿಕಟ್ಟವುದು. ಕೆಂಡ ಹಾಯುವುದು ಉಪವಾಸ ಆಚರಣೆ ಜಾತ್ರೆ ನೆಡೆಸುವುದು ವಿಶೇಷ ಪೂಜಾದಿಗಳನ್ನು ನೆರವೇರಿಸುವುದು ಕವಲ ಹಚ್ಚುವುದು ಮುಂತಾದವುಗಳ ವಿಷಯ ವಸ್ತುವನ್ನು ಈ ಅಧ್ಯಯನದಲ್ಲಿ ಚಿತ್ರಿಸಲಾಗಿದೆ.

ಅಧ್ಯಾಯ ಆರರಲ್ಲಿ ಸಮಾರೋಪದಿಂದ ಒಳಗೊಂಡಿದ್ದು ಒಟ್ಟು ಅಧ್ಯಯನದ ಫಲಶೃತಿಯನ್ನು ಕೊಡಲಾಗಿದೆ ಇಲ್ಲಿ ರಾಯಬಾಗ ದೇವಾಲಯಗಳು ಕುರಿತು ಕೈಗೊಂಡ ಅಧ್ಯಯನದ ಹೊಸ ಸಾಧ್ಯತೆಯನ್ನು ಹೇಳಲಾಗಿದೆ. ಕೊನೆಯಲ್ಲಿ ಅನುಬಂಧದಲ್ಲಿ ರಾಯಬಾಗದ ನಕ್ಷೆ ದೇವಾಲಯಗಳ ಭಾವಚಿತ್ರ ಸಂದರ್ಶನಕ್ಕೆ ಒಳಪಡಿಸಿದ ವ್ಯಕ್ತಿಗಳ ವಿವರ ಪರಾಮಾರ್ಶನ ಗ್ರಂಥ ಕೊಡಲಾಗಿದ್ದು ಒಟ್ಟು ಅಧ್ಯಯನದ ಸ್ವರೂಪ ಈ ತೆರನಾಗಿ ವೈವಿದ್ಯತೆಯನ್ನು ಹೊಂದಿದೆ.

ವ್ಯಾಪ್ತಿ :

ರಾಯಬಾಗದ ದೇವಾಲಯಗಳು ಎಂಬ ಅಧ್ಯಯನದ ಪ್ರಬಂಧವು ಕ್ಷೇತ್ರದ ವಿಸ್ತಾರದ ದೃಷ್ಟಿಯಿಂದಾಗಿ ಸೀಮಿತಗೊಳಿಸಿಕೊಂಡು ಕೇವಲ ರಾಯಬಾಗದ ದೇವಾಲಯಗಳನ್ನು ಮಾತ್ರ

ಅನುಲಕ್ಷದಲ್ಲಿರಿಸಿಕೊಳ್ಳಲಾಗಿದೆ. ಇಲ್ಲಿ ಮುಸ್ಲಿಂ ಹಾಗೂ ಕ್ರೈಸ್ತ ಮಂದಿರಗಳನ್ನು ಬಿಟ್ಟು ಇನ್ನುಳಿದ ಸಮೂದಾಯದ ದೇವಾಲಯಗಳನ್ನು ಇಟ್ಟುಕೊಂಡು ಅಧ್ಯಯನವನ್ನು ಮಾಡಲಾಗಿದೆ.

ಒಂದು ಅಧ್ಯಯನದ ವಿಷಯ ಅದು ಹೊಂದಿರುವ ವಿಷಯದ ವ್ಯಾಪ್ತಿಯಲ್ಲಿ ಆ ಕ್ಷೇತ್ರದ ಕ್ಷೇತ್ರ ಕಾರ್ಯವನ್ನು ಮಾಡಲಾಗಿದೆ. ಹಾಗೂ ಕ್ಷೇತ್ರ ವಿಸ್ತಾರತೆಯನ್ನು ಗಮನದಲ್ಲಿಟ್ಟುಕೊಂಡು ಅದರ ಗಡಿರೇಖೆಯ ಚೌಕಟ್ಟನ್ನು ಪರಿಗಣಿಸಲಾಗಿದೆ. ವ್ಯಾಪ್ತಿ ವಿಶಾಲವಾದಂತೆ ಅಧ್ಯಯನದ ವಿಷಯಗಳು ವಿಸ್ತಾರವಾಗುತ್ತಾ ಹೋಗುತ್ತವೆ. ಆ ದೃಷ್ಠಿಯಿಂದಾಗಿ ಕೇವಲ ಒಂದು ಗ್ರಾಮದಲ್ಲಿ ಕಂಡುಬರುವ ದೇವಾಲಯಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಮೂಲಾಧಾರಗಳು :

ಒಂದು ಅಧ್ಯಯನಕ್ಕೆ ಹಲವಾರು ಆಕರಗಳು ದೊರೆಯುತ್ತವೆ ಹಾಗಾಗಿ ಈ ಅಧ್ಯಯನಕ್ಕೆ ಕೆಲವು ಆಕರಗಳು ಪ್ರಮುಖವಾಗಿ ಗೋಚರಿಸುತ್ತವೆ. ಅವುಗಳಲ್ಲಿ ದೇವಾಲಯಗಳು, ಶಾಸನಗಳು, ಐತಿಹ್ಯಗಳು ಇತರ ಗ್ರಂಥಗಳು ಪ್ರಮುಖ ಮೂಲಾಧಾರಗಳಾಗಿವೆ.

ವೈಧಾನಿಕತೆ :

ಈ ಅಧ್ಯಯನದ ವೈಧಾನಿಕತೆಯು ರಾಯಬಾಗದ ದೇವಾಲಯಗಳ ಕ್ಷೇತ್ರ ಕಾರ್ಯ ಹಲವು ಧಾರ್ಮಿಕ ವ್ಯಕ್ತಿಗಳ ಸಂಧರ್ಶನ ಮತ್ತು ಕ್ಷೇತ್ರಕಾರ್ಯವನ್ನು ಒಳಗೊಂಡು ವಿಶ್ಲೇಷಣಾತ್ಮಕ ವಿಧಾನವನ್ನು ದೊರೆತಿರುವ ಆಕರ ಸಾಮಾಗ್ರಿಗಳ ಮೂಲಕವಾಗಿ ಕೈಗೊಳ್ಳಲಾಗಿದೆ ಹೀಗೆ ಒಟ್ಟು ಅಧ್ಯಯನದ ಚೌಕಟ್ಟನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ – ೨

ರಾಯಬಾಗದ ಭೌಗೋಳಿಕ ಹಾಗೂ ಐತಿಹಾಸಿಕ ಸ್ವರೂಪ

ರಾಯಬಾಗದ ಭೌಗೋಳಿಕ ಹಾಗೂ ಐತಿಹಾಸಿಕ ಸ್ವರೂಪ :

ಕರ್ನಾಟಕದ ಗಂಡು ಮೆಟ್ಟಿನ ನೆಲವೆಂದು ಖ್ಯಾತಿವೆತ್ತ ಬೆಳಗಾವಿ ಜಿಲ್ಲೆ ಐತಿಹಾಸಿಕವಾಗಿ, ಸಾಹಿತ್ತಿಕವಾಗಿ, ಸಾಂಸ್ಕೃತಿಕವಾಗಿ ಹಲವು ವಿದಧಲ್ಲಿ ಮುಂಚೂಣಿಯಲ್ಲಿದೆ. ಬೆಳಗಾವಿ ಜಿಲ್ಲೇ ಹತ್ತು ತಾಲ್ಲೂಕುಗಳನ್ನು ಒಳಗೊಂಡ ಅತೀ ದೊಡ್ಡ ಜಿಲ್ಲೆಯಾಗಿದೆ. ಅವುಗಳಲ್ಲಿ ರಾಯಬಾಗ ತಾಲ್ಲೂಕು ಒಂದಾಗಿದೆ. ಈ ರಾಯಬಾಗವು ಬೆಳಗಾವಿ ಜಿಲ್ಲಾ ಕೇಂದ್ರದಿಂದ ೯೬ ಕಿ.ಮಿ. ದೂರದಲ್ಲಿದೆ. ಬೆಳಗಾವಿಯ ಉತ್ತರ ಭಾಗದಲ್ಲಿ ರಾಯಬಾಗವು ಕಂಡು ಬರುತ್ತದೆ.

ರಾಯಬಾಗವು ಬೆಳಗಾವಿ ಜಿಲ್ಲೆಯಲ್ಲಿ ಐತಿಹಾಸಿಕ ಚಾರಿತ್ರಿಕ ಸಾಹಿತ್ತಿಕ, ಸಾಂಸ್ಕೃತಿಕ ಮುಂತಾದ ರಂಗದಲ್ಲಿ ತನ್ನದೇ ಆದ ಚಾಪನ್ನು ಮೂಡಿಸಿಕೊಂಡಿದೆ. ಇಲ್ಲಿ ಹಲವಾರು ಸಮೂದಾಯಗಳ ದೇವಾಲಯ ಶಾಸನಗಳ, ಶಿಲ್ಪಕಲೆಗಳು, ಕೆರೆ, ಬಾವಿ ಹಳ್ಳಕೊಳ್ಳ ಮುಂತಾದವುಗಳು ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿವೆ. “ರಾಯಬಾಗವು ಪ್ರಾಚೀನ ವಿದ್ಯಾ ಕೇಂದ್ರವಾಗಿದ್ದು ರಟ್ಟರ ಅಧೀನನದಲ್ಲಿ ಶ್ರೀಮಂತ ಸಂಸ್ಕೃತಿಯಳ್ಳ ಪಟ್ಟಣವಾಗಿತ್ತು ಕ್ರಿ.ಶ.೯೩೦ ರಿಂದ ಕ್ರಿ.ಶ.೧೨೩೦ ರ ವರೆಗೆ ರಾಜ್ಯಭಾರ ಮಾಡಿದ ರಟ್ಟರು ಮೂರು ಸಾವಿರ ಹಳ್ಳಿಯ ಒಡೆಯರಾಗಿದ್ದರು ಸ್ವಂತ ಜೈನರಾಗಿದ್ದ ರಟ್ಟುರು ಮೊದಲು ಸೌದತ್ತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ತದನಂತರ ಆಡಳಿತದ ಅನುಕೂಲಕ್ಕಾಗಿ ಬೆಳಗಾವಿ (ವೇಣುಗ್ರಾಮ)ಗೆ ಸ್ತಳಾಂತರ ಮಾಡಿಕೊಂಡು ಸುವ್ಯವಸ್ಥಿತ ಆಡಳಿತ ನೀಡಿದರಲ್ಲದೆ ತಮ್ಮ ಅಧಿಕಾರ ಅವಧಿಯಲ್ಲಿ ಜೀನ ಸಂಸ್ಕೃತಿ ಕಲೆ ವಾಸ್ತು ಶಿಲ್ಪ ಸಾಹಿತ್ಯದ ಬೆಳವಣಿಗೆಗೆ ವಿಫಲ ಅವಕಾಶ ನೀಡಿದರು ಅಂತಹ ನಿಷ್ಠಾವಂತ ಆಳರಸರ ಅಧೀನಕ್ಕೊಳಪಟ್ಟ ಕೂಹೂಂಡಿ ಮೂಸಾಸಿರನಾಡಿನ ಅನುಪಮ ರತ್ನಾವೆನಿಸಿ ಮೆರೆದ ಪಟ್ಟಣವೇ ‘ಪೂವಿನಬಾಗ’ (ರಾಯಬಾಗ) ಎಂಬುದರಲ್ಲಿ ಅತಿಶಯೋಕ್ತಿ ಇಲ್ಲ ”[೧] ಎಂಬ ಅಭಿಪ್ರಾಯ ಡಾ.ಪಿ.ಜಿ ಕೆಂಪಣ್ಣವರದು.

ಕನ್ನಡ ಸಾಹಿತ್ಯ ಲೋಕದಲ್ಲಿ ಕವಿ ರಾಜಾಧಿತ್ಯನ ಹೆಸರು ಚಿರಪರಿಚಿತವಾದದ್ದು. ಈತ ಶ್ರೇಷ್ಠ ಗಣಿತ ತಜ್ಞನಾಗಿದ್ದು ಕವಿ ರಾಜಾದಿತ್ಯ ರಚಿಸಿದ 'ವ್ಯವಹಾರ ಗಣಿತ' ಎಂಬ ಗ್ರಂಥದಲ್ಲಿ ರಾಯಬಾಗದ ಸ್ಥಳದ ವರ್ಣನೆಯನ್ನು ಐತಿಹಾಸಿಕ ಮಹತ್ವತೆಯನ್ನು ಅರಿಯಲು ಸಾಧ್ಯವಿದೆ.

ರಾಯಬಾಗದ ಸ್ಥಳನಾಮದ ಹಿನ್ನೆಲೆ :

ರಾಯಬಾಗಕ್ಕೆ ಜನಪದರು ಈಗಲೂ ಸಹ 'ಬಾಗಿ' ಎಂತಲೂ ಕರೆಯುತ್ತಾರೆ 'ಬಾಗಿ' ಎಂದರೆ ಹಿಂದಿ ಭಾಷಯಲ್ಲಿ ಹೂದೋಟ ಎಂದರ್ಥವಾಗುತ್ತದೆ. ಅದರ ಶುದ್ಧ ರೂಪ 'ಬಾಗ್' ಇದ್ದು ಜನರ ಆಡು ಮಾತಿನಲ್ಲೂ 'ಬಾಗಿ'ಯಾಗಿದೆ ಇದು ಮರಾಠ ಭಾಷಯಲ್ಲಿ ಬಗೀಚಾ ಎಂದರೆ 'ಹೂದೋಟ' ಎನ್ನುತ್ತಾರೆ, ಇದನ್ನೆ ಜನರು ಹೂವಿನ ಬಾಗ ಎನ್ನೂವ ಬದಲು ಬಾಗ ಎಂತಲೇ ಕರೆಯುತ್ತಾರೆ. ರಾಜಾಧಿತ್ಯ ತನ್ನ ವ್ಯವಹಾರ ಗಣಿತದಲ್ಲಿ ಈ ರೀತಿಯಾಗಿ ರಾಯಬಾಗ ಕುರಿತು ಹೇಳಿದ್ದಾನೆ.

"ವನತತಿಯಿಂ ನದೀನದ ಭೃತ್ತುಟದಿಂ ಧನಧಾನ್ಯವರ್ಗದಿ !
ಜನಪದ ರಾಜಿಯಿಂ, ಬೆಳೆವಕೆಯ್ವೊಲದಿಂದೆ ಸೆವೊರ್ಗಲಿಂ ಜಗ !
ಜ್ಜನನುತ ಜಿನಧರ್ಮದ ನೆಗಳ್ತೆಯೊಳಿಂಬುಕೊಂಡಿ ಮಂಡಲ್ತ !
ಕ್ಕನುಪಮ ರತ್ನಮಂಡಲವೆನಿಪ್ಪುದು ಪೂವಿನಬಾಗೆ ಸತತಂ"[೨]

ಹೀಗೆ ನಿಸರ್ಗದ ಸಹಜ ಸೌಂದರ್ಯವನ್ನು ಪಡೆದ ಪೂವಿನ ಬಾಗೆ ಜೈನಧರ್ಮದ ವಾಸಸ್ಥಾನವಾಗಿ ಕೂಹೂಂಡಿ ಮಾಡಲದಲ್ಲಿ ತನ್ನದೇ ಆದ ಅವನ್ಯತೆಯನ್ನು ಉಳಿಸಿಕೊಂಡ ಗ್ರಾಮವಾಗಿದೆ. ಈ ಹೂವಿನ ಬಾಗೆಯ ಸಾಕ್ಷ್ಯಿ ಚಿತ್ರವನ್ನು ರಾಜಾಧಿತ್ಯನ ಇನ್ನೊಂದು ತದ್ಯದ ಮೂಲಕವಾಗಿ ಸ್ಪಷ್ಟಿಕರಿಸಲಾಗಿದೆ.

"ಪೊಸ ಪೂಂಗೇದಗೆ ಜಾಜಿ ಪಾಟಲಿ ಲಸತ್ಸೇವಂತಿ ನೀಲಾಜ್ಜಮು ದ್ಧಸರೊಜಂ ಸುರ ಹೊನ್ನೆ
ಸಂಪಗೆ ನವೋದ್ಯನ್ಮಲ್ಲಿಕಾದಿಪುಸೂನ ಸಮೂಹಂ ತನಿನಂಪನೆಷ್ಡೆಸೆಗೆ ನಿಚ್ಚಂ
ಬೀಸಲನ್ದರ್ಥವೂಗೆಸಗುಂ ಪೂವಿನ ಬಾಗೆಯೆಂಬ ಪೆಸರಂದಿಂಬಾಗೆ ಚೆಲ್ವಾಗಿರಲ್"[೩]

ಕವಿ ರಾಜಾಧಿತ್ಯನು ಪೂವಿನಬಾಗೆಯ ಪರಿಸರದ ಸೌಂಧರ್ಯವನ್ನು ನಿಸರ್ಗಕ್ಕೆ ಹೋಲಿಸಿ ವಿವಿಧ ಹೂವಿನ ಸೊಬಗನ್ನು ಸಂಪಿಗೆ, ಮಲ್ಲಿಗೆ, ಸೇವಂತಿಗೆ ಸಿರಿಷ ಹೂಗಳ ತೋಟ

ವೆನಿಸಿಕೊಂಡ ಪೂವಿನಬಾಗೆ ಇಂದು ರಾಯಬಾಗವಾಗಿ ಪರಿವರ್ತನೆ ಹೊಂದಿದೆ. ಮುಂದುವರೆದು ಕವಿ ರಾಜಾಧಿತ್ಯ "ಅಷ್ಠ ದಿಕ್ಕಗಳಲ್ಲಿಯೂ ಕಣ್ಣಿಗೆ ತಂಪನ್ನಿಡುವ ವೃಕ್ಷಗಳ ರಾಶಿಯೇ ರಾಶಿ"ಳ ಎಂದು ಬಾಯಿ ತುಂಬ ಪೂವಿನ ಬಾಗಿಯ ಸೌಂದರ್ಯಲಹರಿಯನ್ನ ವರ್ಣಿಸಿದ್ದಾನೆ ಕವಿರಾಜ ಮಾರ್ಗಕಾರ ಶ್ರೀವಿಜಯನ್ನು ಕನ್ನಡಿಗರ ಗುಣ ಸ್ವಾಭಾವಗಳನ್ನು ಏರ್ಣಿಸುರುವಂತೆ. ಕವಿ ರಾಜಾದಿತ್ಯಮ ಸಹ ಪೂವಿನ ಬಾಗೆ ಜನರ ಗುಣ ಸ್ವಾಭಾವಗಳನ್ನ ಅರ್ಥ ಪೂರ್ಣವಾಗಿ ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ. ಆ ಪದ್ಯವನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ.

"ವಿನುತರ್ ನೀತಿವಿದರ್ ಕರ

ಮನುನಯದಿಂದ ದಾನಧರ್ಮ ವಿದಿಧಾಕಾರರ್

ಧನಕನಕ ಸಮೃದ್ಧರ್ ಪೂ

ವಿನ ಬಾಗೆಯ ವಿಪ್ರವೈಶ್ಯಶೂದ್ರಾದಿಜಂ"

ಪೂವಿನಬಾಗೆ ರಾಜಾಧಿತ್ಯನ ಹೂಟ್ಟೂರು ಆತ ತನ್ನ ಬಾಲ್ಯದಲ್ಲಿ ಕಂಡುಂಡ ಗ್ರಾಮವನ್ನು ಮನದುಂಬಿ ವರ್ಣಿಸಿದ್ದಾನೆ. ಈ ಮೇಲಿನ ಎಲ್ಲ ಉಲ್ಲೇಖಗಳನ್ನೂ ಗಮನಿಸಿದಾಗ ಪೂವಿನ ಬಾಗೆ> ರಾಯಬಾಗ ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ರಾಯಬಾಗವು ನಿಸರ್ಗ ಸೌದರ್ಯದ ವಿವಿಧ ಹೂದೋಟವನ್ನು ಒಳಗೊಂಡ ಅಂದಿನ ಗ್ರಾಮ ಪೇಶ್ವೆಯರ ಕಾಲಕ್ಕೆ ಕೊಲ್ಹಾಪೂರದ ಸಂಸ್ಥಾನದಲ್ಲಿ ವಿಲೀನಗೊಂಡಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ. ಈಗೀರುವ ರಾಯಬಾಗ ಪಟ್ಟಣವು ಪಶ್ಚಿಮ ಭಾಗಕ್ಕೆ ಇದ್ದು ಅಲ್ಲಿಯ ಊರು ಕಾರಣಾಂತರಗಳಿಂದ ಸ್ಥಳಾಂತರವಾಗಿರುವ ಸಾಧ್ಯತೆ ಇದೆ. ಇದಕ್ಕೆ ನಿದರ್ಶನವಾಗಿ ಕೆಲವು ಅವಶೇಷಗಳು ದೊರಕುತ್ತವೆ. ಜೊತೆಗೆ ಸ್ಥಳೀಯರು ಹೇಳುವ ಐತಿಹ್ಯ ಕಥೆಯು ಪುಷ್ಠಿಯನ್ನು ನೀಡುತ್ತದೆ.೫ ಆ ಐತಿಹ್ಯ ಕಥೆಯ ಈ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ.

"ಒಂದು ಸಾರಿ ಪೂವಿನ ಬಾಗೆಯಲ್ಲಿ ಶ್ರೀಮಂತರ ಮಗಳು ಹಾಗೂ ಅಲ್ಲಿಯ ರಾಯನ (ರಾಜನ) ಮಗಳು ಸಂತೆಯೋಳಗಡೆ ಹೊಗಿದ್ದರಂತೆ ಸಂತೆಯಲೂ ಒಂದು ದೊಡ್ಡದಾದ ಕುಂಬಳಕಾಯಿ ಇಬ್ಬರಿಗೂ ಏಕಕಾಲದಲ್ಲಿ ಮನಸ್ಸಿಗೆ ಬಂತಂತೆ, ಹೀಗಾಗಿ ಆ ಕುಂಬಳಕಾಯಿಯನ್ನು ಪಡೆಯಲು ಇಬ್ಬರಲೂ ಸ್ಪರ್ಧೆ ಆರಂಭವಾಯಿತಂತೆ ಹೀಗಾಗಿ ಆಗ ಸವಾಲು ಮಾಡುವದರ ಮೂಲಕ ಆ ಕುಂಬಳ ಕಾಯಿನ್ನು ಹರಾಜಿಗೆ ಇಡಲಾಯಿತು. ಆಗ ಶ್ರೀಮಂತರ ಮಗಳು ಹೆಚ್ಚು ಹಣವನ್ನುನೀಡಿ ತೆಗೆದುಕೊಡು ಹೋದಳು ಇದರಿಂದ ಅವಮಾನಿತಳಾದ ರಾಯನ ಮಗಳು ತನ್ನ

ತಂದೆಗೆ ಈ ವಿಷಯವನ್ನು ತಿಳಿಸಿದಾಗ ರಾಜ ನನ್ನ ಪ್ರಜೆಗಳಿಂದಲೇ ನನಗೆ ಅವಮಾನವೇ ಇದು ಸಾಧ್ಯವಿಲ್ಲ ಎಂದವನೇ ಆ ಸ್ಪರ್ಧೆಯನ್ನು ಏರ್ಪಡಿಸಿದವರಿಗೂ ಹಾಗೂ ಆ ಶ್ರೀಮಂತ ಕುಟುಂಬಕ್ಕೂ ಹೊತ್ತು ಹೇರುವುದರೊಳಗಾಗಿ ಈ ಊರನ್ನು ತೆರದು ಮಾಡಬೇಕು ತಪ್ಪಿದ್ದಲ್ಲಿ ಎಲ್ಲರನ್ನು ಬಲಿ ತೆಗೆದುಕೊಳ್ಳುತ್ತೇನೆ ಎಂದು ಆಜ್ಞಾಪಿಸಿದನಂತೆ. ಇದರಿಂದ ಹೆದರಿದ ಆ ಶ್ರೀಮಂತ ಕುಟುಂಬ ಮತ್ತು ಗ್ರಾಮಸ್ಥರು ಬೇರೆ ಬೇರೆ ಕಡೆಗೆ ಮೊಲಸೆ ಹೋದರಂತೆ ಕೆಲ ಕುಟುಂಬಗಳು ಈಗಿರುವ ಸ್ಥಳದಲ್ಲಿ ನೆಲೆ ನಿಂತರು"[೬] ಅದೇ ಮುಂದೆ ಸಿಡೆದು ರಾಯ (ರಾಜ) ಬಾಗವಾಯಿತು. ಜನಪದರ ಬಾಯಲ್ಲಿ 'ಬಾಗಿ' ಯಾಗಿ ಇಂದಿಗೂ ಸಹ ತನ್ನ ಹೆಸರನ್ನು ಉಳಿಸಿಕೊಂಡಿದೆ. ಇದಕ್ಕೆ ಹಿನ್ನೆಲೆಯಾಗಿ ಬಾಗೆಯ ಬಂಕನಾಥ ದೇವಾಲಯ, ಸಂಕೇಶ್ವರದ ಸಂಕನಾಥ, ಕಿದ್ರಾಪೂರದ ಕೋಪನಾಥ ದೇವಾಲಯಗಳನ್ನು ಒಂದೇ ರಾತ್ರಿಯಲ್ಲಿ ದೊತ್ಯರು ಕಟ್ಟಿಸಿದರೆಂಬ ದಂತ ಕಥೆಯು ಪ್ರಚಲಿತದಲ್ಲಿದೆ. ಬಾಗೆಯ ಬಂಕನಾಥ ದೇವಾಲಯ ಈಗಲು ಪ್ರಸಿದ್ಧ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದೆ. ಹೀಗೆ ರಾಯಬಾಗ ಮೊದಲು ಪೂವಿನ ಬಾಗೆಯಾಗಿದ್ದು ನಂತರ ತನ್ನ ಹೆಸರನ್ನು ಬದಲಿಸಿಕೊಂಡು ರಾಯಬಾಗ ಎಂತಲೂ ತನ್ನ ಹೆಸರನ್ನ ಗುರುತಿಸಿಕೊಂಡಿದೆ.

ಭೌಗೋಳಿಕ ಪರಿಸರ :

ಬೆಳಗಾವಿ ಜಿಲ್ಲೆಯಲ್ಲಿ ರಾಯಬಾಗವು ವಿಶಿಷ್ಠ ಭೌಗೋಳಿಕ ಮತ್ತು ಪ್ರಾಕೃತಿಕ ಲಕ್ಷಣವನ್ನು ಒಳಗೊಂಡ ತಾಲೂಕು ಕೇಂದ್ರವಾದ ಪಟ್ಟಣವಾಗಿದೆ. ರಾಯಬಾಗ ಪಟ್ಟಣವನ್ನು ಆಡಳಿತದ ಅನೂಕೂಲಕ್ಕಾಗಿ ಎರಡು ವಲಯಗಳನ್ನಾಗಿ ಮಾಡಲಾಗಿದೆ. ರಾಯಬಾಗ ತಾಲೂಕದ ಪೂರ್ವ ದಿಕ್ಕಿನಲ್ಲಿ ಜಮಖಂಡಿ ಮತ್ತು ಮುಧೋಳ ತಾಲೂಕುಗಳಿದ್ದು ಪಶ್ಚಿಮಕ್ಕೆ ಚಿಕ್ಕೋಡಿ ತಾಲ್ಲೂಕು ದಕ್ಷಿಣಕ್ಕೆ ಗೋಕಾಕ ತಾಲೂಕು ಸುತ್ತುವರಿದಿವೆ. ಈ ತಾಲೂಕಿನಲ್ಲಿ ಒಟ್ಟು ೫೩ ಗ್ರಾಮಗಳು ಇರುತ್ತವೆ. ಈ ಪ್ರದೇಶದ ಒಟ್ಟು ವಿಸ್ತೀರ್ಣ ೯೫೮೭೪ ಚ.ಕಿ.ಮಿ ಭೂವಿಸ್ತೀರ್ಣತೆಯನ್ನು ಹೊಂದಿದೆ. ೨೦೦೧ ಜನಗಣಿತಿಯ ಪ್ರಕಾರ ೩,೪೭,೫೩೭ ಜನಸಂಖ್ಯೆಯನ್ನು ಹೊಂದೆದೆ. ಈ ಪ್ರದೇಶವು ಸಮಶೀತೋಷ್ಣ ವಾತವರಣದಿಂದ ಕೂಡಿದೆ. ಇಲ್ಲಿಯ ಮಣ್ಣು ಕೆಂಪುರ ಹಾಗೂ ಕಪ್ಪು ಮಿಶ್ರೀತ ಮಣ್ಣಿನಿಂದ ಕೂಡಿದ ಭೂಮಿ ಕಂಡು ಬರುತ್ತದೆ. ವಾರ್ಷಿಕ ಸರಾಸರಿ ೪೪೬ ಮಿ.ಮಿ ಮಳೆ ಆಗುತ್ತದೆ. ೫೯೧೧ ಹೇಕ್ಟೆರ್ ಪ್ರದೇಶವು ನೀರಾವರಿಯಿಂದ ಅವೃತಗೊಂಡಿದೆ ಇನ್ನುಳಿದ ೩೫೯೬೩ ಘುಂಟೆ ಅರಣ್ಯ ಪ್ರದೇಶವನ್ನು ಒಳಗೊಂಡಿದೆ. ಇಲ್ಲಿಯ ಪ್ರಮುಖ ಬೆಳೆಗಳು ಕಬ್ಬು, ಗೋದಿನಜೋಳ, ಶೇಂಗಾ, ಕಡಲೆ, ಹತ್ತಿ, ಸೊಯಾಬಿನ್ ಮುಖ್ಯ ಕೃಷಿ ಬೆಳೆಗಳಾಗಿವೆ. ಎಲೆ, ದ್ರಾಕ್ಷಿ, ಬಾಳೆಹಣ್ಣು ಮುಂತಾದವುಗಳು ಪ್ರಮುಖ

ತೋಟಗಾರಿಕಾ ಬೆಳೆಗಳಾಗಿವೆ. ಈ ಪ್ರದೇಶದ ಉತ್ತರ ಭಾಗದಲ್ಲಿ ಕೃಷ್ಣಾ ನದಿ ಹರಿದಿದೆ ಜೊತೆಗೆ ಮಹಾರಾಷ್ಟ್ರ, ಗೋವಾ ರಾಜ್ಯಗಳ ಸಂಪರ್ಕ ಹೊಂದಿದ ರೈಲ್ವೆ ಮಾರ್ಗ ಈ ತಾಲೂಕಿಗಿದೆ. ಒಟ್ಟು ೩೩ ಗ್ರಾಮ ಪಂಚಾಯಿತಿಗಳನ್ನು ಒಳಗೊಂಡ ಈ ತಾಲೂಕು ಎರಡು ಪುರಸಭೆ ಮತ್ತು ಎರಡು ಹೋಬಳಿಗಳನ್ನು ಒಳಗೊಂಡ ಪ್ರದೇಶವಾಗಿದೆ. ಮರಾಠರ ಹಾಗೂ ಮೋಘಲರ ನೇತೃತ್ವದಲ್ಲಿ ಈ ಪ್ರದೇಶವು ಲೂಟಿಯಾಗಿದ್ದನ್ನು ಗಮನಿಸಿದರೆ, ಈ ಪ್ರದೇಶವು ಸಹ ಆರ್ಥಿಕವಾಗಿ ಸಂಪದ್ಭರಿತ ಪ್ರದೇಶವಾಗೀತ್ತೆಂದು ಅರ್ಥೈಸಲಾಗಿದೆ.

ರಾಯಬಾಗವು ಪ್ರಕೃತಿಕವಾಗಿ ಬೆಳಗಾವಿ ಜಿಲ್ಲೆಯ ಉತ್ತರ ಘಟ್ಟದಲ್ಲಿ ಏರು ತಗ್ಗುಗಳಿಂದ ಕೂಡಿದೆ ಹಾಗೂ ಕೆಲವು ಭಾಗ ಸಮಾನಾಂತರವಾಗಿರುವುದು ತಾಲೂಕಿನ ಬಹುಬಾಗ ಕಪ್ಪು ನೆಲವಾಗಿದ್ದು ಅಲ್ಲಲ್ಲಿ ಗಡಸು ಭೂಮಿ ಇದ್ದು ನೀರಿನ ತೇವಾಂಶ ಹೆಚ್ಚಾಗಿ ಹಿಡಿಡುವುದಿಲ್ಲ ರಾಯಬಾಗ ತಾಲೂಕು ನಾಲ್ಕನೇಯ ಮೂರು ಭಾಗವು ನೀರಾವರಿ ಪ್ರದೇಶವಿದೆ. ಇಲ್ಲ ಹಿಂದುಳಿದ ಜನಾಂಗದವರು ಅಧಿಕವಾಗಿದ್ದಾರೆ.

೧೯೫೬ ಕ್ಕಿಂತ ಪೂರ್ವದಲ್ಲಿ ಈ ಪ್ರದೇಶವು ಕೊಲ್ಹಾಪೂರ ಸಂಸ್ಥಾನದಲೂ ಮಹಲ್ ಆಗಿತ್ತು, ತದನಂತರ ಅದರಿಂದ ಬಿಡಗಡೆ ಹೊಂದಿ ಬೆಳಗಾವಿ ಜಿಲ್ಲೆಯಲ್ಲಿ ವಿಲೀನವಾಯಿತು. ಇಂದು ರಾಯಬಾಗವು ಜ್ಞಾನ ಪ್ರಸಾರಕ್ಕಾಗಿ ತನ್ನದೇ ಆದ ವೈಶಿಷ್ಠತೆಯನ್ನು ಉಳಿಸಿಕೊಂಡ ಖ್ಯಾತೆಗೆ ಪಾತ್ರವಾಗಿದೆ.

ಐತಿಹಾಸಿಕ ಹಿನ್ನೆಲೆ :

ರಾಯಬಾಗವು ಐತಿಹಾಸಿಕವಾಗಿ ಹಲವಾರು ಅಂಶಗಳನ್ನು ಒಳಗೊಂಡ ಪ್ರದೇಶವಾಗಿದ್ದು ರಾಯಬಾಗದ ತೃಟಿತ ಶಾಸನದಲ್ಲಿ "ಪ್ರಾಯಗ ಬಡಗಲು ತೆಂಕಲು ಬಾಗೆ" ಎಂದು ಈ ಗ್ರಾಮವನ್ನು ಕರೆದಿದ್ದಾರೆ. ಇದು ೧೨ ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಪ್ರಯಾಗದಂತೆ ಬಾಗೆ ನಾಡು ಕೂಡ ಆ ಸಂದರ್ಭದ ಅಥವಾ ಕಾಲದ ಪ್ರಸಿದ್ದ ಕ್ಷೇತ್ರವಾಗಿರುವ ಸಾಧ್ಯತೆ ಇದೆ. ಭಾರತದ ಚರಿತ್ರೆಯ ಆರಾಂಭದಲ್ಲಿ ಮೌರ್ಯರು ತಮ್ಮದೇ ಆದ ಆಡಳಿತವನ್ನು ನೆಡೆಸಿಕೊಂಡು ಬಂದಿದ್ದಾರೆ. ಆ ಕಾಲದಿಂದಲೆ ಕೂಹೂಂಡಿ ಮೂಸಾಸಿರದ ಒಂದು ಆಡಳಿತ ವಿಭಾಗ ಕೇಂದ್ರವಾದ ಬಾಗೆ ನಾಡನ್ನು ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರ, ಮಾಂಡಲಿಕರು, ಸೌದತ್ತಿ ರಟ್ಟರು. ಕೊಲ್ಹಾಪೂರದ ಶಿಲಾಹಾರರು, ದೇವಗಿರಿಯ ಯಾದವರು. ಸೇವುಣರು, ವಿಜಾಪೂರದ ಆದಿಲ್ ಶಾಹಿಗಳು, ಹಾಗೂ ಮರಾಠ ಪೇಶ್ವಗಳು ಈ ಪ್ರಾದೇಶವನ್ನು

ಆಳಿದ್ದಾರೆ. ರಾಷ್ಟ್ರಕುಟರು ಹಾಗೂ ಕಲ್ಯಾಣ ಚಾಲೂಕ್ಯರು ಮತ್ತು ಕಲಚೂರಿಗೆಳಿಗೆ ಮಾಂಡಲಿಕರಾಗಿ ಕೆಲವು ಕಾಲ ಸ್ವತಂತ್ರರಾಗಿ ಸುದೀರ್ಘ ೩೦೦ ವರ್ಷಗಳ ವರೆಗೆ ಕೂಹೂಂಡಿ ಮೂರು ಸಾಸಿರ ನಾಡನ್ನು ಆಳಿದ ಶ್ರೇಯಸ್ಸು ಸೌದತ್ತಿ ರಟ್ಟರಿಗೆ ಸಿಗುತ್ತದೆ. ಅವುಗಳಲ್ಲಿ ಪ್ರಮುಖ ಆಡಳಿತ ಕೇಂದ್ರವಾಗಿ ರಾಯಬಾಗವು ಒಂದಾಗಿತ್ತು. ರಾಯಬಾಗದಲ್ಲಿ ರಾಷ್ಟ್ರಕೂಟರ ಹಾಗೂ ಚಾಲೂಕ್ಯರ ಶಾಸನಗಳ ಉಲ್ಲೇಖ ನಮಗೆ ದೂರೆತಿಲ್ಲ ಆದರೆ, ಕಲ್ಯಾಣ ಚಾಲುಕ್ಯರ ಪ್ರಸಿದ್ದ ದೊರೆ ಆರನೇ ವಿಕ್ರಮಾಧಿತ್ಯನ ವಿಕ್ರಮ ಸಂವತ್ಸರದ ಪ್ರಾರಂಭಿಕ ಕಾಲದ ಶಾಸನವೊಂದು ಇದೇ ರಾಯಬಾಗದಲ್ಲಿದೆ. ಈ ಶಾಸನದಲ್ಲಿ ಗಜ ಸೈನ್ಯದ ಅಧಿಕಾರಿ ಚಂಡರಸನು ಉತ್ತರ ಭಾರತದ ಪಾರಮಾರರದೊರೆ ಭೋಜನ ಗಜ ಪೈನ್ಯವನ್ನು ನಾಶ ಮಾಡಿದ ಸಂಗತಿಯ ಬಗೆಗೆ ಹೊಸ ಬೆಳಕನ್ನು ಚಲ್ಲುತ್ತದೆ ಕ್ರಿ.ಶ. ೧೧೮೯ ರಲ್ಲಿ ರಾಯಬಾಗ ವರದಿಯಲ್ಲಿ ಕಲ್ಯಾಣ ಚಾಲುಕ್ಯರ ಪ್ರಸಿದ್ದದೊರೆ ವಿಕ್ರಮಾದಿತ್ಯನು ಮಾಳವ ಪ್ರಾಂತ್ಯದ ಸೈನ್ಯದ ಮೇಲೆ ದಾಳಿ ಮಾಡಿ ಆ ಸೈನ್ಯವನ್ನು ಸೋಲಿಸಿ ಪಾರಮಾರರ ರಾಜಧಾನಿಯಾದ 'ಧಾರ' ಪಟ್ಟಮಾವನ್ನು ಸುಟ್ಟು ಅಲ್ಲಿ ವಿಜಯ ಸ್ಥಂಭವನ್ನು ನೆಟ್ಟ ಬಗೆಯನ್ನು ತಿಳಿಸುತ್ತದೆ.

ರಾಯಬಾಗ ಪ್ರದೇಶವನ್ನು ಸದೀರ್ಘವಾಗಿ ಆಳಿದ ಸೌದತ್ತಿಯ ರಟ್ಟರು ೧೨ ನೇ ಶತಮಾನದಲ್ಲಿ ರಾಯಬಾಗ ತಾಲೂಕಿನ ಕಂಕಣವಾಡಿಯನ್ನು ಉಪರಾಜ್ಯವನ್ನಾಗಿ ಮಾಡಿಕೊಂಡಿದ್ದರು. ರಟ್ಟರ ೪ ನೇ ಕಾರ್ತಿ ವೀರ್ಯನ ಅಧಿನದಲ್ಲಿ ವೈಜರಸನೆಂಬ ವ್ಯಕ್ತಿ ಇದನ್ನು ಆಳುತ್ತಿದ್ದನು. ರಟ್ಟರು ತರುವಾಯ ಈ ಪ್ರದೇಶ ಕೊಲ್ಲಾಪೂರದ ಶಿಲಾಹಾರರ ಆಡಳಿತಕ್ಕೆ ಒಳಪಟ್ಟಿತ್ತು ಶಿಲಾಹಾರ ಗಂಡರಾಧಿತ್ಯನ ಸಾಮಾಂತ ನಿಂಬಣ್ಣಯ್ಯ ಈ ಭಾಗವನ್ನು ಆಳುತ್ತಿದ್ದನು ಆತನಿಂದಲೇ ಈ ಭಾಗದಲ್ಲಿ ಜೈನಧರ್ಮ ಇಷ್ಟಂದು ಪ್ರಮಾಣದಲ್ಲಿ ಬೆಳೆಯಲು ಕಾರಣವಾಯಿತು. ಆತನ ಕಾಲದಲ್ಲಿ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಮಾಂಡಲಿಕರಾಗಿದ್ದ ಕೊಲ್ಲಾಪುರದ ಶಿಲಾಹಾರರ ಸಾಮಾಂತನಂದ ಈ ನಿಂಬ ದೇವನ ಸಹೋದರಿ ಕರ್ನಾದೇವಿ ಮಹಾಮಂಡಳೇಶ್ವರ ಗಂಡರಾದಿತ್ಯನ ಪತ್ನಿ ಈತನಿಗೂ ಬಿಜ್ಜಳಿನಿಗೂ ಯುದ್ದ ನೆಡೆದು ಈತ ಕೊನೆಗೆ ಸಲ್ಲೇಖನ ವ್ರತ ಪಾಲಿಸಿ ಜೀನನಾದ"೭ ಈ ವಿಷಯ 'ನಿಂಬ' ಸಾಮಾಂತ ಚರಿತೆಯಿಂದ ತಿಳಿಯುತ್ತದೆ.

ಈ ಮೇಲಿನ ಆಳರಸರ ತರುವಾಯ ಕೆಲ ಕಾಲ ಮುಸ್ಲಿಂರ ಆಡಳಿತಕ್ಕೆ ಈ ಪ್ರದೇಶವು ವಿಜಾಪುರದ ಆದಿಲ್ ಶಾಹಿ ಈ ಪ್ರದೇಶಕ್ಕೆ ಕಿಶೋರಖಾನ ಎಂಬ ವ್ಯಕ್ತಿಯನ್ನು ಅಧಿಕಾರಿಯನ್ನಾಗಿ ನೇಮಿಸುವುದರ ಮೂಲಕ ತಮ್ಮ ಆಡಳಿತವನ್ನು ವಿಸ್ತರಿಸಿಕೊಂಡಿರುವ ಬಗ್ಗೆ ಉಲ್ಲೇಖ ದೊರೆಯುತ್ತದೆ. ಮುಂದೆ ಕೆಲ ಕಾಲ ವಿಜಯ ನಗರದ ಆಡಳಿತಕ್ಕೂ ಈ ರಾಯಬಾಗವು

ಒಳಪಟ್ಟಿತ್ತು. ಕೃಷ್ಣ ದೇವರಾಯನ ಸೈನ್ಯಧಿಕಾರಿಯಾದ ಬಾಗೆಯ ಬೋಮ್ಮಣ್ಣ ನಾಯಕ ಈ ಪ್ರದೇಶವನ್ನು ಆಳುತ್ತಿದ್ದನು. ***"A Kanarese inscription deted 1514-1515 (S-1436) at Ugargol Three miles south-east of soundatti mentions the Name of Bommappa of Bagi that is Rayabag as one Krishna Ray's military officer or Naik"*** ೮ ಎಂದು ಉಲ್ಲೇಖಿಸಲಾಗಿದೆ.

ವಿಜಾಪೂರ ಆದಿಲಶಾಹಿಗಳ ಆಡಳಿತದ ನಂತರ ರಾಯಬಾಗ ಲೂಟಿಗೆ ಒಳಗಾಯಿತು. ಕ್ರಿ.ಶ ೧೬೩೫ ರಲ್ಲಿ ಮೊಘಲರ ಸೈನ್ಯಾಧಿಕಾರಿಯಾದ ಹಸಬಖಾನ ರಾಯಬಾಗವನ್ನು ಆದಿಲ್ ಶಾಹಿಗಳಿಂದ ವಶಪಡಿಸಿಕೊಡನು. ಆ ಒಂದು ಸಮಯಲ್ಲಿ ಅಲ್ಲಿಯೂ ಜಮೀಯಾ ಮಸೀದಿ ತಲೆ ಎತ್ತಿ ನಿಂತಿತು. ಈ ಒಂದು ಮಸೀದಿಯನ್ನು ಅಮೀನ್ ಮುಸ್ತಫ್ ಖಾನ್ ಕಟ್ಟಿಸಿರುವುದರಿಂದ ಆ ಸಮಯದಲ್ಲೂ ರಾಯಬಾಗಕ್ಕೆ ಮುಸ್ತಫ್ ಬಾಗ ಎಂದು ಕರೆಯಲಾಗುತ್ತಿತ್ತು. ತದನಂತರ ರಾಯಬಾಗವು ಸುಮಾರು ೨೦೦ ವರ್ಷಗಳಿಗಿಂತಲೂ ಹೆಚ್ಚಿಗೆ ಮರಾಠರ ವಶದಲ್ಲಿತ್ತು. ಮರಾಠರ ಆಡಳಿತ ಭಾಗವಾದ ಕೊಲ್ಲಾಪೂರ ಸಂಸ್ಥಾನಿಕರು ಆಂಗ್ಲರ ಆಡಳಿತ ಇದ್ದಾಗಲೂ ಸಹ ರಾಯಬಾಗದ ಮೇಲೆ ಆಡಳಿತವನ್ನು ಚಲಾಯಿಸುತ್ತಿದ್ದರು. ಇದಕ್ಕೆ ಕೊಲ್ಲಾಪೂರ ಸಂಸ್ಥಾನಿಕರು ಕಟ್ಟಿದ ಬೇಸಿಗೆ ಅರಮನೆಯೇ ಸಾಕ್ಷಿಯಾಗಿದೆ.

ಹೀಗೆ, ಹತ್ತು ಹಲವು ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡ ರಾಯಬಾಗವು ಕಲ್ಯಾಣರ ಚಾಲುಕ್ಯಕರ ಕಾಲದಿಂದ ಚಾಲುಕ್ಯರ ಸಾಮಾಂತರ ಅರಸರಾದ ಸೌದತ್ತಿಯ ರಟ್ಟರ ಆಡಳಿತಕ್ಕೆ ಒಳಪಟ್ಟು ವಿಜಾಪೂರ ಆದಿಲ್ ಶಾಹಿಗಳ ಆಡಳಿತ ಅಧೀನದಲ್ಲಿ ಮರಾಠರ ಸಾಮ್ರಾಜ್ಯದ ಅದೀನ ಆಡಳಿತಕ್ಕೆ ಒಳಪಟ್ಟು ಪ್ರದೇಶ ರಾಯಬಾಗವಾಗಿದೆ. ಕವಿ ರಾಜಾಧಿತ್ಯನನ್ನ ಕನ್ನಡ ನಾಡಿಗೆ ಕೊಟ್ಟ ಶ್ರೇಯಸ್ಸು ಈ ಪ್ರದೇಶಕ್ಕೆ ರಾಯಬಾಗಕ್ಕೆ ಸಲ್ಲೂತ್ತದೆ. ಜೊತೆಗೆ ಹಲವು ಸಮಾದಾಯಗಳ ಸಾಮರಸ್ಯ ಬಾಂಧವ್ಯಗಳನ್ನು ಒಳಗೊಂಡ ಈ ಪ್ರದೇಶದಲ್ಲಿ ಹಲವು ದೇವಾಲಯಗಳು ಬಸದಿಗಳು, ಮೂರ್ತಿಗಳು, ಧಾರ್ಮಿಕತೆಯ ಮಹನ್ನತಿಯನ್ನು ಎತ್ತಿ ತೋರಿಸುತ್ತವೆ. ಈ ಹಿನ್ನೆಲೆಯಲ್ಲಿ ಒಟ್ಟು ಐತಿಹಾಸಿಕ ಮಹತ್ವವನ್ನು ಅರಿಯಲಾಗಿದೆ.

ಅಡಿ ಟಿಪ್ಪಣಿಗಳು

೧. ಡಾ .ಪಿ. ಜಿ ಕೆಂಪಣ್ಣವರ *ಪ್ರಗತಿ ಮತ್ತು ಜಿನ ವಿಜಯ ಪತ್ರಿಕೆ*, (ಡಿಸೆಂಬರು, ಜನೇವರಿ ೨೦೦೮-೦೯) ಪ್ರಟ ಸಂಖ್ಯೆ-೮

೨. ಆರ್, ನರಸಿಂಹಾಚಾರ್ಯ. *ಕರ್ನಾಟಕ ಕವಿ ಚರಿತೆ*, (ಸಂಪುಟ-೧, ಕನ್ನಡ ಸಾಹಿತ್ಯ ಪರಿಷತ), ಬೆಂಗಳೂರು. ಪುಟ ಸಂಖ್ಯೆ-೩೩೬

೩. ಅದೇ ಪುಟ, - ೩೩೬

೪. ಶಿವಾನಂದ .ಬ. ಮೂಲಿಮನಿ. *ಬೆಳಗಾವಿ ಸಿರಿ*, (ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ), ಬೆಂಗಳೂರ ಪು.ಸಂ ೬೫

೫. ಎಂ.ಮರಿಯಪ್ಪ ಭಟ್ಟ *'ರಾಜಾಧಿತ್ಯನ ವ್ಯವಹಾರ ಗಣಿತ'*, (ಕೃತಿಯ ಮುನ್ನುಡಿ) ಪುಟ -೨

೬. ಕೆಂಚಪ್ಪಾ. ಪೂಜೇರಿ *'ರಾಯಬಾಗದ ಹಿರಿಯ ನಾಗರಿಕರು'*

೭. ಶೋಭಾ ಎಸ್.ಕೊಕಟನೂರ *ಬಾಗೆ ಪರಿಸರದ ಸಾಹಿತ್ಯ*. (ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ), ಕನ್ನಡ ವಿಶ್ವ ವಿದ್ಯಾಲಯ, ಹಂಪಿ. (೨೦೦೮) ಪುಟ ಸಂಖ್ಯೆ – ೦೫

೮. Jems m. kempbel, *Gazitair of India, (Belgaum) Page No 367.*

ಅಧ್ಯಾಯ – ೩

ರಾಯಬಾಗದ ದೇವಾಲಯಗಳು

ರಾಯಬಾಗದ ದೇವಾಲಯಗಳು :

ದೇವಾಲಯಗಳು ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಕೈಗನ್ನಡಿಗಳಾಗಿವೆ. ದೇವಾಲಯಗಳಿಂದ ಇಂದಿಗೂ ಧರ್ಮ,ಕಲೆ,ವಾಸ್ತು,ಶಿಲ್ಪ ಮುಂತಾದವುಗಳು ಸಂಪದ್ಭರಿತವಾಗಿರುವುದು ಅವಿಸ್ಮರಣೀಯ. ಮಾನವ ನಾಗರಿಕತೆಯ ಜೀವನದಲ್ಲಿ ಪ್ರಗತಿಯನ್ನೂ ಕಂಡುಕೊಂಡ ನಂತರ ನಿಸರ್ಗದ ಅಗೋಚರ ಶಕ್ತಿಗಳಿಗೆ ಮಾರು ಹೋಗಿ ನಿಸರ್ಗದಲ್ಲಿರುವ ಕಲ್ಲು, ಮಣ್ಣು, ಇಟ್ಟಿಗೆ, ಅಗ್ನಿ, ಮಳೆ, ಸಿಡಿಲು ಮುಂತಾದವುಗಳಿಗೆ ಒಂದು ರೂಪಕೊಟ್ಟು ಅವುಗಳಿಗೆ ದೇವರೆಂದು ಕರೆದುಕೊಂಡು, ಕಾಲಕ್ರಮೇಣ ಬದಲಾದಂತೆ ಆರೂಪಕ್ಕೊಂದು ಲೇಪನವನ್ನು ಮಾಡಿಕೊಂಡು ಮೂರ್ತಿಯನ್ನು ತಯಾರಿಸಲಿಕ್ಕೆ ಮುಂದೆ ಆ ಮೂರ್ತಿಗೆ ಗುಡಿ, ಗೋಪುರ, ಕಟ್ಟುವುದರ ಮೂಲಕ ದೇವಾಲಯಗಳ ನಿರ್ಮಾಣ ಕಾರ್ಯ ಪ್ರಾರಂಭವಾಯಿತು.

ಕ್ರಿ.ಶ.ಪೂರ್ವದಲ್ಲಿ ಮಾನವ ದೇವಾಲಯಗಳ ನಿರ್ಮಾಣದ ಕಾರ್ಯ ಕರಗತ ಮಾಡಿಕೊಂಡಿದ್ದ ದೇವಾಲಯಗಳು ಒಂದು ಸಂಸ್ಕೃತಿಯ ಪ್ರತಿಬಿಂಬವಾಗಿದ್ದು ಹಲವು ವ್ಯಕ್ತಿಗಳು ಹಲವು ಸಮೂದಾಯಗಳು ತನ್ನ ಹೊಸ ಜೀವನದಲ್ಲಿ ಹೊಸತನ ಸುಖ,ಶಾಂತಿ,ಸಮೃದ್ಧಿ ವಂಶೋದ್ಧಾರ ಇಷ್ಟಾರ್ಥ ಸಿದ್ಧಿ ಮುಂತಾದವುಗಳನ್ನು ಕಂಡುಕೊಳ್ಳಲು ದೇವರಲ್ಲಿ ಮೊರೆ ಹೋಗಿ ದೇವಾಲಯಗಳನ್ನು ಕಟ್ಟಲಿಕ್ಕೆ ಪ್ರಾರಂಭಿಸಿದ. ಮುಂದೆ ದೇವಾಲಯ ನಿರ್ಮಿಸಿದ ಫಲವಾಗಿ ಶಾಸನಗಳನ್ನು ಬರೆಯಿಸಿದ. ಈ ಕಾರ್ಯವು ಧಾರ್ಮಿಕ ಜೀವನದಲ್ಲಿ ಅದು ಶ್ರೇಷ್ಠವಾದ ಸೇವೆಯೆಂದು ಪರಿಗಣಿಸಲಾಗುತ್ತಿದೆ.

ಜನರು ತಮ್ಮ ವಯಕ್ತಿಕ ಬದುಕನ್ನು ಪ್ರಭಾವಿತಗೊಳಿಸಿಕೊಳ್ಳಲು ದೇವರಿಗೆ ಮತ್ತು ದೇವಾಲಯಗಳೊಂದಿಗೆ ಒಂದು ಆತ್ಮೀಯ ಸಂಬಂಧವನ್ನು ಉಳಿಸಿಕೊಂಡ ಮುಲಕವಾಗಿ ದೇವಾಲಯಗಳು ಧಾರ್ಮಿಕ ಕೇಂದ್ರವಾಗಿದ್ದರೂ ಸಹ ಅವು ನಡೆಸುತ್ತಿರುವ ಸಮಾಜ ಮುಖಿ ಕಾರ್ಯಗಳಿಂದಾಗಿ ಜನರನ್ನು ಹತ್ತಿರ ಸೆಳೆಯುತ್ತವೆ. ಹೀಗಾಗಿ ಈ ಸೆಳೆಯುವಿಕೆಯಿಂದಾಗಿ ದೇವರು ಮತ್ತು ದೇವಾಲಯ ಜನತೆಯಲ್ಲಿ ಒಂದು ಪರಸ್ಪರವಾದ ನಂಬಿಕೆಯನ್ನು ಹೊಂದಿರುವುದರ ಮೂಲಕ ಆಶ್ರಯವನ್ನು ಪಡೆದುಕೊಂಡವು. “ಒಂದು ಸಮಜದ ಎಲ್ಲ ವರ್ಗದ ಜನರನ್ನು

ಬೆಸೆಯುವ ಏಕಸೂತ್ರವಾದ ದೇವಾಲಯಗಳು ಆ ಎಲ್ಲಾ ಜನರನ್ನು ನಿಯಂತ್ರಿಸುವ ಏಕೈಕ ಶಕ್ತಿಯೂ ಆಗಿ ಮತ್ತೊಂದು ಮುಖವನ್ನು ಪಡೆದವು."೧ ಹೀಗಾಗಿ ದೇವಾಲಯಗಳು ಸಮಾಜದಲ್ಲಿ ಅವಶ್ಯಕತೆಗಳಾಗಿ ಕಂಡುಬಂದಿವೆ.

"ಒಂದು ಸಮಾಜವು ಭದ್ರವಾಗಿ ನಿಲ್ಲಲು ಶಾಂತಿ ಸುವ್ಯವಸ್ಥೆಯೇ ಮುಖ್ಯವಾದದು. ಈ ಶಾಂತಿ ಸುವ್ಯವಸ್ಥೆಯೆ ಆ ಸಮಾಜದ ಜನತೆಯ ನಡುವಿನ ಪರಸ್ಪರ ಗೌರವ ಹೊಂದಾಣಿಕೆ ನಿಯಮಗಳ ಪಾಲನೆ ಮುಂತಾದ ಸಾಮಾಜಿಕ ರೀತಿ ನೀತಿಗಳ ಅನುಸರಣೆಯಿಂದ ಪ್ರಾಪ್ತವಾಗುತ್ತದೆ, ಅಂತೆಯೇ ಇವುಗಳೆಲ್ಲವನ್ನು ಅನುಸರಿಸುವಂತೆ ಮಾಡುವ ನಿಯಂತ್ರಣವೊಂದು ಸಮಾಜದ ಮೇಲಿದ್ದಾಗ ಇದು ಸಾಧಿತವಾವುದು. ಭಾರತಿಯ ಸಾಮಾಜ ವ್ಯವಸ್ಥೆಯಲ್ಲಿ ಹೀಗೆ ಎಲ್ಲರನ್ನು ನಿಯಂತ್ರಿಸಬಲ್ಲ ಶಕ್ತಿ ಎಂದರೆ ದೇವರು/ ದೇವಾಲಯಗಳಾಗಿವೆ." ೨

ಮಾನವರು ಧರ್ಮವಂತರಾಗಿ ಬಾಳಲು, ನೀತಿವಂತರಾಗಿ ಬದುಕಲು ಪ್ರಮುಖ ಕಾರಣವೇ ದೇವರ ಭಯ ಇದ್ದಕ್ಕೆ ಆತನ ಪಾಪ ಪುಣ್ಯಗಳ ಭೀತಿ ಕಾರಣವಾಗಿವೆ. ಪ್ರಸ್ತುತ ಸಮಾಜದಲ್ಲಿ ಕೆಲವು ಗ್ರಾಮೀಣ ಪ್ರದೇಶದಲ್ಲಿ ಯಾರಾದಾರೂ ನೀತಿ ತಪ್ಪಿ ನೆಡೆದರೆ, ಅಥವಾ ಅಧರ್ಮ ಕಾರ್ಯಕ್ಕೆ ಇಳಿದರೆ, ಅಂಥವರಿಗೆ ಶಿಕ್ಷೆಯನ್ನು ದೇವರ ಸಮ್ಮುಖದಲ್ಲಿ ದೇವಾಲಯದ ಆವರಣದಲ್ಲಿ ದೇವರ ಸಾಕ್ಷಿಯಾಗಿ ನೆಡೆಸುತ್ತಾರೆ. ಅಥವಾ ವಿಧಿಸುತ್ತಾರೆ. ಮತ್ತು ತಪ್ಪು ಮಾಡಿದ ವ್ಯಕ್ತಿಗೆ ದಂಡವನ್ನು ವಿಧಿಸಿ ಆ ದೇವರು ಅಥವಾ ದೇವಾಲಯಕ್ಕೆ ಕಾಣಿಕೆಯಾಗಿ ಅರ್ಪಿಸುತ್ತಾರೆ. ಹೀಗಾಗಿ ದೈವತ್ವದ ಬಗ್ಗೆ ಭಯ ಮತ್ತು ಭಕ್ತಿ ಇವೆರಡನ್ನು ಜನರು ಹೊಂದಿದಾರೆ. ಜೊತೆಗೆ ದೇವರ ಹೆಸರಿನಲ್ಲಿ ನೆಡೆಯುವ ನೇಮಕ್ಕೆ ಜನರು ಬದ್ಧರಾಗಿರುತ್ತಾರೆ. ಹೀಗಿರುವುರಿಂದ ಸಮಾಜದಲ್ಲಿ ದೇವಾಲಯಗಳು, ದೇವರು ಹೆಸರಿನಿಂದ ಧರ್ಮ, ನ್ಯಾಯ ನೀತಿ ಕಾಪಾಡಲು ಉತ್ತಮ ಮಾಧ್ಯಮಗಳಾಗಿ ಇಂದು ಕಂಡು ಬರುತ್ತವೆ.

ದೈವತ್ವಕ್ಕೆ ಸಂಬಂಧಿಸಿದ ವಿಷಯಗಳು ಅವು ಜನರ ವೈಯಕ್ತಿಕ ಆಚರಣೆಗಳಾಗಿದ್ದು ತದನಂತರ ಸಾಮಾಜಿಕವಾಗಿ ಮಾನ್ಯವಾಗಿ ವೃಷ್ಠಯಿಂದ ಸಮಷ್ಠಿಯ ಕಡೆಗೆ ವಿಭಿನ್ನತೆಯನ್ನು ಪಡೆದುಕೊಂಡು ಕಾರ್ಯರೂಪಕ್ಕೆ ಬಂದವು. ಅಲೌಕಿಕ ಜೀವನದಲ್ಲಿ ಮಾನವ ಏನೇ ಕಾರ್ಯ ಮಾಡಿದರು ಅದರ ಅಂತಿದು ಗುರಿ ದೇವರನ್ನು ಕಾಣುವುದಾಗಿರುತ್ತದೆ. ಹೀಗಾಗಿ ವ್ಯಕ್ತಿ ಸಮಷ್ಠಿಯಿಂದ ಧಾರ್ಮಿಕತೆಯ ನೆಲೆಯನ್ನು ಭದ್ರ ಪಡಿಸಿಕೊಳ್ಳಲು ದೇವರು ಮತ್ತು ದೇವಾಲಯಗಳು ಸಾರ್ವತ್ರಿಕವಾಗಿ ಮಾನ್ಯವಾದ ಧಾರ್ಮಿಕ ಸಂಸ್ಥೆಗಳಾಗಿವೆ. ಜನತೆ ದೇವರನ್ನು ದೋಷ ರಹಿತ, ನೀತಿ ರಕ್ಷಕ, ಕಷ್ಟಗಳನ್ನು ಪಾರು ಮಾಡುವ ಗುಣಗಳನ್ನು ದೇವನಲ್ಲಿ ಅಥವಾ

ಆತನ ಧರ್ಮದಲ್ಲಿ ಕಾಣುತ್ತಾನೆ. ಹೀಗಾಗಿ ಮಾನವನಿಗೆ ದೇವರಲ್ಲಿ ಅಪಾರವಾದ ಶ್ರದ್ದೆ ನಂಬಿಕೆ ಭಯ, ಭಕ್ತಿ ಮುಖ್ಯವಾಗಿ ಕಂಡು ಬರುತ್ತವೆ.

"ಎಲ್ಲರನ್ನು ಒಂದೇ ನೆರಳಲ್ಲಿ ನಿಲ್ಲಿಸಬಲ್ಲ ಏಕೈಕ ಛತ್ರ 'ದೇವರು' ಮತ್ತು ಅವನ ಆವಾಸ ಸ್ಥಾನವಾದ 'ದೇವಾಲಯ'ಗಳು ಒಂದು ಧಾರ್ಮಿಕ ಕೇಂದ್ರವು ಸಾಮಾಜಿಕ ಸಂಸ್ಥೆಯ ಆಗುವುದರಿಂದಿಗೆ ದೇವರು ದೇವಾಲಯವು ನೀತಿ ನಿಯಮಗಳ ಮಾರ್ಗದರ್ಶಕನು ಆಗಿರುವುದು ನಮ್ಮ ಪರಂಪರೆಯ ಇತಿಹಾಸ. ಹೀಗೆ ಒಂದು ಸಮಾಜೋಧಾರ್ಮಿಕ ಸಂಸ್ಥೆಯಾದ ದೇವಾಲಯಗಳು ನೈತಿಕತೆಯ ರುವಾರಿಯೂ ಆದಾಗ ಸಮಾಜದಲ್ಲಿ ದೇವಾಲಯಗಳಿಗೆ ಅತ್ಯನ್ನತ ಸ್ಥಾನ ದೊರೆಯಿತು. ನೀತಿಯನ್ನು ಪಾಪಾಡುವ ದೈವದಿಂದಾಗಿ ದೇವಾಲಯಗಳ ನೈತಿಕ ಹೊಣೆ ಹೆಚ್ಚಾಯಿತು. ಈ ಕಾರಣವಾಗಿ ದೇವರು/ದೇವಾಲಯಗಳು ಜನತೆಗೆ ಬೇಕಾದವು." ೩

ದೇವಾಲಯಗಳ ನಿರ್ಮಾಣದ ಕಾರ್ಯದ ಹಿಂದೆ ಇನ್ನು ಕೆಲವು ಉದ್ದೇಶಗಳು ಅಡಕವಾಗಿವೆ. ದೇವಾಲಯಗಳ ನಿರ್ಮಾಣದಿಂದಾಗಿ ತಮ್ಮ ವಂಶಜರಿಗೂ ಮೋಕ್ಷ ಸಿಗುತ್ತದೆಂಬ ಪರಿಲ್ಪನೆಯ ನಂಬಿಕೆ ಹೆಚ್ಚಾಗಿ ಬೆಳೆದು ಬಂದಿತು. ಇವುಗಳ ಜೊತೆಗೆ ದೇವಾಲಯಗಳ ರಚೆನೆಗೆ ವಿಸ್ತಾರವಾಗಲು ಪ್ರಾಕೃತಿಕ ಸಾಮಾಗ್ರಿಗಳ ಅನೂಕೂಲ ಅಭಿವೃಚಿ ಪ್ರಭಲವಾದವು. ದೇವಾಲಯಗಳ ಶಾಶ್ವತವಾಗಿ ಈ ಧರೆಯ ಮೇಲೆ ಉಳಿಯಬೆಕೇಂಬ ಹಂಬಲಕ್ಕೆ ಸ್ಥಳ ಪುರಾಣಗಳು ಸಹಾಯಕವಾದ ಆಚರಣೆಯ ಅಂಶಗಳಾಗಿವೆ. ಕೆಲವು ಜನಪದರ ಹಿನ್ನೆಲೆಯಲ್ಲಿ ದೇವಾಲಯ ನಿರ್ಮಾಗೊಂಡರೆ ಪುರಾಣಗಳ ಹಿನ್ನೆಲೆಯಲ್ಲಿ ಮತ್ತಷ್ಟು ದೇವಾಲಯಗಳು ನಿರ್ಮಾಣಗೂಂಡಿವೆ. ವಾಸ್ತುಗ್ರಂಥವಾದ 'ಮಾನಸಾರ' ಪ್ರಕಾರ ಸಾಮಾನ್ಯವಾಗಿ ದೇವಾಲಯಗಳನ್ನು ಪವಿತ್ರ ಸ್ಥಳಗಳಲ್ಲಿ ಕಟ್ಟಿಸಬೇಕೆಂದು ತಿಳಿಸುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಏಳು ರೀತಿಯ ಸ್ಥಳಗಳಲ್ಲಿ ದೇವಾಲಯಗಳು ನಿರ್ಮಾಣವಾಗುತ್ತವೆ.

- ನದಿಗಳ ಪಕ್ಕದಲ್ಲಿ
- ಗುಡ್ಡ ಬೆಟ್ಟಗಳ ಹತ್ತಿರ ಅಥವಾ ತುತ್ತಮುದಿಯಲ್ಲಿ
- ಕೆರೆಯ ಪಕ್ಕದಲ್ಲಿ
- ಕೊಳಗಳ ಹತ್ತಿರದಲ್ಲಿ
- ಬಾವಿಗಳ ಬದಿಗಳಲ್ಲಿ ದೇವಾಲಯಗಳನ್ನು ಕಟ್ಟದ ಯೋಗ್ಯ ಸ್ಥಳವೆಂದು ಈ ವಾಸ್ತಗ್ರಂಥ ತಿಳಿಸುತ್ತದೆ.

ಈ ಹಿನ್ನೆಲೆಯಲ್ಲಿ ರಾಯಬಾಗ ಪ್ರದೇಶದ ಹಲವು ಸಮೂದಾಯಗಳ ದೇವಾಲಯಗಳು ಪ್ರಾಚೀನ ಮತ್ತು ಆಧುನಿಕ ಕಾಲದಲ್ಲಿ ತನ್ನದೇ ಆದ ಐತಿಹಾಸಿಕ ಮತ್ತು ಚಾರಿತ್ರಿಕ ಅಂಶಗಳಿಂದ ಕಂಡು ಬರುತ್ತವೆ. ಅವುಗಳನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ. ದೇವಾಲಯಗಳ ವಿವಿಧ ಮುಖಗಳ ವಿಶ್ಲೇಷಣೆಯು ಒಂದು ಕಾಲದ, ಒಂದು ಸಮೂದಾಯದ ಧಾರ್ಮಿಕ ರೂಪವನ್ನು ಸ್ಪಷ್ಟಪಡಿಸಿಕೊಳ್ಳಲು ಅನೂಕೂಲವಾಗಿದೆ. ರಾಯಬಾಗ ದೇವಾಲಯಗಳನ್ನು ಅಧ್ಯಯನದ ಅನೂಕೂಲಕ್ಕಾಗಿ ಐದು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

- **ಜೈನ ದೇವಾಲಯ ಅಥವಾ ಜಿನಾಲಯಗಳು**
- **ಶೈವ ದೇವಾಲಯಗಳು**
- **ಹಾಲುಮತ ಸಮೂದಾಯದ ದೇವಾಲಯಗಳು**
- **ವೈಷ್ಣವ ದೇವಾಲಯಗಳು**
- **ಇತರೆ ದೇವಾಲಯಗಳು**

ಹೀಗೆ ಐದು ಪ್ರಕಾರದ ದೇವಾಲಯಗಳು ಕಂಡು ಬರುತ್ತವೆ. ಈ ಪ್ರದೇಶದ ದೀರ್ಘಕಾಲದವರೆಗೆ ಅಂದರೆ ಕ್ರಿ .ಶ. ೯೭೩ ರಿಂದ ೧೧೮೯ ರ ವರೆಗೆ ಕಲ್ಯಾಣದ ಚಾಲುಕ್ಯರ ಆಳ್ವಿಕೆಗೆ ಒಳ ಪಟ್ಟಿತ್ತು, ಹೀಗಾಗಿ ಅವರ ವಾಸ್ತುಶಿಲ್ಪ ಶೈಲಿಯ ಹಲವು ದೇವಾಲಯಗಳು ಈ ಪ್ರದೇಶದಲ್ಲಿ ನಿರ್ಮಾಣವಾಗಿವೆ. ಅದಕ್ಕೆ ಸಾಕ್ಷಿ ಎಂಬಂತೆ ಇಲ್ಲಿಯ ಪ್ರಸಿದ್ಧ ದೇವಾಲಯಗಳಾದ ಸೋಮನಾಥ, ಸಿದ್ದೇಶ್ವರ ದೇವರ ವಿಗ್ರಹಗಳು ಚಾಲುಕ್ಯರ ಕಲೆಯ ಉತ್ಕಷ್ಠತೆಯನ್ನು ಎತ್ತಿ ತೋರಿಸುತ್ತವೆ.

ರಾಯಬಾಗ ಪ್ರದೇಶವು ಸೌದತ್ತಿಯ ರಟ್ಟರ ಆಳ್ವಿಕೆಯಲ್ಲಿ ಅನೇಕ ಜೀನಾಲಯಗಳ ನಿರ್ಮಾಣಕ್ಕೆ ಪ್ರಾರಂಭವಾಯಿತು. ಈ ಜೀನಾಲಯಗಳಲ್ಲಿ ಆದಿನಾಥ ಬಸದಿ, ಮಹಾವೀರ ಬಸದಿ, ಪ್ರಮುಕವಾದವುಗಳು. ಇವುಗಳೊಂದಿಗೆ ವೈಷ್ಣವ ಪಂಥಕ್ಕೆ ಸೇರಿದ ರಾಘವೆಂದ್ರ ಮಠ ,ವಿಠ್ಠಲ ಮಂದಿರ ,ಹನುಮಾನ ಮಂದಿರ, ನರಸಿಂಹ ದೇವಾಲಯ ಮುಂತಾದವುಗಳು ವೈಷ್ಣವ ಪಂಥದ ಪ್ರಮುಖ ದೇವಾಲಯಗಳಾಗಿವೆ. ಹಾಲುಮತ ಸಮುದಾಯಕ್ಕೆ ಸಂಬಂಧಿಸಿದಂತೆ ಶ್ರೀ ಏಡಿ ಮಾಯಕ್ಕ ದೇವಾಲಯ, ಬೀರಪ್ಪನ ದೇವಾಲಯ ಪ್ರಸಿದ್ಧವಾದವುಗಳು ಪ್ರಮುಖವಾಗಿದೆ.

"ಜೀನಧರ್ಮಾವಾಸಮಾದತ್ತವುಳ ವಿನಯದಾಗರ ಮಾದತ್ತು ಪದ್ಮ
ಸನನಿರ್ಪಾ ಸದ್ಮಮಾದತ್ತತಿ ವಿಶದ ಯಶೋಧಾಮ ಮಾದುತ್ತಾ
– ವಿದ್ಯಾ
ಧನ ಜನ್ಮ ಸ್ಥಾನ ಮಾದಡ್ತ ಸಮ ತರಳ ಗಂಭೀರ ಸದ್ಗೇಹ ಮಾದತ್ತೆ
ನಿಸಿಲ್ಕಿಂತುಳ್ಳ ನಾನಾ ಮಹಿಮೆಯೋಳೆಸೆಗುಂ ಚಾರು
ಕರ್ನಾಟದೇಶಂ"

(EC VIII,BLR ಸೊರಬ 261,1408)

ಇದು ಕೇವಲ ಕವಿಕಲ್ಪಿತವಲ್ಲ ಅಂದಿನ ಕರ್ನಾಟಕದ ಜೈನ ಪರಂಪರೆಗೆ ಹಿಡಿದ ಕೈಗನ್ನಡಿ. ಕರ್ನಾಟಕದಲ್ಲಿ ಜೀನ ಧರ್ಮವು ಬೆಳೆದು ಬಂದಿರುವುದು ಅವಿಸ್ಮರಣೀಯ. ಆದ್ದರಿಂದ ಜೈನ ಧರ್ಮವು ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಸಾಕಷ್ಟು ಪ್ರಭಲವಾಗಿತ್ತು ಎಂಬುದಕ್ಕೆ ಇಲ್ಲಿ ದೊರೆತೆ ಜಿನಾಲಯಗಳು, ಶಾಸನಗಳು, ಇತ್ತಿಚೆಗೆ ದೊರೆತ ಮೂರ್ತಿಗಳು ಸಾಕ್ಷಿಯಾಗಿ ನಿಂತಿವೆ.

ಇಂದು ಜೈನಧರ್ಮವು ಬಹುಪಾಲು ಬಸದಿಗಳ ರಚನೆಯನ್ನು ಸ್ವರೂಪವನ್ನು ಕಳೆದುಕೊಂಡಿದೆ ಏಕೆಂದರೆ, ಕೆಲವು ಸಾರಿ ಇದಕ್ಕೆ ಮತ ಸಂಘರ್ಷವಾಗಿರಬಹುದು ಕೆಲವು ಬಸದಿಗಳನ್ನು ಜೀರ್ಣೋದ್ಧಾರ ಮಾಡದೇ ಹೋಗಿರಬಹುದು. ಕೆಲವು ಸಾರಿ ಪ್ರಾಕೃತಿಕ ತೊಂದರೆಯಿಂದಾಗಿ ಬಸದಿಗಳು ಭಗ್ನವಾಗಿ ಹೊಂಗಿವೆ. ಹೀಗಾಗಿ ಇಂತವುಗಳ ಕಾಲವನ್ನು ನಿರ್ಧರಿಸುವುದು ಕಷ್ಟ. ಆದರೂ ಸಹ ಈ ಪ್ರದೇಶದಲ್ಲಿ ಕಂಡು ಬರುವ ವಾಸ್ತು ಶಿಲ್ಪ ಅವಶೇಷಗಳು ಅಳಿದುಳಿದ ಜೀನಾಲಯಗಳು ಹಾಗೂ ತೀರ್ಥಂಕರರ ಮೂರ್ತಿ ಶಿಲ್ಪಗಳು, ಶಾಸನಗಳು ಇವಕ್ಕೆ ಪುಷ್ಟಿ ನೀಡುತ್ತವೆ. ಜೊತೆಗೆ ಈ ಪ್ರದೇಶದಲ್ಲಿ ಅವೇಕ ಜೈನ ಧರ್ಮಯರು ಇರುವುರಿಂದ ರಾಯಬಾಗ ಪ್ರದೇಶವು ಮೊದಲನಿಂದಲೂ ಜೈನ ಧರ್ಮದ ಘಟಿಕಾ ಸ್ಥಾನವಾಗಿದೆ.

ಜೈನ ದೇವಾಲಯಗಳು (ಜಿನಾಲಯಗಳು) :

ರಾಯಬಾಗದ ಐತಿಹಾಸಿಕ ಇತಿಹಾಸದಲ್ಲಿ ಜೈನ ಜಿನಾಲಯಗಳು ಮುಖ್ಯವಾಗಿ ಕಂಡು ಬರುತ್ತವೆ. ವೇದ ಆಗಮಗಳನ್ನು ಕಲಿಸುವ ಮುಖ್ಯ ಕೇಂದ್ರವಾದ ರಾಯಬಾಗವು ಸವದತ್ತಿಯ ರಟ್ಟರ ದೊರೆ ಕಾರ್ತವಿರ್ಯನ ಅವಧಿಯಲ್ಲಿ ಪ್ರಮುಖ ಜೈನ ಕೇಂದ್ರವಾಗಿ ಬೆಳೆಯಿತು. ಸವದತ್ತಿ ರಟ್ಟರು ಜಿನ ಸಂಸ್ಕೃತಿಯ ಅರಾಧಕರಾಗಿದ್ದರು. ಅವರು ತಮ್ಮ ಆಳ್ವಿಕೆಯಲ್ಲಿ ನೂರಾರು ಜಿನಾಲಯಗಳನ್ನು ನಿರ್ಮಿಸಿದರು. ಅಲ್ಲದೇ ಹಲವಾರು ಮಂದಿರಗಳಿಗೆ ಧಾನ, ಧರ್ಮ ದತ್ತಿಗಳನ್ನು

ಅವುಗಳ ಜಿರ್ಣೋದ್ದಾರಕ್ಕಾಗಿ ಭೂಮಿಯನ್ನು ಧಾನವಾಗಿ ನೀಡಿದರು. ಹೀಗಾಗಿ ಜೈನರ ಯುಗದಿಂದ ಇಲ್ಲಿವರೆಗೂ ಸಹಿತ ಇಲ್ಲಿಯ ಜಿನಾಲಯಗಳು ದಿನನಿತ್ಯ ವ್ಯವಸ್ಥಿತವಾಗಿ ಪೂಜೆ ಪುರಸ್ಕಾರಗೊಳೊಂದಿಗೆ ಜರುಗಿಕೊಂಡು ಬಂದಿವೆ. ಅವುಗಳಲ್ಲಿ ಆದಿನಾಥ ಬಸದಿ, ಚಂದ್ರನಾಥ ಮೂರ್ತಿ, ಗಡದ ಬಸದಿ ಮುಂತಾದವುಗಳು ಪ್ರಮುಖವಾಗಿ ಕಂಡುಬರುತ್ತವೆ. ಜೊತೆಗೆ ಈ ಕ್ಷೇತ್ರ ಜೈನರ ಕ್ಷೇತ್ರವಾಗಿತ್ತೆಂಬುದಕ್ಕೆ ೨೦೦೮ ರಲ್ಲಿ ದೊರೆತ ಇಪ್ಪತ್ತೈದು ಜೈನರ ವಿಗ್ರಹಗಳು ಇದಕ್ಕೆ ಸಾಕ್ಷಿಯಾಗಿವೆ.

ಕರ್ನಾಟಕದಲ್ಲಿ ಜೈನ ಧರ್ಮವು ಹೇಗೆ ಬೇರೂರಿದೆ ಎಂಬುದಕ್ಕೆ ಹಲವಾರು ಐತಿಹಹ್ಯಗಳು ಸಾಕ್ಷಿಯಾಗಿ ನಿಂತಿವೆ. ಅಂತೆಯೇ ರಾಯಬಾಗವು ಕೂಡಾ ಜೈನ ಪರಂಪರೆಯ ಭವ್ಯ ಸಂಸ್ಕೃತಿಯು ಇಂದಿಗೂ ನಡೆದುಕೊಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಮತ್ತು ಜೈನ ಧರ್ಮದ ಸಂಬಂಧವನ್ನೂ ಕುರಿತಂತೆ ಶಾಸನ ಕವಿಯೊಬ್ಬ ಹೀಗೆ ಬಣ್ಣಿಸಿದ್ದಾನೆ. ಪ್ರಸಿದ್ಧಿಯನ್ನು ಪಡೆದು ಇಂದಿಗೂ ಸಹ ಬೆಳೆದು ಬಂದಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಹೀಗೆ ರಾಯಬಾಗ ಪ್ರದೇಶದಲ್ಲಿ ಅನೇಕ ಜೈನ ಧರ್ಮದ ಜಿನಾಲಯಗಳು, ಶಿಲ್ಪಗಳು, ಮೂರ್ತಿಗಳು, ವೈಶಿಷ್ಟ್ಯ ಪೂರ್ಣ ಲಕ್ಷಣದಿಂದ ಅಧ್ಯಯನದ ಕುತೂಹಲವನ್ನು ಕೆರಳಿಸುತ್ತವೆ. ಹೀಗಾಗಿ ರಾಯಬಾಗ ಪ್ರದೇಶದ ಜಿನಾಲಯಗಳ ಸ್ಥೂಲ ಪರಿಚಯವನ್ನು ಈ ರೀತಿಯಲ್ಲಿ ನಿರೂಪಿಸಲಾಗಿದೆ.

೧ ಆದಿನಾಥ ಬಸದಿ :

ಆದಿನಾಥ ಬಸದಿಯೂ ರಾಯಬಾಗ ಪಟ್ಟಣದ ಮಧ್ಯ ಭಾಗದಲ್ಲಿ. ಇದು ಚಾಲುಕ್ಯ ಶೈಲಿಯಲ್ಲಿ ನಿರ್ಮಾನಗೊಂಡ ಬಸದಿಯಾಗಿದೆ. ಸವದತ್ತಿಯ ರಟ್ಟರ "ರಟ್ಟ ಕುಳ ಭೂಷಣ ಸಿಂಧೂರ ಲಾಂಧನನಾದ "ಶ್ರಿಮನ್ ಮಹಾ ಮಂಡಳೇಶ್ವರ ಕಾರ್ತದಿರ್ಯ ದೇವರಸನು ಮೇಣು ಗ್ರಾಮಿಯ ನೆಲಬಿಡಿಗೊಳೆ ಸುಖ ಸಂಕಥ ವಿನೋದದಿಂದ ರಾಜಂಗೆಯತ್ತಮಿರೆ"ಳ ಆದಿನಾಥನ ದರ್ಶನಕ್ಕಾಗಿ ಬಂದಿದ್ದನು. ಆ ಸಮಯದಲ್ಲಿ ಊರಿನ ಪ್ರಮುಖರೆಲ್ಲ ಕೊಡಿಕೊಂಡು ಜೀರ್ಣೊದಾರಕ್ಕಾಗಿ ಧಾನ ಕೊಡಲು ವಿನಂತತಿಸಿದ್ದರಂತೆ. ಅದಕ್ಕೆ ಚಿಂಚಲಿ ಎಂಬ ಗ್ರಾಮವನ್ನು ಧತ್ತಿಯನ್ನು ಕೊಟ್ಟ ಉಲ್ಲೇಖ ಕಂಡುಬರುತ್ತದೆ. ಹೇಗೆ ಸವದತ್ತಿಯ ರಟ್ಟರ ಆಶ್ರಯಕ್ಕೆ ಒಳಪಟ್ಟ ರಾಯಬಾಗವು ಶಿಲ್ಪ ಕಲೆಯಲ್ಲಿ ಮಹತ್ವದ ಗ್ರಾಮವಾಗಿ ಈ ಬಸದಿಯ ಕಂಡು ಬರುತ್ತದೆ.

ದೇವಾಲಯದ ಹೆಸರು – ಆಧಿನಾಥ ಬಸದಿ

ಮೂರ್ತಿಯ ಹೆಸರು – ಆಧಿನಾಥ

ಶಿಲೆಯ ಅಕಾರ – ಕಪ್ಪು ಶಿಲೆ

ಶೈಲಿ – ಚಾಲುಕ್ಯ ಶೈಲಿ

ದಿಕ್ಕು – ಉತ್ತರಾಭಿಮುಖ

ಕುಳಿತಿರುವ ಭಂಗಿ – ಪದ್ಮಾಸನ

ಪರಿವಾರ – ಪಾರ್ಶ್ವನಾಥ ಮತ್ತು ಚಂದ್ರಪ್ರಭ

ಸ್ಥಳ – ರಾಯಬಾಗ ಪಟ್ಟಣದ ಜೈನಗಲ್ಲಿ

ಜೈನಗಲ್ಲಿಯಲ್ಲಿರುವ ಈ ಆದಿನಾಥನ ಬಸದಿಯೂ ರಾಯಬಾಗ ಪ್ರಧಾನ ವೈಶಿಷ್ಟಗಳಲ್ಲಿ ಒಂದಾಗಿದೆ. ಚಾಲುಕ್ಯರ ಶೈಲಿಯಲ್ಲಿರುವ ಈ ಬಸದಿಯ ಉತ್ತರಾಭಿ ಮುಖವಾಗಿದ್ದು ನಕ್ಷತ್ರಾಕಾರದ ಗರ್ಭ ಗೃಹ, ಮತ್ತು ಕುಶಲತೆಯಿಂದ ಕೂಡಿದ ಕಂಬಗಳೊಂದಿಗೆ ಶಿಲಾ ಕಮಲಗಳೊಳಗೊಂಡ ನವರಂಗದೆ. ಕಕ್ಷಾಸನ ಬೋದಿಕೆಗಳನ್ನೊಳಗೊಂಡ ಮುಖ ಮಂಟಪಗಳನ್ನು ಹೊಂದಿದ್ದು ಗರ್ಭಗೃಹದಲ್ಲಿ ಆಧಿನಾಥನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಈ ಆದಿನಾಥನ ಮೂರ್ತಿಯು ಶಾಂತಿಯ ಪ್ರತೀಕವಾಗಿ ಕಂಡುಬರುತ್ತದೆ. ಆದಿನಾಥ ಬಸದಿಯ ಅರ್ಧ ಮಂಟಪದಲ್ಲಿ ಎರಡು ಬದಿಗೆ ಒಂದು ಕಡೆ ಪಾರ್ಶ್ವನಾಥ ಇನ್ನೊಂದು ಕಡೆ ಚಂದ್ರ ಪ್ರಭಾರ ಮೂರ್ತಿಗಳಿವೆ. ಗರ್ಭಗುಡಿಯಿಂದ ಮುಂದೆ ಹೋದರೆ ಚಿಕ್ಕ ಸುಖನಾಸಿ ಅದರ ಹಿಂಬದಿಗೆ ಬ್ರಹ್ಮದೇವರ ಮೂರ್ತಿ ಪ್ರತಿಷ್ಠಾಪಿತಗೊಂಡಿದೆ.

"ನವರಂಗದಷ್ಟೆ ವಿಸ್ತಾರವಾಗಿರುವ ಮುಖ ಮಂಟಪವಂತೂ ಮಂದಿರದ ಪ್ರಮುಖ ಆಕರ್ಷಣೆಯಲ್ಲಿ ಒಂದು ನೃತ್ಯಗಾರ್ತಿಯರು ನಾಟ್ಯವನ್ನು ಕುಳಿತು ನೋಡಿ ಬೋಗಯುಗದ ಸಮನ್ವಯ ಜ್ಞಾನ ಹೊಂದಲು ಸುತ್ತಲೂ ಸುಖಾಸನಗಳಿದ್ದು ಅದರಲ್ಲೀಗ ಕೆಲವು ಬಿದ್ದು ಹೋಗಿವೆ. ನವರಂಗದ ಪ್ರವೇಶ ದ್ವಾರದ ಎಡಗಡೆ ಇರುವ ಇನ್ನೊಂದು ಶಾಸನವು ಕ್ರಿ.ಶ. ೧೫೯೭ ರಲ್ಲಿ ಶ್ರೀ ಸೋಮಸೇನಾ ಭಟ್ಟಾರಕರ ಆದೇಶದ ಮೇರೆಗೆ ಜೈನ ಸಮಾಜವು ಈ ಮಂದಿರವನ್ನು ಜೀರ್ಣೋದ್ದಾರ ಮಾಡಿರುವುದಾಗಿ ತಿಳಿದು ಬರುತ್ತದೆ. ಈ ಮೂಲಕ ಪ್ರಸ್ತುತ ದೇವಾಲಯವು ಕಾಲದಿಂದ ಕಾಲಕ್ಕೆ ಸುಧಾರಣೊಗೊಳ್ಳುತ್ತಾ ಅಲ್ಪಸ್ವಲ್ಪ ರೂಪು ವ್ಯತ್ಯಾಸವನ್ನು ಹೊಂದುತ್ತದೆ ಎನ್ನಬಹುದು"[೫]

ಆದಿನಾಥ ಬಸದಿಯ ಮುಖ ಮಂಟಪದ ಹೊರಗಿನ ದ್ವಾರದ ಬಲಗೋಡೆಗೆ ನಾಲ್ಕನೇಯ ಕಾರ್ತವಿರ್ಯನ ಕಾಲದ ಸವದತ್ತಿಯ ರಟ್ಟರ ಶಿಲಾ ಶಾಸನ ಇದೆ. ಈ ಶಾಸನದಲ್ಲಿ ಸಾವದತ್ತಿ ರಟ್ಟರ "ಯರಗನು (ಕ್ರಿ.ಶ.೧೦೪೦) ತನ್ನ ದಂಡಾಧಿಕಾರಿಯಾದ ಮಾದಿ ರಾಜನಿಗೆ ಯಪನೀಯ ಸಂಘದ ಮೂಲಬಸದಿಗಾಗಿ ಮತ್ತು ಮೂಲ ಸಂಘದ ಬಸದಿಗಾಗಿ ಭೂಮಿಯನ್ನು ಸರ್ವಭಾದ ಪರಿಹಾರ ದಾನ ಮಾಡಿದ್ದಾನೆ. ಈ ಶಾಸನದಲ್ಲಿ ರಾಯಬಾಗದಲ್ಲಿ ಒಂದು ದಿಗಂಬರ ಮತ್ತು ಒಂದು ಯಾಪನೀಯ ಸಂಘದ ಬಸದಿಗಳಿರುವುದು ಸ್ವಷ್ಟದಾಗುತ್ತದೆ. ರಟ್ಟರ ಅರಸು ಎರಗನ ಕಾಲ ಕ್ರಿ.ಶ.೧೦೪೦ ಇವನು ಈ ಎರಡು ಬಸದಿಗಳಿಗೆ ದಾನವಾಗಿ ನೀಡಿದ ವಿವರಗಳನ್ನು ಹೇಳುವ ಶಾಸನ ಮುಂದುವರೆದು. ಪ್ರಭು ಪ್ರಧಾನನಾದ ಅವನು ಅವೆರಡೂ ಬಸದಿಗಳನ್ನು ಜೀರ್ಣೋದ್ಧಾರ ಮಾಡಿಸಿ ಪ್ರೀತಿಗೆ ಪಾತ್ರನಾದನು ಎಂದಿದೆ. ಇದರಿಂದ ಈ ಬಸದಿಗಳನ್ನು ಕ್ರಿ.ಶ. ೧೦೪೦ ರ ಸುಮಾರಿನಿಂದ ಮುಂಚಿತವಾಗಿ ಕಟ್ಟಲಾಗಿದೆ ಎಂದು ಊಹಿಸಬಹುದು"[೬] ಹೀಗೆ ಶಾಸನದ ಉಲ್ಲೇಖಗಳನ್ನು ಮಾಡಬಹುದಾಗಿದೆ.

ಕಪ್ಪು ಕಲ್ಲಿನಲ್ಲಿ ಕೆತ್ತಿರುವ ಚಂದ್ರಪ್ರಭಾ ಮೂರ್ತಿಯ ಹಿಂದೆ ಪ್ರಭಾವಲಿಯನ್ನು ಹೊಂದಿರುತ್ತದೆ. ಮೂರ್ತಿಯನ್ನು ಗುಂಗುರು ಕೇಶವನ್ನಲಂಕೃತಗೊಂಡಿದ್ದು ನಗ್ನರಾಗಿದ್ದರೂ ನೋಡಲು ಆಕರ್ಷಕವಾಗಿದೆ ಈ ಚಂದ್ರಪ್ರಭರ ಏಡ ಬದಿಗಳಲ್ಲಿ ಯಕ್ಷ ಯಕ್ಷಿಯರ ಚಿಕ್ಕ ಮೂರ್ತಿಗಳು ಸ್ಪಷ್ಟವಾಗಿ ಕಂಡು ಬರುತ್ತವೆ.

ಪಾರ್ಶ್ವನಾತನ ಮೂರ್ತಿ :

ಮೂರ್ತಿ – ಪಾರ್ಶ್ವನಾಥ

ಶಿಲೆ – ಕಪ್ಪುಶಿಲೆ

ಭಂಗಿ – ಕುಳಿತ ಪದ್ಮಾಸನ ಭಂಗಿ

ಲಯ – ಆಧಿನಾಥ ಬಸದಿ

ಆಧಿನಾಥ ಬಸದಿಯಲ್ಲಿ ಅರ್ಧ ಮಂಟಪದ ಬಲ ಭಾಗದಲ್ಲಿ ಪಾರ್ಶ್ವನಾಥನ ಮೂರ್ತಿಯನ್ನು ಎತ್ತರವಾದ ಜಗಲಿಯ ಮೇಲೆ ಪ್ರತಿಷ್ಠಾಪಿಸಲಾಗಿದೆ. ಈತನು ಕುಳಿತ ಪೀಠದ ಮೇಲೆ

ಸಿಂಹದ ಹುಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಹಾಗೂ ಪೀಠದ ಎರಡು ಬದಿಗೆ ಯಕ್ಷ ಯಕ್ಷಿಣಿಯರ ಅತ್ಯಂತ ಚಿಕ್ಕ ಮೂರ್ತಿಗಳಿವೆ. ಪಾರ್ಶ್ವನಾಥನು ತನ್ನ ಕೈಗಳನ್ನು ಒಂದರ ಮೇಲೆ ಒಂದಿಟ್ಟುಕೊಂಡು ಪದ್ಮಾಸನದಲ್ಲಿ ಕುಳಿತಿದ್ದಾನೆ. ಪಾರ್ಶ್ವನಾಥನು ತಲೆಯ ಮೇಲೆ ಗುಂಗುರು ಕೇಶರಾಶಿ ಹೊಂದಿದ್ದು ಈ ಮೂರ್ತಿ ಹಿಂದೆ ಆದಿಶೇಷನ ಶಿಲ್ಪವು ಇವನಿಗೆ ನೆರಳು ಮಾಡಿರುವಂತೆ ಕಾಣುತ್ತದೆ. ಅತ್ಯಂತ ಸುಂದರವಾಗಿರುವ ಈ ಮೂರ್ತಿಯನ್ನು ಕಪ್ಪು ಶಿಲ್ಪದಲ್ಲಿ ಕೆತ್ತಲಾಗಿದೆ.

ಇವುಗಳ ಜೊತೆಗೆ ಕೊಲ್ಹಾಪೂರದಲ್ಲಿ ದೊರೆತ ಒಂದು ಜೈನಶಾಸನ ಜಗದೇಕ ಮಲ್ಲನ ಕಾಲದ್ದಾಗಿದೆ. ಈ ಶಾಸನದಲ್ಲಿ ಶ್ರಿಮದಂಡನಾಯಕ ದಾಸಿಮರಸು ಮತ್ತು ಆತನ ಪತ್ನಿ ಏಕ್ಕದೇವಿಯರು ಹೂವಿನ ಬಾಗೆ ಮಹಾ ಅಗ್ರಹಾರದಲ್ಲಿ ಮೂರಸಿಂಗ ಶೆಟ್ಟಿ ಕಟ್ಟಿಸಿದ ಬಸದಿಯ ಪಂಚಕಲ್ಯಾಣವನ್ನೂ ನೋಡಲು ಭೂಮಿಯನ್ನು ಧಾನ ಮಾಡಿದ ಸಂಗತಿಗಳು ತಿಳಿದು ಬರುತ್ತವೆ. ಆದರೆ ರಾಯಬಾಗದಲ್ಲಿ ಮೂರಸಿಂಗ ಕಟ್ಟಿಸಿದ ಬಸದಿ ಯಾವುದೆಂಬುದು ಇನ್ನು ತಿಳಿದು ಬಂದಿಲ್ಲ ಆ ಕುರಿತು ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ಚಂದ್ರ ಪ್ರಭಾ ಮುರ್ತಿ :

ದೇವಾಲಯದ ಹೆಸರು	–	ಆದಿನಾಥ ಬಸ್ತಿ
ಮುರ್ತಿಯ ಹೆಸರು	–	ಚಂದ್ರ ಪ್ರಭಾ
ಶಿಲೆ	–	ಕಪ್ಪು ಶಿಲೆ
ಭಂಗಿ	–	ನಿಂತಿರುವ ದಿಗಂಬರ ಭಂಗಿ

ಆದಿನಾಥ ಬಸ್ತಿಯ ಅರ್ಧ ಮಂಟಪದ ಎಡ ಭಾಗದಲ್ಲಿ ಉತ್ತರದ ಜಗಲಿಯ ಮೇಲೆ ಚಂದ್ರ ಪ್ರಭಾ ಮೂರ್ತಿಯನ್ನು ಪ್ರತಿಷ್ಠಾಪಿಸಿರುತ್ತದೆ. ಈ ಮೂರ್ತಿಯು ಅತ್ಯಂತ ಸರಳವೂ ಸುಂದರವು ಆಗಿದೆ. ಚಂದ್ರ ಪ್ರಭಾ ಮೂರ್ತಿಯೂ ದಿಗಂಬರವಾಗಿದ್ದು ಮೂರ್ತಿಯ ತಲೆಯ ಮೇಲೆ ಚಿತ್ರವಿರುವುದು ಕಂಡು ಬರುತ್ತದೆ. ಈ ಆದಿನಾಥನ ಬಸದಿಯೂ ಗರ್ಭಗೃಹ ಸುಖಾಸನ, ಕಳಸ ಮಂಟಪ ಸಭಾಮಂಟಪ ವಿರುವುದು. ಬಸದಿಯ ಜಿನಾಲಯದಲ್ಲಿ ಅನೇಕ ಪಂಚಲೋಹದ ಹಾಗೂ ಹಿತ್ತಾಳೆ ಮತ್ತು ತಾಮ್ರದ ದಿಗಂಬರ ಜೈನ ಮಹಾವೀರರ ಕಂಚಿನ ಮೂರ್ತಿಗಳು ಹಾಗೂ ಪದ್ಮಾವತಿಯ ವಿಗ್ರಹಗಳು ಕಂಡು ಬರುತ್ತವೆ. ಹಾಗೂ ಜ್ವಾಲಮಾಲಿನಿಯ ಹಿತ್ತಾಳೆ ಮೂರ್ತಿ ಇರುವುದು. ಮತ್ತು ಇತರ ಅನೇಕ ಚಿಕ್ಕ ಚಿಕ್ಕ ಮೂರ್ತಿಗಳು ಇರುವವು.

ಮಾನಸ್ತಂಭ :

ಇದು ಬಸದಿಯ ಎದುರಿಗೆ ಎತ್ತರವಾಗಿ ಈ ಸ್ತಂಭವನ್ನು ನಿರ್ಮಿಸಿರುತ್ತಾರೆ. ಈ ಸ್ತಂಭವು ಚೌಕಾಕಾರದಲ್ಲಿದ್ದು ನಡುವೆ ವೃತ್ತಾಕಾರ ಹೊಂದಿ ಹಾಗೂ ಮತ್ತೆ ಮೇಲಿನ ಹಂತದಲ್ಲಿ ಚಿಕ್ಕಕೂಟವನ್ನು ನಿರ್ಮಿಸಿ ನಾಲ್ಕು ಬದಿಗೆ ಎದ್ದು ಕಾಣುವಂತೆ ಚತುರ್ಮೂಖ ಮಹಾವಿರನ ಮೂರ್ತಿಯನ್ನು ಮಂಟಪದಲ್ಲಿ ಪ್ರತಿಷ್ಠಾಪಿಸಿರುತ್ತಾರೆ. ಈ ಮಾನಸ್ತಂಭದ ಎತ್ತರ ಸುಮಾರು ೬೦ ಅಡಿಯಿದ್ದು ೨ ಅಡಿ ಅಗಲವಿದೆ.

ಆದಿನಾಥನ ಬಸದಿಯಲ್ಲಿ ಲಕ್ಷ್ಮೀಸೇನ ಮಹಾರಾಜರ ಮಠವಿರುವುದು ಈ ಮಠದಲ್ಲಿ ಒಂದು ಒಡೆದ ವೀರಗಲ್ಲು ಇರುವುದು ಹಾಗೂ ಅದರ ಮೇಲೆ ಕೆಲವು ಸಾಲುಗಳ ಬರಹದ ಲಿಪಿಗಳು ಇರುವುದು. ಹೆಚ್ಚು ಭಾಗವು ಒಡೆದು ಹೋಗಿದ್ದು, ಸ್ವಲ್ಪ ಮೇಲಿನ ಭಾಗ ಮಾತ್ರ ಉಳಿದಿರುವುದು ಕಂಡು ಬರುತ್ತದೆ. ಹೀಗೆ ಆಧಿನಾಥನ ದೇವಾಲಯದ ಆವರಣದಲ್ಲಿ ಅನೇಕ ವಿಗ್ರಹಗಳು ಕಂಡು ಬಂದು ದೇವಾಲಯಕ್ಕೆ ಸೌಂದರ್ಯವನ್ನು ಮೂಡಿಸಿದೆ.

ಗಡದ ಬಸದಿ (ಮಹಾವೀರ ಬಸದಿ) :

ದೇವಾಲಯ ಹೆಸರು – ಗಡಾದ ಬಸದಿ

ಮೂರ್ತಿಯ ಹೆಸರು – ಮಹಾವೀರ ದಿಗಂಬರ ಮೂರ್ತಿ

ಶಿಲೆಯ ಆಕಾರ – ಕಪ್ಪು ಶಿಲೆಯಿಂದ ಕೂಡಿದ್ದು

ಭಂಗಿ – ನಿಂತ ಭಂಗಿ

ಸ್ಥಳ – ರಾಯಬಾಗದ ಹೊರ ವಲಯದ ಚಿಂಚಲಿಗೆ ಹೋಗುವ ರಸ್ತೆ ಪಕ್ಕದಲ್ಲಿ

ದಿಕ್ಕು – ಪೂರ್ವಾಭಿಮುಖ

ಕಾಲ – ೧೧ ನೇ ಶತಮಾನ

ಮೂರ್ತಿಯ ಸ್ವರೂಪ – ದುಂಡು ಸ್ವರೂಪ.

ಶೈಲಿ – ಚಾಲುಕ್ಯ ಶೈಲಿ

ಎತ್ತರ – ೫೪ ಸೆ. ಮಿ

ಅಗಲ – ೨೩ ಸೆ. ಮಿ

ಈ ಜೈನ ದಿಗಂಬರ ಬಸದಿಯ ರಾಯಬಾಗದಿಂದ ಚಿಂಚಲಿಗೆ ಹೋಗುವ ಹೊರವಲಯದಲ್ಲಿ ರಾಯಬಾಗದಿಂದ ೨ ಕಿ. ಮಿ. ಅಂತರಲ್ಲಿ ಮಾರ್ಗ ಬದಿಯಲ್ಲಿ ಕಂಡು ಬರುತ್ತದೆ. ಈ ಬಸದಿಯ ಅತ್ಯಂತ ಪ್ರಾಚಿನ ಬಸದಿಯಾಗಿದೆ. ಇದನ್ನು ಗಡದ ಬಸ್ತಿ ಎಂದು ಸ್ಥಳಿಯರು ಕರೆಯುತ್ತಾರೆ. ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದ್ದ ಗರ್ಭಗೃಹವನ್ನು ಕಟ್ಟಲಾಗಿದೆ. ಮುಖ

ಮಂಟಪ ಮತ್ತು ನವರಂಗ ಹೊಂದಿರುವ ಬಸ್ತಿಯಾಗಿದೆ. ಗರ್ಭಗೃಹದಲ್ಲಿ ೨೩ ನೇ ತೀರ್ಥಂಕರನಾದ ಪಾರ್ಶ್ವನಾಥನ ಕಪ್ಪು ಶಿಲೆಯ ಎರಡು ಅಡಿ ಎತ್ತರದ ಮೂರ್ತಿಯಿದೆ. ಈ ಮೂರ್ತಿಯು ಖಡ್ಗಾಸನದಲ್ಲಿದ್ದು ಬಲ ಹಿಮ್ಮಡದಿಂದ ಸುರಳಿಯಾಕಾರದ ಹಾವಿನ ಕೆತ್ತನೆಯಿಂದ ಕೂಡಿದೆ. ಇದರ ತಲೆಯ ಮೇಲೆ ಮುಕ್ಕೋಡೆಯ ಕೆತ್ತನೆಯಿದ್ದು ಅದರ ಮೇಲೆ ಏಳು ಹೆಡೆಯ ಹಾವಿನ ಕೆತ್ತನೆಯಿಂದ ಕೂಡಿದೆ. ಬಲ ಬದಿಗಡೆ ಯಕ್ಷಿ ಪದ್ಮಾವತಿಯರ ಅಭಯ ಹಸ್ತದ ಒಂದು ಕಡೆ ಹಾವಿನ ಕೆತ್ತನೆಯ ಚಿತ್ರ ಒಳಗೊಂಡಿದೆ. ಕೆಳಭಾಗ ಪಾದ ಪೀಠದ ಶಾಸನ ಸವೆದು ಹೋಗಿದೆ.

ಬಸದಿಯ ಗರ್ಭಗೃಹದಲ್ಲಿರುವ ಮಹಾವೀರ ವಿಗ್ರಹವು ಎತ್ತರವಾಗಿ ಪ್ರತಿಷ್ಠಾಪಿಸಿದ್ದಾರೆ. ಮಹಾವೀರನ ವಿಗೃಹವು ನಿಂತಿರುವ ಭಂಗಿಯಲ್ಲಿದ್ದು ತನ್ನೆರಡು ಕೈಗಳನ್ನು ಕೆಳಗೆ ಇಳಿಬಿಟ್ಟಿರುತ್ತಾನೆ. ವಿಗ್ರಹದ ತಲೆಯ ಮೇಲಿನ ಕೇಶರಾಶಿಯನ್ನು ಕಿರೀಟ ಹಿಡಿಯುವಂತೆ ಶಿಲ್ಪಿಕಾರ ಕೆತ್ತಿದ್ದಾನೆ. ಮಹಾವೀರನ ಎಡಬದಿಯಲ್ಲಿ ಇಬ್ಬರು ದ್ವಾರಪಾಲಕರು ಕಿರೀಟ ಧಾರೆಯರಾಗಿ ವಸ್ತ್ರವಿನ್ಯಾಸದಿಂದ ಅಲಂಕೃತಗೊಂಡು ನಿಂತ್ತಿದ್ದಾರೆ. ಮಹಾವೀರನ ಪಾದದ ಹತ್ತಿರ ಬಲಗಡೆ ಯಕ್ಷನಿದ್ದಾನೆ. ಈತ ತ್ರಿಶೂಲಧಾರಿಯಾಗಿ ತನ್ನ ಕೈಗಳಲ್ಲಿ ಗದೆ, ತ್ರಿಶೂಲ ಹಿಡಿದುಕೂಂಡಿದ್ದಾನೆ. ಮಹಾವೀರನ ಎಡ ಪಾದದಲ್ಲಿ ಯಕ್ಷಿಣಿಯು ಕೂಳಿತುಕೊಂಡಿರುವ ಕಿರೀಟಧಾರಿಯಾಗಿದ್ದು ಇವಳು ಸಹ ತ್ರಿಶೂಲ, ಗದೆ, ಎರಡನ್ನು ಹಿಡಿದುಕೂಂಡಿದ್ದಾಳೆ. ಮಹಾವೀರ ಮೂರ್ತಿಯ ಹಿಂದೆ ಸೂಕ್ಷವಾಗಿ ಕೆತ್ತಿದ ಪ್ರಭಾವಳಿ ಇದೆ. ಒಟ್ಟಿನಲ್ಲಿ ಸುಂದರ ಕೆತ್ತನೆಯ ಶಿಲ್ಪಕಲೆ ಈ ಬಸದಿಯಲ್ಲಿ ಕಂಡು ಬರುತ್ತದೆ. ಇದಕ್ಕೆ ಗರ್ಭಗುಡಿಗೆ ಶಿಖರವಿರುವುದು. ಜಿನಾಲಯ ಸಭಾಮಂಟಪ ಮುಂತಾದವುಗಳ ಬಸದಿಯನ್ನು ಇನ್ನಷ್ಟು ಸುಂದರಗೊಳಿಸಿವೆ.

ಪದ್ಮಾವತಿ:

ಜಿನಾಲಯ – ಗಡಾದ ಬಸ್ತಿ

ಮೂರ್ತಿ – ಪದ್ಮಾವತಿ

ಶಿಲೆ – ಕಪ್ಪು ಶಿಲೆ

ಭಂಗಿ – ಕುಳಿತ ಭಂಗಿ

ಸ್ವರೂಪ – ದುಂಡು ಶಿಲ್ಪ

ದಿಕ್ಕು – ಪೂರ್ವಾಭಿಮುಖ

ಸ್ಥಳ – ಸಭಾಮಂಟಪ

ಶೈಲಿ – ಚಾಲುಕ್ಯ ಶೈ

ಅಗಲ – ೪೧ ಸೆ. ಮಿ

ಎತ್ತರ – ೬೯ ಸೆ. ಮಿ

ಕಾಲ – ಸು ೧೧ ನೇ ಶತಮಾನ

ಗಡದ ಬಸದಿಯಲ್ಲಿರುವ ಈ ಸುಂದರವಾದ ಪದ್ಮಾವತಿ ಮೂರ್ತಿಯು, ಮಂಟಪದ ಎಡಭಾಗದಲ್ಲಿ ಮಹಾವೀರನ ಎಡಪಾದದ ಹತ್ತಿರ ಈ ಮೂರ್ತಿ ಸ್ಥಾಪನೆಗೊಂಡಿದೆ. ಪದ್ಮಾವತಿಯು ಸುಂದರವಾದ ಕಿರೀಟವನ್ನು ಧರಿಸಿ ಕಂಠಭಾರಣ ನಡಪಟ್ಟಿ ಕರ್ಣ ಕುಂಡಲಿ ಮುಂತಾದ ವಸ್ತ್ರಲಂಕರದಿಂದ ಅಲಂಕೃತಗೊಂಡಿದ್ದಾಳೆ. ತನ್ನ ಎಡ ಮುಂಗೈ ಕೆಳಗೆ ಚಾಚಿದ್ದು, ಮುಂಗೈ, ಮತ್ತು ಹಿಂಗೈನಲ್ಲಿ ನೈದಿಲೆ ಸ್ಪಷ್ಟವಾಗಿ ಕಾಣುವುದಿಲ್ಲ, ಹಾಗೂ ಕಾಲಲ್ಲಿ ಕಾಲ್ಗಡಗ ಕೈಗಡಗ, ತೋಳು ಬಂದಿಗಳನ್ನು ಧರಿಸಿ ಅತ್ಯಂತ ಸುಂದರವಾಗಿ ಈ ಮೂರ್ತಿ ಅಲ್ಲಿ ಪ್ರತಿಷ್ಠಾಪಿತಗೊಂಡಿದೆ. ಇದು ಶಿಲ್ಪ ಶೈಲಿಯಿಂದ ೧೦ ನೇ ಶತಮಾನದಾಗಿದ್ದು ಇದರ ಕಾಲದ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ, ಇದಕ್ಕಾಗಿ ಅಧ್ಯಯನ ನಡೆಯ ಬೇಕಾಗಿದೆ.

ರಾಯಬಾಗದಲ್ಲಿ ಇನ್ನು ಹೆಚ್ಚಿನ ಬಸದಿಗಳಿರುವ ಸಾಧ್ಯತೆಗಳಿವೆ, ಏಕೆಂದರೆ ಜೈನರ ಕುರಿತು ಎಲ್ಲಿ ಹಲವು ಆಕರ ಸಾಮಗ್ರಿಗಳು ವಿಫುಲವಾಗಿದ್ದು ಇನ್ನು ನಾಲ್ಕು ಬಸದಿಗಳಿರುವ ಸಾಧ್ಯತೆಗಳಿವೆ, ಮತ್ತು ಊರಿನಲ್ಲಿ ಮನೆ ಕಟ್ಟುತ್ತಿರುವಾಗ ಹೊಸ ಹೊಸ ಮೂರ್ತಿಗಳು ದೊರೆತಿವೆ. ಹೀಗಾಗಿ ಆ ಮೂರ್ತಿಗಳ ಸ್ವರೂಪವನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಇತ್ತಿಚಿಗೆ ದೊರೆತ ಜೈನ ಮೂರ್ತಿಗಳು :

ರಾಯಬಾಗದಲ್ಲಿ ಇತ್ತೀಚೆಗೆ ಹಲವು ಜೈನ ಮೂರ್ತಿಗಳು ದೊರಕಿವೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ರಾಯಬಾಗ ಪಟ್ಟಣದ ನಂದಿ ಕುರಳಿ ರಸ್ತೆಯ ಪಕ್ಕದ ರಸ್ತೆಯಲ್ಲಿರುವ ದೇಸಾಯಿ ಎಂಬುವರ ಪ್ಲಾಟಿನಲ್ಲಿ (ನಿವೇಶನ) ಇರುವ ಬಾಗೆಯನ್ನು ಮಲ್ಲಪ್ಪ ಬಾಗೋಜಿ ಎಂಬುವರು ಖರಿದೀಸಿದ್ದು ನಂತರ ದಿನಾಂಕ ೭–೦೮–೨೦೦೮ ರಲ್ಲಿ ಮನೆಯನ್ನು ಕಟ್ಟಲು ಗುಂಡಿ ತೊಡಲಿಕ್ಕೆ ಪ್ರಾರಂಭಿಸಿದರು, ಆ ಸಂಧರ್ಭದಲ್ಲಿ ದೊರೆತ ಒಟ್ಟು ೨೫ ಲೋಹದ ಜೈನ ವಿಗ್ರಹಗಳು ಕಂಡು ಬಂದಿವೆ. ವಿಗ್ರಹಗಳ ದೊರೆತ ಸ್ಥಳ ಸುಮಾರು ೧ ಸಾವಿರ ವರ್ಷಗಳ ಹಿಂದೆ ಜೈನ ಬಸದಿಯಾಗಿತ್ತು ಅದು ಪುನರಜ್ಜೀವನ ವಾಗದೆ ಕಾಲಗರ್ಭದಲ್ಲಿ ಅಡಗಿರುವ ಸಾಧ್ಯತೆ ಇದೆ. ಇಲ್ಲಿ ಪತ್ತೆಯಾದ ಜೈನ ವಿಗ್ರಹಗಳು ರಟ್ಟರ ಕಾಲಕ್ಕೆ ಸೇರಿದ್ದವು ಸು. ೧೦೦೦ ವರ್ಷಗಳಷ್ಟು ಹಳೆಯದೆಂಬುದು ತಿಳಿದು ಬರುತ್ತದೆ. ಹೀಗಾಗಿ ಈ ಜೈನ ವಿಗ್ರಹಗಳು ಸಿಕ್ಕು ನೆಲೆಯ ಸ್ವರೂಪ ಈ ವಿಗ್ರಹಗಳ ಕಲೆಗಾರಿಕೆ ವಿಗ್ರಹಗಳಲ್ಲಿರುವ ಶಾಸನ, ವಿಶ್ಲೇಷಣೆ ಮುಂತಾದವುಗಳ ಸ್ಥೂಲ ಚಿತ್ರಣವನ್ನು ಕಲೆ ಹಾಕಲಾಗಿದೆ.

ರಾಯಬಾಗದಲ್ಲಿ ಸಿಕ್ಕಿರುವ ವಿಗ್ರಹಗಳು ಹಾಳು ನಿವೇಶದಲ್ಲಿ ಸಿಕ್ಕಿದ್ದು ಇಲ್ಲಿ ಉತ್ತರ-ದಕ್ಷಿಣಭಿಮುಖವಾಗಿ ಮೂರು ಸಾಲುಗಳಲ್ಲಿ ಒಟ್ಟು ೧೬ ಗುಂಡಿಗಳು ದೊರಕಿದ್ದು ಒಂದೊಂದು ಗುಂಡಿಯ ಉದ್ದಗಲ ಮತ್ತು ಎತ್ತರ ೧.೨೦ × ೧.೨೦ × ೦.೭೫ ಮೀಟರಗಳು ಒಂದು ಗುಂಡಿಯಿಂದ ಇನ್ನೊಂದು ಗುಂಡಿಯ ಅಂತರ ೨.೧೯ ಮೀ. ಒಟ್ಟು ಇಲ್ಲಿ ೨೫ ವಿಗ್ರಹಗಳು ದೊರಕಿವೆ. ಇಲ್ಲಿ ಮುಖ್ಯವಾದ ವಿಗ್ರಹಗಳೆಂದರೆ ವೃಷಭನಾಥನ ವಿಗ್ರಹ ಪೀಠ, ಮತ್ತೊಂದ ಚೌವೀಸ ತೀರ್ಥಂಕರ ವಿಗ್ರಹಗಳು ಅತೀ ಮುಖ್ಯವಾದವುಗಳು. ಈ ನಿವೇಶನದ ಗುಂಡಿಗಳಲ್ಲಿ ಕಪ್ಪು ಮಣ್ಣು ಮತ್ತು ಕಲ್ಲು ಮಿಶ್ರಣವಿದ್ದು, ಈ ವಿಗ್ರಹಗಳ ಮೆಲ್ಭಾಗದಲ್ಲಿ ಕಾಂಕ್ರೀಟನ ನೆಲ ಭಾಗವಿದೆ. ವಿಗ್ರಹದ ತಳಭಾಗದಲ್ಲಿ ನೆಲದ ಮಣ್ಣು ಬೂದು ಬಣ್ಣದಿಂದ ಕೊಡಿದೆ. ವಿಗ್ರಹಗಳು ದೊರೆತಿರುವ ನೆಲದ ಎತ್ತರಕ್ಕೆ ಸ್ವಲ್ಪ ಅಂತರದಲ್ಲಿ ಒಂದು ರಸ್ತೆಯಿದೆ. ಪಶ್ಚಿಮಕ್ಕೆ ಸು.೧ ಕಿ.ಮೀ ದೂರದಲ್ಲಿ ನಿಲ್ಲಿಸಿದ ಮಂಟಪಗಳಿವೆ. ಮಂಟಪದ ಮುಂದೆ ಪಾದಗಟ್ಟೆಗಳಿವೆ. ಪೂರ್ವಕ್ಕೆ ಊರಲ್ಲಿ ಪ್ರಸಿದ್ದವಾದ ಜೈನ ದಿಗಂಬರರ ಸುಮಾರು

ಕ್ರಿ.ಶ.೧೧-೧೨ ನೇ ಶತಮಾನದ ಆದಿನಾಥನ ಬಸದಿಯಿದೆ. ಇಲ್ಲಿ ಜೈನ ಸ್ವಾಮಿಗಳು ಇರುವರು. ಪೂರ್ವಕ್ಕೆ ಸುಮಾರು ೨ ಕ. ಮಿ. ಅಂತರದಲ್ಲಿ ಆಗ್ನೇಯಕ್ಕೆ ಗುಡ್ಡದ ಮೇಲೆ ಜೈನ ಬಸದಿಯಿದೆ. ಇದನ್ನು ಗಡದ ಬಸದಿ ಅಥವಾ ಮಹಾವೀರ ಬಸದಿ ಎಂದು ಕರೆಯುವರು. ಹೀಗೆ ಈ ೨೫ ವಿಗ್ರಹಗಳು ದೊರಕಿರವುದು ಹೊಸ ಸಂಶೊಧನೆಗೆ ನಾಂದಿಯಾಗಿದೆ. ದೊರೆತಿರುವ ವಿಗ್ರಹಗಳ ಪರಿಚಯ ಹಾಗೂ ಶಾಸನದ ಪಾಠಗಳನ್ನು ಈ ಕೆಳಗಿನಂತೆ ಅಭ್ಯಾಸಿಸಬಹುದಾಗಿದೆ.

ಚೌವೀಸ್ ತೀರ್ಥಂಕರರು :

ರಾಯಬಾಗದಲ್ಲಿ ಎರಡು ಚೌವೀಸ್ ತೀರ್ಥಂಕರರ ವಿಗ್ರಹಗಳಿವೆ. ವಿಗ್ರಹಗಳು ಅತ್ಯಂತ ಆಕರ್ಷಕ ಮತ್ತು ವೈವಿದ್ಯಮಯವಾಗಿವೆ. ಒಂದು ವಿಗ್ರಹದಲ್ಲಿ ಪ್ರಭಾವಳಿಯ ನಡುವೆ ವೃಷಭನಾಥನು ಪದ್ಮಾಸನ ಮತ್ತು ಯೋಗ ಮುದ್ರೆಯಲ್ಲಿ ಪ್ರಸನ್ನನಾಗಿ ಚೌಕಪೀಠದಲ್ಲಿ ಕುಳಿತಿದ್ದಾನೆ. ಈ ಪೀಠದಲ್ಲಿ ನಂದಿಯ ವಾಹನವು ಕೆತ್ತನೆಯಲ್ಲಿ ಮೂಡಿ ಬಂದಿದೆ. ವೃಷಭನಾಥನ ತೋರಣದಲ್ಲಿ ಒಟ್ಟು ೨೩ ತೀರ್ಥಂಕರರು ಇದ್ದಾರೆ. ಇದರೊಂದಿಗೆ ವೃಷಭನಾಥನನ್ನು ಹಿಡಿದುಕೊಂಡರೆ ಒಟ್ಟು ೨೪ ತೀರ್ಥಂಕರರ ಚಿತ್ರಣ ಮೂಡಿ ಬಂದಿದೆ. ಇದಲಕ್ಕಾಗಿ ಈದನ್ನು ಚೌವೀಸ ತೀರ್ಥಂಕರರು ಎಂದು ಕರೆಯುತ್ತಾರೆ. ಬುಡಭಾಗದಲ್ಲಿ ಇಬ್ಬರು ಚೌರಿ ಹಿಡಿದ ಸೇವಕಿಯರು ನಿಂತಿದ್ದಾರೆ ನಡುಭಾಗದಲ್ಲಿ ಯಕ್ಷಿಣಿ ಸೌವ್ಯ ಲಲಿತಾಸನದಲ್ಲಿ ಕುಳಿತಿದ್ದು ಜೊತೆಗೆ ಬಲಕ್ಕೆ ಮುಖಮಾಡಿ ಕುಳಿತು ನಂದಿ ಇದೆ. ಈ ವೃಷಭನಾಥನ ಚೌಕಾಸನದ ಕೆಳಭಾಗದಲ್ಲಿ ವಿವಿಧ ಚಿತ್ರಗಳಿಂದ ಚಿತ್ತಾರಗೊಂಡಿದೆ. ಮಧ್ಯಭಾಗದಲ್ಲಿ ಸಿಂಹಸವಾರರು ಹಾಗೂ ಕಮಲದ ಚಿತ್ರ ಹಾಗೂ ಇಬ್ಬರು

ಸೇವಕರು ನಿಂತಿರುವರು ಇನ್ನೂ ಬಲ ಬದಿಯಲ್ಲಿ ಧರಣೇಂದ್ರ ಯಕ್ಷ ಮತ್ತು ಎಡಗಡೆ ಪದ್ಮಾವತಿ ಯಕ್ಷಿ ಕುಳಿತಿರುವ ಚಿತ್ರವಿದೆ. ವಾದ್ಯದೊಂದಿಗೆ ನಿಂತ ಸೇವಕರಿಬ್ಬರು ಮಾಲೆ ಹಿಡಿದು ನಿಂತಿದ್ದಾರೆ. ಈ ವೃಷಭನಾಥನ ತೋರಣದ ತಟ್ಟಿಕೆಗಳಲ್ಲಿ ಕೆಳಭಾಗದಲ್ಲಿ ಪಾರ್ಶ್ವನಾಥ ನಂತಿರುವುದು ಅದರ ಮೇಲೆ ಮತ್ತಿಬ್ಬರು ತೀರ್ಥಂಕರರಿದ್ದಾರೆ. ವೃಷಭನಾಥನ ಚಿತ್ರದ ಮೇಲೆ ಸುಂದರವಾದ ಚಿತ್ರ ಇದೆ. ಇದಕ್ಕೆ ಎರಡು ಆನೆಗಳು ಸೊಂಡಿಲನ್ನು ಮೇಲಕ್ಕೆತ್ತಿ ನಿಂತುಕೊಂಡಿವೆ. ವೃಷಭನಾಥನ ಸುತ್ತ ಮತ್ತು ಪಟಿಕಯಲ್ಲಿ ಏಕ ಸಾಲಿಯ ನಾಲ್ವರು ತೀರ್ಥಂಕರರು ಛತ್ರಿಯ ಮೇಲೆ ಏಕ ಸಾಲಿನಲ್ಲಿ ಏಳು ತೀರ್ಥಂಕರರು ಬದಗಿನ ತಲೆಗಳ ಮೇಲೆ ಛತ್ತಿಗಳಿವೆ ಈ ತೋರಣದ ಬದಿಗಳಲ್ಲಿ ಎರಡು ಎತ್ತರವಾದ ಕಳಶಗಳಿವೆ. ಈ ವಿಗ್ರಹದ ಹಿಂಭಾಗದಲ್ಲಿ (ಬೆನ್ನಿಗೆ) ದೇವನಾಗರಿಯ ಲಿಪಿಯ ಶಾಸನವಿದೆ. ಆ ಶಾಸನ ಹೀಗಿದೆ.

ಶಾಸನ ಪಾಠ :

೧ "ಸಂವ್‌ತ್ ೧೫೬೪ ವರ್ಷೆ ಪುಲವ ಸಂವತ್ಸರೇ ।ವೈಷಖಸುದ್ದೆ ॥

೨ ಶುಕ್ರೇ ಶ್ರೀ ಮೂಲಸಂಘೇ ಶರಸ್ವಲೇಗಣೇನೆ

೩ (ಗ)ಲಾಳಾಂಕಾರ ಗಲೇ (?) ಶ್ರಕುಂದ ಕುಂದಾಚಾರ್ಯ್ಯೇ ।ತ್ವಯೇ ।.

ಭಟ್ಯರಕ ಶ್ರೀಪದ್ಮನಂದಿ ದೇವಸ್ತತ್ಪಟ್ಟೇ (ಶ್ರೀ ಮ?) ಶ್ರೀಸಲಕೇರ್ತಿ ದೇವಾಸ್ತಪ್ಪಟ್ಟೇ(ಮಂ?) ಶ್ರೀ

ಭುವನಕೀರ್ತಿ ದೇವಾ-

೪ ಸ್ತತ್ಪಟ್ಯೇಭಟ್ಟಾರಕ ಶ್ರೀ ಜ್ಞಾನಭೂಷಣದೇವಾ 'ಸ್ತತ್ಪಟ್ಟ ಭಟ್ಟಾರಕ ಶ್ರೀ ವಿಜಯ ಕೀರ್ತಿ

ಗುರುಪದೇಶತ । ಪರಾಂಡಾಸುಲಸ್ತಾನೆ ಖಂಡೇಲವಾಲನ್ವಯೆ ಸಾಹಯಮ್ಮೆಂ ಸೀ(ಪಾ) ಯ್ಯೋ।

೫ ಗಂಗಾ ಈ ।ಸುತ ಸಂಘಬೀ ಆಂಪ್ತಜೂರಪಾ ಸುಧಾಈಸುತ ಸಂಘವೀಧರ್ಮ್ಮರಾಜಸೋ

೬ ಹ ಜಾಯ್ರ್ಯಾನಮಾ ಈ

೭ ಪತೆ ಚತುರ್ವ್ವಿಂ

೮ ಶಿತೀರ್ಥಂಕರನ್

೯ ನಿತ್ಯಂಪ್ತಣಾ ಮಂತ್"[೭]

ಈ ಶಾಸನದ ಭಾಷೆ ಸಂಸ್ಕೃತವಿದ್ದು ಲಿಪಿ ನಾಗರಲಿಪಿಯಾಗಿದೆ. ಶೈಲಿಯ ದೃಷ್ಟಿಯಿಂದ ಈ ವಿಗ್ರಹ ಕಾಲವನ್ನು ಕ್ರಿ. ಶ ೧೭ ನೇ ಶತಮಾನವೆಂದು ಅಂದಾಜಿಸಲಾಗಿದೆ. ಗುಜರಾತ ಪ್ರದೇಶದ ಗಂಗಾಮಾಯೆಯ ಮಗ ಸಂಘವೀ ಮಗ ಧರ್ಮರಾಜ ತೀರ್ಥಂಕರರ ವಿಗ್ರಹಗಳನ್ನು ಮಾಡಿಸಿದ್ದಾನೆಂದು ಕಂಡು ಬರುತ್ತದೆ. ಈ ಶಾಸನದಲ್ಲಿ ಮೂಲ ಸಂಘ ಸರಸ್ವತಿಘನ ಕುಂದ ಕುಂದಾಚಾರ್ಯ ವಂಶಗಳ ವಿವರ ಲಭ್ಯವಿದೆ.

ಇನೊಂದು ೨೪ ತೀರ್ಥಂಕರರ ವಿಗ್ರಹದಲ್ಲಿ ದೋಡ್ಡ ಪೀಠಿಕೆಯುಳ್ಳ ವೃಷಭನಾಥನ ಮೂರ್ತಿ ಸಿಕಿದ್ದು ಇದಕ್ಕೆ ಸಂಬಂಧಿಸಿದ ತೋರಣ ಭಾಗ ದೊರೆತಿದೆ. ಆ ತೋರಣದಲ್ಲಿ ನನ್ನವಾಗಿ ವೃಷಭನಾಥ ತನ್ನೆರಡು ಕೈಗಳನ್ನು ಇಳಿಬಿಟ್ಟು ನಿಂತಿದ್ದಾನೆ. ಉದ್ದವಾದ ಕಿವಿ, ನೀಳಮೂಗು, ಗುಂಗರ ಕೂದಲುಗಳಿವೆ. ವೃಷಭನಾಥನ ಪ್ರತ್ಯೇಕ ಸರಳ ತೋರಣದಲ್ಲಿ ೨೩ ತೀರ್ಥಂಕರರು ಯಕ್ಷ ಹಾಗು ಎಡಕ್ಕೆ ಪದ್ಮಾವತಿ ಯಕ್ಷಿಯರು ಕುಳಿತಿರುವ ಭಂಗಿ ಇದೆ. ಇವರ ಬದಿಯಲ್ಲಿ ೧೬ ತೀರ್ಥಂಕರರು ಕುಳಿತ ವಿಗ್ರಹವಿದೆ. ಹೀಗೆ ಒಟ್ಟು ಏಂಟು ತೀರ್ಥಂಕರರನ್ನು ಅಡ್ಡ ಸಾಲಿನಲ್ಲಿ ನಾಲ್ಕು ಜೋಡಿಯಾಗಿ ಒಂದು ಕಡೆ ತೋರಿಸಲಾಗಿದೆ. ಇವುಗಳಲ್ಲಿ ಪಾರ್ಶ್ವಾವನಾಥನಿರುವ ವಿಗ್ರಹದ ತಲೆಯ ಮೇಲೆ ಹಾವಿನ ಹೆಡೆ, ನಿರ್ಭಾಗದ ಮಧ್ಯದಲ್ಲಿ ಎರಡು ಗಿಳಿಗಳು ಅಲಂಕೃತಗೊಂಡಿದೆ. ಅದರ ಮೇಲೆ ಕಳಶವಿದ್ದು ಈ ತೋರಣಗಳ ಪೆಟ್ಟಿಗೆಯ ಅಂಚಿಗೆಯ ಸುತ್ತ ಮನೆಗಳಿಂದ ಅಲಂಕೃತ ಗೊಂಡಿರುವ ಚಿತ್ರ ಎದ್ದುಕಾಣುತ್ತದೆ. ಈ ವಿಗಹರಹವನ್ನು ಶೈಲಿಯ ದೃಷ್ಟಿಯಿಂದ ೧೭ ನೇ ಶತಮಾನ ಎಂದು ಗುರುತಿಸಲಾಗಿದೆ.

ಪಾರ್ಶ್ವವನಾಥನ ವಿಗ್ರಹ :

ಒಟ್ಟು ಏಂಟು ಪಾರ್ಶ್ವವನಾಥನ ವಿಗ್ರಹಗಳು ದೊರೆತಿವೆ. ಇವುಗಳಲ್ಲಿ ಎರಡು ರೀತಿಯಲ್ಲಿ ಕಲೆಹಾಕಲಾಗಿದೆ ಒಂದು ಪಾರ್ಶ್ವನಾಥ ಕುಳಿತಿರುವ ಭಂಗಿ ಇನೋಂದರಲ್ಲಿ ತನ್ನೇರೆಡು ಕೈಗಳನ್ನು ಕೆಳಗೆ ಬಿಟ್ಟು ಸಮ ಭಂಗಿ ಎದ್ದು ಕಾಣುತ್ತದೆ. ಮೊದಲನೆ ಭಂಗಿಯಲ್ಲಿ ಪಾರ್ಶ್ವನಾಥ ವೃತ್ತ ಪೀಠದ ಮೇಲೆ ಸಮಭಂಗಿಯಲ್ಲಿ ನಂತಿದ್ದಾನೆ. ತಲೆಯ ಮೇಲಿನ ಭಾಗ ಹಾವಿನ ಹೆಡೆಯಲ್ಲಿ ಅಲಂಕೃತಗೊಂಡಿದ್ದು ಗುಂಗುರು ಕೂದಲು ದೇಹದ ಮೇಲೆ ಗೆರೆಗಳು ಕಿರುವೃತಗಳ ಅಲಂಕರಣದದಿಂದ ಶೋಭಿಸುತ್ತದೆ. ಮೂಗು, ಕಿವಿ ಸ್ಪಷವಾಗಿವೆ. ಇನ್ನು ವಿಶೇಷವಾಗಿ ವಿಗ್ರಹವು ಕಂಡು ಬರುತ್ತದೆ ಇದರ ಕಾಲ–೧೭ ನೇ ಶತಮಾನವಾಗಿದೆ.

೨ನೇ ವಿಗ್ರಹದ ಮಾದರಿಯಲ್ಲಿ ಪಾರ್ಶ್ವನಾಥ ಪದ್ಮಾಸನದ ಯೋಗ ಭಂಗಿಯಲ್ಲಿ ಕುಳುತಿರುವುದು ತೆಲೆಯ ಮೇಲೆ ಹಾವಿನ ಒಂಭತ್ತು ಹೆಡೆಗಳು ಪಾರ್ಶ್ವನಾಥನ ಉದ್ದ ಕಿವಿಗಳು,

ಗುಂಗುರು ಕೂದಲುಗಳು ವೃತ್ತಕಾರದ ಮುಂಭಾಗದಲ್ಲಿ ಧರಸೇಂದ್ರಾ, ಪದ್ಮವತಿ ಯಕ್ಷ-ಯಕ್ಷಿಯರು ಕುಳಿತಿದ್ದಾರೆ. ಈ ವಿಗ್ರಹದ ಪೀಠಪಾದದಲ್ಲಿ ಒಂದು ಅಸ್ಪಷ್ಟವಾದ ಶಾಸನ ಕಂಡು ಬರುತ್ತದೆ. ಅದು ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ.

ಶಾಸನ ಪಾಠ :

೧ ಸಾಕ ೧೫೭೬ ನಯನಾಮ ಸಂವತ್ಸರ.....೨೦ ಶ್ರೀ ಮೊಲೆಸ

೨ ಸರಸ್ವತಿ ಗ(ಣೆ)' ನಿಲಾಸುವಗರ ವಾಪೋ.....ಶ್ರೀಗಮ್ಯಚಂಡೆ ತತ್ವದೇನಾ

೩ ಶ್ರೀಗಣ್ಮುತು ಬಯಾಪ ದೈಸಾತ ಸಂಗವಾದ ಸಾಣಾಬಾರಾಸಂವಾ: ಹುತಾವತಾಸಾ

೪ ....ಪಾರುಣ ಯಯಿತಾಂ. ೮

ಈ ಶಾಸನವು ನಾಗರೀಲಿಪಿಯುಳ್ಳ ಸಂಸ್ಕೃತ ಭಾಷೆಯದ್ದಾಗಿದೆ ಶಾಸನದ ಕಾಲ, ಹಾಗೂ ಮೂಲ ಸಂಘದ ವಿವರ ಇದೆ. ೨ನೇ ಪಾರ್ಶ್ವನಾಥನ ವಿಗ್ರಹದಲ್ಲಿ ಅರ್ಧ ವೃತ್ತಾಕಾರದ ಪೀಠದಲ್ಲಿ ಆಸೀನರಾದ ಪದ್ಮಾಸನ ರೂಡ ಪಾರ್ಶ್ವನಾಥನ ವಿಗ್ರಹವಿದೆ. ಯೋಗ ಮುದ್ರೆಯ ಕೈಗಳು ತಲೆಯ ಮೇಲೆ ೯ ಹೆಡೆಯ

ನಾಗರ ಹಾವಿನ ಕಳಶ ಕೆಳಭಾಗಲ್ಲಿ ಕನ್ನಡದಲ್ಲಿ ರಚಿತವಾದ ಒಂದು ಚಿಕ್ಕ ಶಾಸನ ಇದೆ.

ಶಾಸನ ಪಾಠ:

೧."ಸಖೆ ೧೫೭೬ ಜಯನಾಮ ಸಂವತ್ಸರ ಮಾಘ ಸು

೨. ದಸಮಿ ಸುಕ್ರವಾಸ 'ಶ್ರೀರಾಯಭಾಗದ..................

೩. ಧಾತ್ರಯ ಸಂಘ......ರಚಿಸಿನ..............................

೪. ನಭೊ........................ತಾ..............................

೫. ....ಹ.......................ಲಿಕ್ಷನಡ ಪಾ" ೯

ಈ ಶಾಸನದಲ್ಲೂ ರಾಯಭಾಗದ ವಿಷಯ ಕಾಲದ ಉಲ್ಲೇಖವಿದೆ. ಮೂರನೇ ವಿಗ್ರಹದಲ್ಲಿ ಪಾರ್ಶ್ವನಾಥ ಪದ್ಮಾಸನದಲ್ಲು ಆಸಿ ನಾಗಿರುವ ಮೂರ್ತಿಇರುವ ತಲೆಯ ಮೇಲೆ ಹಾವಿನ ಹೆಡೆಯ ಪೀಠದ ಕೇಳಗೆ ಯಕ್ಷ-ಯಕ್ಷಿಣಿರಿದ್ದಾರೆ. ವಿಗ್ರಹದ ಹಿಭಾಗದಲ್ಲಿ ಅಸ್ಪಷ್ಟವಾದ ಶಾಸನ ಇದೆ.

ನಾಲ್ಕನೇ ವಿಗ್ರಹದಲ್ಲಿ ಪಾರ್ಶ್ವನಾಥ ಕುಳಿತಿರುವುದು ತಲೆಯ ಮೇಲೆ ಏಳು ಹೆಡೆಯ ಸರ್ಪ ಪದ್ಮಸನದ ಯೋಗ ಮುದ್ರೆಯೂ ಅನೇನರಾದ ವಿಗ್ರಹವಿದೆ.ಕೆಳಗೆ ಯಕ್ಷ-

ಯಕ್ಷಿಣಿಯರಿದ್ದಾರೆ. ೫ ನೇ ವಿಗ್ರಹದಲ್ಲಿ ಪಾರ್ಶ್ವನಾಥನ ಪದ್ಮಾಸನದಲ್ಲಿ ಕುಳಿತಿರುವ ವಿಗ್ರಹವಿದ್ದು ಮೇಲೆ ಏಳು ಎಲೆಗಳ ಕಳಶವಿದ್ದು

ಹಿಂಭಾಗದಲ್ಲಿ ಅರ್ಧ ವೃತ್ತಾಕಾರದಲ್ಲಿ ಕಾಲ ೧೮ ನೇ ಶತಮಾನದವಾಗಿದೆ. ೬ ನೇ ವಿಗ್ರಹವೂ ಪಾರ್ಶ್ವನಾತನ ಪದ್ಮಾಸನದಲ್ಲಿ ಆಸೀನದ ವಿಗ್ರಹವಾಗಿದೆ ತಲೆಯ ಮೇಲೆ ಹಾವಿನ ಹೆಡೆ ಇದ್ದು ಯಾವುದೇ ಅಲಂಕಾರವಿಲ್ಲದ ನೈಜ ವಿಗ್ರಹದಿಂದ ಕೂಡಿದೆ ಸುಮಾರು ೧೯ ನೇ ಶತಮಾನದ ವಿಗ್ರಹವಿರುವ ಸಾಧ್ಯತೆ ಇದೆ. ೭ ನೇ ವಿಗ್ರಹವು ಸಹಿತ ಪದ್ಮಾಸನದಲ್ಲಿದೆ. ಮೇಲೆ ಹಾವಿನ ಹೆಡೆ ಇದ್ದು. ಕಾಲ ೧೮ ನೇ ಶತಮಾನವಾಗಿದೆ.

ತೀರ್ಥಂಕರರ ವಿಗ್ರಹಗಳು :

ಒಟ್ಟು ಆರು ತೀರ್ಥಂಕರ ವಿಗ್ರಹಗಳು ಕಂಡು ಬರುತ್ತವೆ. ಅದರಲ್ಲಿ ಹೆಚ್ಚಿಗಿ ಮಹಾವೀರನ ವಿಗ್ರಹಗಳಾಗಿದ್ದು ಮೊದಲನೆಯ ವಿಗ್ರಹವು ತೀರ್ಥಂಕರ ಸಮಾ ಭಂಗಿಯಲ್ಲಿ ಕುಳಿತಿರುವುದು ತನ್ನೆರಡು ಕೈಗಳನ್ನು ಇಳಿಬಿಟ್ಟು ಆಸೀನರಾಗಿರುವ ಚಿತ್ರ. ಗುಂಗುರು ಕೂದಲು ಕೂಡಿದ ವಿಗ್ರಹವಿದೆ. ಶಿಲ್ಪ ಶೈಲಿಯಿಂದ ಹೇಳುವುದಾದರೆ ಇದು ೧೬ ನೇ ಶತಮಾನಕ್ಕೆ ಸೇರಿದೆ. ಮೊರನೆ ವಿಗ್ರಹದಲ್ಲಿ ತೀರ್ಥಂಕರನು ನಗ್ನವಾಗಿ ತನ್ನೇರಡು ಕೈಗಳನ್ನು ಇಳಿಬಿಟ್ಟು ಸಮಭಂಗಿಯಲ್ಲಿ ನಿಂತುಕೊಂಡಿರುವ ಭಂಗಿ ಇದ್ದು ತಲೆಗೆ ಗುಂಗುರು ಕೂದಲು ಇವೆ. ವಿಗ್ರಹದ ಹಿಂಭಾಗದಲ್ಲಿ ನಾಗರಿಯ ಶಾಸನವಿದೆ. ಹಾಗೂ ಸಂಸ್ಕೃತ ಭಾಷೆಯಿಂದ ಕೂಡಿದೆ.

೧. "ಶಕೆ ೧೫೫೦ ಕಾಲು । ನಮಂ ದಶಮಿ ಪ್ರಾಮಂತ್ರಧರ್ಮನ್ತ ಷಣನ್ತೆ ಧನ. ನಿಮಫನ.

೨. ಜಾಮಾನಾಪಿ ನುಕಾಈ ಜ್ಞಾನೇತ." ೧೦

ಮೂರು, ನಾಲ್ಕು, ಐದನೇ ವಿಗ್ರಹದಲ್ಲಿ ತೀರ್ಥಂಕರನು ಪದ್ಮಾಸನದಲ್ಲಿ ಯೋಗ ಮುದ್ರೆಯಲ್ಲಿ ಆಸೀನರಾಗಿದ್ದು ಹೆಚ್ಚಿನ ವ್ಯತ್ಯಾಸ ಕಾಣುವುದಿಲ್ಲ. ಇವು ೧೮, ೧೯ ನೇ ಕಾಲದ್ದಾಗಿದೆ.

ಚಂದ್ರಪ್ರಬಾ ತೀರ್ಥಂಕರ :

ಚಂದ್ರಪ್ರಭಾ ತೀರ್ಥಂಕರರ ವಿಗ್ರಹವು ಯೋಗ ಮುದ್ರೆಯ ಪದ್ಮಾಸನದಲ್ಲಿ ಕುಳಿತಿರುವುದು ಉದ್ದ ಕಿವಿ, ತ್ರಿಕೋನಾಕಾರದಲ್ಲಿ ತಲೆ ಇದೆ. ಪೀಠದ ಸಿಂಹಗಳ ನಡುವೆ ಚಂದ್ರನ ಚಿನ್ಹೆ ಇದೆ. ಬದಿಗೆ ಯಕ್ಷ, ಯಕ್ಷಿಯರು ಕುಳಿತ್ತಿದ್ದಾರೆ. ಈ ಯಕ್ಷಿಯರ ಚಿತ್ರದ ಬದಿಗೆ ಪದ್ಮಾಸನದಲ್ಲಿ ಕುಳಿತ ತೀರ್ಥಂಕರರಿದ್ದಾರೆ. ಚಂದ್ರಪ್ರಭಾನ ಬದಿಯಲ್ಲಿ ಇಬ್ಬರು ತೀರ್ಥಂಕರರು ಸಮ ಭಂಗಿಯಲ್ಲಿ ನಿಂತಿದ್ದಾರೆ. ಚಂದ್ರಪ್ರಭುವಿನ ತೋರಣ ವಿಶಿಷ್ಟತೆಯಿಂದ ಕೂಡಿದ್ದು ಇದರ

ಕೆಳಗಡೆ ಇಬ್ಬರು ತೀರ್ಥಂಕರರು ಕುಳಿತಿದ್ದಾರೆ. ಆನೆಗಳು ಸೊಂಡಿಯನ್ನು ಮೇಲಕ್ಕೆತ್ತಿ ನಿಂತಿವೆ. ಇವುಗಳ ಜೊತೆಗೆ ಕೈಮುಗಿದ ವ್ಯಕ್ತಿಯ ಚಿತ್ರ, ಮೇಲೆ ಗಿಳಿಗಳು ಹಾಗೂ ಕಳಶದಿಂದ ಶೋಭಿತವಾಗಿವೆ. ಈ ವಗ್ರಹದ ಹಿಂಬಾಗದಲ್ಲಿ ಸಂಸ್ಕೃತ ಭಾಷೆಯಲ್ಲಿ ರಚಿತವಾದ ನಾಗರೀ ಲಿಪಿಯ ಒಂದು ಶಾಸನ ಕಂಡು ಬರುತ್ತದೆ.

ಶಾಸನ ಪಾಠ :

೧. "ಸಂವತ್ ೧೬೩೦ಯತ್ರದ ದೀಪ ಶ್ರೀ ಮೂಲ ಸಂಘೇ ॥ ಜಪ ಶ್ರೀ ಜ್ಞಾನ ತುಕ್ಷಣ.

೨. ಜಂ ಶ್ರೀ ಪ್ರಜಾಯಂ ತ್ರೋಡದೇನೊ ತೊ । ಪ್ರಾತ್ರ ಶ್ರೀ ರತ್ನ.

೩. ತುಷಣಾ : ಮರ.

೪. ಮತಿನಿತ್ಯ (ತ್ಮಾ)" ೧೧

ಪಂಚ ಪರಮೇಷ್ಠಿ ವಿಗ್ರಹ :

ತೀರ್ಥಂಕರನು ಪದ್ಮಾಸನಲ್ಲಿ ಆಸೀನರಾಗಿದ್ದಾರೆ. ಬದಿಯಲ್ಲಿ ಯಕ್ಷ-ಯಕ್ಷಿಣಿಯರು ಕುಳಿತಿದ್ದು.

ಇವರ ಮೇಲ್ಭಾಗದಲ್ಲಿ ಇಬ್ಬರು ತೀರ್ಥಂಕರನ ತಲೆಯ ಮೇಲೆ ಮುಕ್ಕೋಡೆಯಿದೆ. ಕೀರ್ತಿ ಮುಖವನ್ನು ಒಳಗೊಂಡಿದೆ. ಈ ವಿಗ್ರಹದ ಹಿಂಬಾಗದಲ್ಲಿ ಸಂಸ್ಕೃತ ಭಾಷೆಯ ನಾಗರೀ ಲಿಪಿಯನ್ನೊಳಗೊಂಡ ಶಾಸನ ಕಂಡು ಬರುತ್ತದೆ. ಅದು ಈ ರೀತಿಯಲ್ಲಿ ವ್ಯಕ್ತವಾಗಿದೆ.

ಶಾಸನ ಪಾಠ :

೧. "ಶಕ ೧೫೮೮ ವಿಲಂಬ ನಾಮ

೨. ಸಂವತ್ಸರ ಪಾಲ್ಗುಣ ಸುದ್ದ ಶ್ರೀ

೩. ಮೂಲ ಸಂಘ ಸಲಲಾಕೆ ಗಯೋಉಂಜ ಶ್ರೀ ಧರ್ಮ

೪. ನುವನ್ನೊ ಪದೇಶ ಕಲಜಾತಿ ಯವವನಿ

೫. ಯಾಗೂಣ್ಣೀ ಸಂಘ ವಿಹಃ ಮೂತನ ಜಾಯಾಪೂತಲಾ

೬. ಹಿತಯೋಃ ಪೂಂ ಸಂಘವಾದೇ ಮಾಸುತ । ೦ವಾಗಾಯಿತಯೊ

೭. ಪೂತ್ರೋಃ ಸಮಾಣಿಕ ಸತಃ ನಾರಂ ಗಾಯಿತ ಪುತ್ರವಾಸ ಪೂಜ್ಯ ಶ್ರೇಯಂಷು

೮. ದ್ವಿತೀಯ ಸೂತಸಃ ತವತಾಸ ಸಸ್ಪತಾಂ ಎಸಾಯಿಯತೆ ನಿತ್ಯ

೯. ಪಂಚ ಪರಮೇಷ್ಠ ಬೀಸಪ್ರಯೋ ವಂತಿ | ಶ್ರೀ ರಸ್ಯ" ೧೨

ಬಾಹುಬಲಿ :

ಒಂದೇ ಒಂದು ಬಾಹುಬಲಿ ವಿಗ್ರಹ ಮಾತ್ರ ದೊರೆತಿದ್ದು ಸಮಭಂಗಯಲ್ಲಿ ಎರಡು ಕೈಗಳುನ್ನು ಇಳಿಬಿಟ್ಟು ನಿಂತಿರುವುದು ಕಾಲು ಕೈಗಳು ಸುತ್ತ ಬಳ್ಳಿ ಹಬ್ಬಿಕೊಂಡಿದ್ದು ಉದ್ದ ಕಿವಿಯಿಂದ ಆವೃತಗೊಂಡಿದೆ. ವಿಗ್ರಹದ ಶೈಲಿ ರಚನೆಯಿಂದ ಇದು ೧೭ನೇ ಶತಮಾನಕ್ಕೆ ಸೇರುತ್ತದೆ.

ಪಾದುಕೆಗಳು :

ಒಟ್ಟು ಮೂರು ಪಾದುಕೆಗಳು ದೊರೆತಿದ್ದು ಮೊದಲನೇ ಪಾದುಕೆ ಪೀಠ ಚೌಕಾಕಾರವಾಗಿದ್ದು ಮೇಲ್ಗಡೆ ಅಚ್ಚನ್ನು ಕಟ್ಟಲಾಗಿದೆ. ಹೀಗೆ ಮೊರನೇ ಪಾದುಕೆಯು ರಚನೆ ಶೈಲಿ ನೋಡಿದರೆ ೧೭ನೇ ಶತಮಾನಕ್ಕೆ ಸೇರುತ್ತದೆ. ಹೇಗೆ ಮೊರನೇ ಪಾದುಕೆಯು ಇದೇ ರೀತಿಯಲ್ಲಿ ಕಂಡು ಬಂದಿದೆ.ಎರಡನೇ ಪಾದ ಪೀಠದ ಕೆಳಭಾಗದಲ್ಲಿ ವಿಸ್ತಾರವಿದ್ದು ಜೋಡು ಪಾದಗಳಿಂದ ಕೂಡಿದೆ ಸುತ್ತ ಅಂಚಿನ ಪಟ್ಟಿ ಇದೆ ಪೀಠದ ಮುಂಬಾಗದಲ್ಲಿ ಸಂಸ್ಕೃತ ಭಾಷೆಯ ನಾಗರೀ ಶೈಲಿಯಲ್ಲಿ ಸಣ್ಣ ಕಿರು ಶಾಸನವಿದೆ.

ಒಟ್ಟಿನಲ್ಲಿ ರಾಯಬಾಗದಲ್ಲಿ ಇಲ್ಲಿಯವರಿಗೆ ಸುಮಾರು ಹಲವು ಜೈನರ ಮೂಲ ಕುರುಹುಗಳನ್ನು ಸಾಕ್ಷಿಕರಿಸುತ್ತವೆ. ಇವುಗಳ ಕಲಾ ಇತಿಹಾಸ ವೈವಿದ್ಯವಾಗಿದ್ದು ೧೭,೧೮,೧೯ ನೇ ಶತಮಾನಕ್ಕೆ ಸೇರುತ್ತವೆ. ಇವೆಲ್ಲವುಗಳನ್ನು ನೋಡಿದಾಗ ರಾಯಬಾಗವು ಜೈನರ ಕ್ಷೇತ್ರವಾಗಿತ್ತೆಂಬುದಕ್ಕೆ ಇಲ್ಲಿರುವ ಜೀನಾಲಯ ಹಾಗೂ ತೀರ್ಥಂಕರರ ವಿಗ್ರಹಗಳು ಪಾದುಕೆಗಳು ಮುಂತಾದವುಗಳು ತನ್ನದೇ ಆದ ಮಹತ್ವವನ್ನು ಸಾರುತ್ತವೆ. ಈ ಹಿನ್ನಲೆಯಲ್ಲಿ ರಾಯಬಾಗದ ಜೈನ ಜೀನಾಲಯಗಳನ್ನು ನೋಡಲಾಗಿದೆ.

ರಾಯಬಾಗದ ಶೈವ ದೇವಾಲಯಗಳು :

ರಾಯಬಾಗ ಪರಿಸರದಲ್ಲಿ ಶೈವ ಪರಂಪರೆಯುಳ್ಳ ದೇವಾಲಯಗಳು ಕಂಡು ಬರುತ್ತವೆ. ಮೂಲತಃ ಜೈನ ದೇವಾಲಯಗಳಿಗಿಂತ ಭಿನ್ನವಾದ ಈ ದೇವಾಲಯಗಳು ತಮ್ಮದೇ ಆದ ತತ್ವಗಳಿಗೆ ಅನುಗುಣವಾಗಿ ನಿರ್ಮಾಣವಾಗಿವೆ. ಇಲ್ಲಿ ಪುರಾತನ ಹಾಗೂ ಆಧುನಿಕ ದೇವಾಲಯಗಳೆರಡು ರಾಯಬಾಗದಲ್ಲಿ ಕಂಡು ಬರುತ್ತವೆ ರಾಯಬಾಗದಲ್ಲಿ ಶಿವನ ಆರಾಧಕರು

ಇಲ್ಲಿ ಇರುವುದರಿಂದ ಈ ದೇವಾಲಯಗಳಿಗೆ ಅತ್ಯಂತ ಮಹತ್ವವನ್ನು ಪಡೆದಿವೆ. ಅಂತಹ ದೇವಾಲಯಗಳಲ್ಲಿ ಸಿದ್ದೇಶ್ವರ ದೇವಾಲಯ, ಸೋಮನಾಥ ದೇವಾಲಯ, ಬಂಕನಾಥ ದೇವಾಲಯ ಪ್ರಮುಖವಾದವುಗಳು ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಸಿದ್ದೇಶ್ವರ ದೇವಾಲಯ :

ಸಿದ್ದೇಶ್ವರ ದೇವಾಲಯವು ರಾಯಬಾಗ ಪ್ರಮುಖ ದೇವಾಲಯವಾಗಿದೆ. ಸಿದ್ದೇಶ್ವರನು ರಾಯಬಾಗ ಗ್ರಾಮ ದೇವರಾಗಿದ್ದು ರಾಯಬಾಗದ ಪಶ್ಚಿಮ ದಿಕ್ಕಿನಲ್ಲಿ ನಿರ್ಮಾಣಗೊಂಡಿದೆ.

ದೇವಾಲಯಗ ಹೆಸರು – ಸಿದ್ದೇಶ್ವರ

ಮೂರ್ತಿ – ಲಿಂಗ ಮತ್ತು ನಂದಿ

ಶಿಲೆ – ಕಪ್ಪು ಶಿಲೆ

ಸ್ವರೂಪ – ದುಂಡು ಶಿಲ್ಪ

ಕಾಲ – ವಿಜಾಪೂರದ ಆದಿಲ್ ಶಾಹಿ ಆಡಳಿತಾವಧಿ

ಸಿದ್ದೇಶ್ವರ ದೇವಾಲಯವು ಎತ್ತರವಾದ ಕಟ್ಟೆಯ ಮೇಲೆ ನಕ್ಷತ್ರಾಕಾರದಲ್ಲಿ ನಿರ್ಮಾಣಗೊಂಡಿದ್ದು ಗರ್ಭಗಡೆ ಒಳಗೆ ಹೊರಗೆ ಕಮಾನುಗಳನ್ನು ಒಳಗೊಂಡಿದ್ದು. ಮುಖ ಮಂಟಪಕ್ಕೆ ಮೂರು ಕಡೆಯಿಂದ ಪ್ರವೇಶ ದ್ವಾರವಿದೆ. ಗರ್ಭಗೃಹದಲ್ಲಿ ಶಿವಲಿಂಗ ನಂದಿ ವಿಗ್ರಹಗಳಿದ್ದು ಮುಖ್ಯ ಪ್ರವೇಶ ದ್ದಾರದಲ್ಲಿ ನಾಲ್ಕು ಕಂಬಗಳುಳ್ಳ ನಗಾರಿ ಕಾನೆಯಿದೆ. ಇದು ವಿಜಾಪೂರದ ಆದಿಲ್ ಶಾಹಿಗಳ ಆಡಳಿತಾವಧಿಯಲ್ಲಿ ರಚನೆಯಾಗಿದೆ. ಇದು ಆ ದೇವಾಲಯದ ಶಿಲ್ಪ ಕಲೆಯಲ್ಲಿ ಮಾಡಿಬಂದಿದೆ. ಸಿದ್ದೇಶ್ವರ ದೇವಾಲಯದ ಮಂಟಪ ಹೊಂದಿದ್ದು ಗರ್ಭಗೃಹದಲ್ಲಿ ಲಿಂಗವು ಉತ್ತರಾಭಿಮುಖವಾಗಿ ಪ್ರತಿಷ್ಠಾಪಿತಗೊಂಡಿದೆ.

ಲಿಂಗದ ಸರ್ವಭಾಗವು ೧೦ ಸೆ.ಮಿ ಎತ್ತರವಿದ್ದು ೧೮ ಸೆ.ಮಿ ಸುತ್ತಳತೆ ಹೊಂದಿದೆ ಪೀಠದ ಎತ್ತರವು ೧೮ ಸೆ.ಮಿ ಇದೇ ಫಾಣಿ ಪೀಠದ ಉದ್ದ ೫೨ ಸೆ.ಮಿ ಇದೆ. ಸಭಾ ಮಂಟಪದಲ್ಲಿರುವ ನಂದಿ ಪಶ್ಚಿಮಾಭಿಮುಖವಾಗಿ ಇದೆ. ದೊಡ್ಡದಾಕಾರದ ನಂದಿ ಮೂರ್ತಿಯ ಹಣೆ ಪಟ್ಟಿಯನ್ನು ಒಳಗೊಂಡ ಎರಡು ಸುತ್ತಿನ ಸುಂದರವಾದ ಕೆತ್ತನೆಯ ಸರಪಳಿ ಇದೆ. ಹಾಗೂ ವಿಶಾಲವಾದ ಗೆಜ್ಜೆ ಸರ ಹಾಗೂ ಘಂಟೆಗಳ ಸರಮಾಲೆಯನ್ನು ಕೊರಳಲ್ಲಿ ಧರಿಸಿದೆ. ನಂದಿ ವಿಗ್ರಹವು ಹಿಂಗಾಲನ್ನು ಮಡಚಿಕೊಂಡು ಹೊಟ್ಟೆಯ ಕೆಳಭಾಗದಲ್ಲಿ ಇರಿಸಿಕೊಂಡಿದ್ದು ಮುಂದಿನ ಕಾಲು ಅರ್ಧ ಮಡಚಿ ತನ್ನ ಎಡಗಾಲನ್ನು ಎದೆಯ ಕೆಳಗೆ ಹಾಕಿ ಕೊಂಡಿದೆ. ಕುಳಿತಿರುವ ಈ ನಂದಿ ವಿಗ್ರಹವು ಎತ್ತರದಕ್ಕೆ ೬೦ ಸೆ.ಮಿ, ಇದ್ದು ಅಗಲ ೪೫ ಸೆ.ಮಿ, ಇದೆ ಜೊತೆಗೆ ನಂದಿ ಯ ಉದ್ದವು ೧೫೦ ಸೆ.ಮಿ, ಇರುವುದು, ಸಿದ್ದೇಶ್ವರ ದೇವರ ಜಾತ್ರೆಯು ಪ್ರತಿ ವರ್ಷ ಶ್ರಾವಣ

ಮಾಸದಕೊನೆಯ ಶ್ರಾವಣ ಸೋಮವಾರದಂದು ಜರುಗುವದು.ಈ ದೇವಾಲಯವು ಪುನರುಜ್ಜೀವನ ಗೊಂಡಿದ್ದು ಕಂಡು ಬರುತ್ತದೆ. ಇದು ಇಂಡೋ ಇಸ್ಲಾಂಮಿಕ ಶೈಲಿಯಲ್ಲಿ ರಚನೆಯಾಗಿದೆ.

ಸಿದ್ದೇಶ್ವರ ದೇವಾಲಯ ಮುಂದೆ ಚೌಕಾಕಾರದ ಕಟ್ಟೆಯಿದೆ. ಬೇವಿನ ಮರಕ್ಕೆ ಸುತ್ತಲು ಕಟ್ಟೆ, ಕಟ್ಟೆಯ ಸುತ್ತಲು ೧೬ ಲಿಂಗಗಳಿವೆ, ಈ ಲಿಂಗಗಳ ನಡುವೆ ಚಿಕ್ಕದಾದ ಆಚಿಜನೇಯನ ವಗ್ರಹವು ಕಂಡು ಬರುತ್ತದೆ. ಭಕ್ತಾದಿಗಳು ದಿನಂಪ್ರತಿಯಾಗಿ ಈ ಕಟ್ಟೆಗೆ ಪ್ರದಕ್ಷಿಣೆಯನ್ನು ಹಾಕುತ್ತಾರೆ. ದೇವಾಲಯದ ಆವರಣದಲ್ಲಿ ಗಂಡಬೇರುಂಡ ಮೂರ್ತಿಯ ಲಾಂಚನ ಸಿಕ್ಕಿದೆ. ಈ ಲಾಂಚನ ಊಹೆಯ ಪ್ರಕಾರ ದೇವಾಲಯವನ್ನು ಮೊದಲಿಗೆ ರಾಷ್ಟ್ರಕೂಟರು ಕಟ್ಟಿರುವ ಸಾಧ್ಯತೆ ಇದೆ. ನಂತರ ಅದು ವಿಜಾಪುರ ಆದಿಶಾಹಿಗಳ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ.

ಸೋಮನಾಥ ದೇವಾಲಯ :

ದೇವಾಲಯ ಹೆಸರು – ಸೋಮನಾಥ

ಮೂರ್ತಿ – ಲಿಂಗ ಮತ್ತು ನಂದಿ

ಶಿಲೆ – ಕಪ್ಪು ಶಿಲೆ

ಮೂರ್ತಿ ಸ್ಥಳ – ಗರ್ಭಗುಡಿ

ಶೈಲಿ – ಕಲ್ಯಾಣ ಚಾಲುಕ್ಯರ ಶೈಲಿ

ಶಿಖರದ ಶೈಲಿ – ಕದಂಬ ನಾಗರ ವಾಸ್ತುಶಿಲ್ಪ ಶೈಲಿ

ಸ್ವರೂಪ – ದುಂಡು ಶಿಲ್ಪ

ಪರಿವಾರ – ಗಣಪತಿ

ಸೋಮನಾಥ ದೇವಾಲಯವು ರಾಯಬಾಗದ ಪೂರ್ವ ಭಾಗದಲ್ಲಿದೆ. ಈ ದೇವಾಲಯವು ಕಲ್ಯಾಣ ಚಾಲುಕ್ಯರ ಕಲಾಶೈಲಿಗೆ ಉತ್ತಮ ನಿದರ್ಶನವಾಗಿದೆ ಮೂಲತವಾಗಿ ಈ ದೇವಾಲವು ದ್ವಿಕೊಟಾಚಲವಾಗಿದ್ದು ಈಗ ಒಂದೇ ಗರ್ಭ ಒಂದೇ ಗರ್ಭ ಗೃಹ ಉಳಿದಿದೆ ಶಿಖರವು ಕದಂಬ ನಾಗರ ವಾಸ್ತು ಶಿಲ್ಪದ ಶೈಲಿಯನ್ನು ಒಳಗೊಂಡಿದ್ದು ನಂದಿಯ ದೊಡ್ಡ ಮೂರ್ತಿಯನ್ನು ಪ್ರತಿಷ್ಠಾಪಿಸಲು ಕೆಲವು ಐತಿಹ್ಯಗಳು ಕಂಡು ಬರುತ್ತವೆ. ಅದರಲ್ಲಿ ನಂದಿಯ ಮೂರ್ತಿಯನ್ನು ಶೈವರು ಯಾಕೆ ಸ್ಥಾಪಿಸುಸುತ್ತಾರೆ ಎಂಬುದಕ್ಕೆ ಈ ಹೇಳಿಕೆಯಿಂದ ವ್ಯಕ್ತವಾಗುತ್ತದೆ ಲಿಂಗದಿಂದ ಪ್ರತ್ಯಕ್ಷವಾಗಿರುವ ಶಿವನು ಆತನ ವಾಹನವಾದ ನಂದಿಯನ್ನು ಸ್ಥಾಪಿಸಲು ಶೈವರು ಅನೇಕ ದೇವಾಲಯಗಳಲ್ಲಿ ಈ ತರಹದ ನಂದಿ ಮೂರ್ತಿಗಳನ್ನು ಸ್ಥಾಪಿಸುತ್ತಾರೆ ಶಿವನ

ಮುಂದುವರಿದ ಅವತಾರವೇ ಮುಂದುವರಿದ ಅವತಾರವಾಗಿದೆ. ನಂದಿಯನ್ನು ಸಂತೃಪ್ತಗೊಳಿಸುವ ಮೂಲಕ ಶಿವನು ನಂದಿಕೇಶ್ವರನಾಗಿ ಅವತಾರ ಎತ್ತುತ್ತಾನೆ ಎಂಬುದು ಕೆಲ ಪುರಾನಗಳಲ್ಲಿ ತಿಳಿದು ಬರುತ್ತದೆ. ರಾಯಬಾಗದ ಪ್ರದೇಶದಲ್ಲಿಯ ನಂದಿಯನ್ನು ಲಿಂಗದ ಮುಂದೆ ನವರಂಗದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಕೆಲವು ಕಡೆ ಪ್ರತ್ಯೇಕ ಮಂಟಪಗಳಲ್ಲಿ ಪ್ರತಿಷ್ಠಾಪಿಸಿದ್ದಾರೆ. ಸಾಮಾನ್ಯವಾಗಿ ಎಲ್ಲ ಶೈವ ದೇವಾಲಯಗಳ ಮುಂದೆ ವಿಗ್ರಹವಿರುತ್ತದೆ. ನಂದಿಯ ರಚನಾ ಭಂಗಿ ತಲೆಯನ್ನು ಬಗ್ಗಿಸಿದಂತೆ ಕುತಿರುವುದು ಬಲ ಭಾಗವನ್ನು ಮುಂದಕ್ಕೆ ಚಾಚಿ ಅರ್ಧ ಮಡಿಸಿಕೊಂಡು ದೈನ್ಯತೆಯ ಮನೋಭಾವದಿಂದ ಕೂಡಿರುವ ಶಿಲ್ಪ ಎದ್ದು ಕಾಣುತ್ತದೆ. ಕೊರಳಲ್ಲಿ ಗೆಜ್ಜೆ ಸರ, ಘಂಟೆ ಕೆಲವು ನಂದಿ ವಿಗ್ರಹಗಳಿಗೆ ಭಕ್ತರು ವಿಶೇಷ ಹಬ್ಬಹರಿದಿನಗಳಲ್ಲಿ ಗಲೀಫನ್ನು ಹಾಕಿ ಶೃಂಗಾರಗೊಳಿಸುತ್ತಾರೆ. ಹೀಗೆ ಇಲ್ಲಿಯ ನಂದಿ ಮೂರ್ತಿಯು ಎದ್ದು ಕಾಣುತ್ತದೆ.

ಸೋಮನಾಥ ದೇವಾಲಯವು ಗರ್ಭಗುಡಿ, ಅರ್ಧಮಂಟಪ ಹಾಗೂ ಸಭಾ ಮಂಟಪದಿಂದ ಕೂಡಿದ್ದು ಒಟ್ಟು ಎರಡು ನಂದಿ ವಿಗ್ರಹಗಳು ಇಲ್ಲಿ ಕಂಡು ಬರುತ್ತವೆ. ಎರಡು ಪ್ರವೇಶದ್ವಾರವನ್ನು ಒಳಗೊಂಡಿದೆ. ಒಂದು ಪೂರ್ವಕ್ಕೆ, ಎನ್ನೊಂದು ಪಶ್ಚಿಮಕ್ಕೆ ಇವುಗಳಿಗೆ ಅಭಿಮುಖವಾಗಿ ನಂದಿ ವಿಗ್ರಹಗಳಿವೆ ಗರ್ಭಗುಡಿಯಲ್ಲಿರುವ ಲಿಂಗವು ಕಪ್ಪು ಶಿಲೆಯ ಸುಂದರವಾದ ಕೆತ್ತನೆಯಿಂದ ಕೂಡಿದ್ದು ಲಿಂಗದ ಯೋಗಿ ಪೀಠವು ಉತ್ತರಾಭಿಮುಖವಾಗಿದ್ದು ಪೀಠವು ಮೂರು ಹಂತಗಳನ್ನು ಒಳಗೊಂಡಿದೆ. ಒಟ್ಟು ಪೀಠದ ಎತ್ತರ ೩೪ ಸೆ. ಮಿ. ಹಾಗೂ ಯೋಗಿ ಪೀಠದ ಉದ್ದ ೬೬ ಸೆ. ಮಿ. ಇವುಗಳ ಜೊತೆಗೆ ಇತ್ತಿತಲಾಲಿ ಒಂದು ಹೊಸ ಲಿಂಗವನ್ನು ಸ್ಥಾಪಿಸಿದ್ದರೆ.

ನೆಲಮಟ್ಟಕ್ಕಿಂತ ಐದಾರು ಅಡಿ ಕೆಳಗಿರುವ ಮಂದಿರವು ದಕ್ಷಿಣ ಹಾಗೂ ಪೂರ್ವದಿಸೆಗಳಿಗೆ ಪ್ರವೆಶ ದ್ವಾರವನ್ನು ಹೊಂದಿದ್ದು ದ್ವಿಕೂಟಾಚಲ ಮಾದರಿಯದ್ದಾಗಿದೆ. ಪರಿಪೂರ್ಣ ಅವಸ್ಥೆಯ ಮಂದಿರವಾದ ಇಲ್ಲಿ ಮುಖಮಂಟಪ, ನವರಂಗ, ಸುಖನಾಶಿ ಹಾಗೂ ಗರ್ಭಗೃಹಗಳೆಂಬ ವಿಭಾಗಗಳಿದ್ದು ಅಚ್ಚುಕಟ್ಟಾದ ವಾಸ್ತುಶಿಲ್ಪವನ್ನು ಹೊಂದಿದೆ. ಎರದು ಕಡೆ ಇರುವ ಮುಖ ಮಂಟಪಗಳು ಚಿತ್ತಾಕರ್ಷವಾಗಿದ್ದು ಪ್ರವೆಶದ್ವಾರದ ಹೆಬ್ಬಾಗಿಲ ಮೇಲೆ ಗಣೇಶನ ಚಿತ್ರವನ್ನು ಕೆತ್ತಲಾಗಿದೆ. ಅಕ್ಕಪಕ್ಕದಲ್ಲಿರುವ ಶಿಲಾಬೋದಿಕೆಗಳು ನುಣುಪಾಗಿದ್ದು ಆಕರ್ಷಕ ಕೆತ್ತನೆಯನ್ನು ಒಳಗೊಂಡಿದೆ. ಮುಖಮಂಟಪ ಹಾಗೂ ನವರಂಗಗಳ ಹೊರಗೊಡೆಗಳು ವಿಶೇಷ ದೃಶಗಳನೊಳಗೊಂಡಿದ್ದು ಕೆಳಸಾಲಿನಲ್ಲಿ ಎದ್ದು ನಿಂತ ಸಿಂಹಗಳ ಸಾಲುಗಳು, ಅದರ ಮೇಲೆ ಶಿಲಾವಲ್ಲರಿ ಅದರ ಮೇಲೆ ನೃತ್ಯ ಮಾಡುವ, ಮದ್ದಳೆ ನುಡಿಸುವ ಹಾಗೂ ಕುಳಿತ ಭಂಗಿಯ ಹೆಣ್ಣು, ಗಂಡುಗಳ ಚಿತ್ರಗಳು, ವಿವಿಧ ವಾದ್ಯಗಳನ್ನು ನುಡಿಸುವ ಸ್ತ್ರೀ ಚಿತ್ರಗಳು ಗಮನಸೆಳೆಯುತ್ತನೆ.

ಗರ್ಭಗುಡಿಯ ಶಿವಲಿಂಗ ಹಾಗೂ ನವರಂಗದಲ್ಲಿರುವ ನಂದಿ ವಿಗ್ರಹಗಳು ತೃಟಿತಗೊಂಡಿದ್ದರಿಂದ ೧೯೯೯ ರಲ್ಲಿ ಚಿಕ್ಕದಾದ ನಂದಿ ಶಿನಲಿಂಗಗಳನ್ನು ಶಾಸ್ತ್ರೋಕ್ತವಾಗಿ ಅವುಗಳ ಪಕ್ಕದಲ್ಲಿಯೇ ಪ್ರತಿಷ್ಠಾಪನೆ ಮಾಡಿ ನಿತ್ಯವೂ ಪೂಜಿಸುತ್ತಾ ಬಂದಿದ್ದಾರೆ. ಗುಡಿಯ ಮೇಲೆ ಕೊಲ್ಲಾಪುರದ ಸಂಸ್ಥಾನಿಕರು ಕಳಶವನ್ನು ನಿರ್ಮಿಸಿದರು.

ಪ್ರಾಚೀನವಾದ ಲಿಂಗ ಭಿನ್ನವಾಗಿದ್ದು ಹೊಸ ಲಿಂಗವನ್ನು ಸ್ಥಾಪಿಸಿದ್ದಾರೆ. ಸಭಾ ಮಂಟಪದಲ್ಲಿ ಈ ನಂದಿಯವು ನಾಲ್ಕು ಮಧ್ಯ ಪಚ್ಚಿಮಾಭಿಮುಖವಾಗಿ ಇದ್ದು ಕೂರಳಲ್ಲಿ ಘಂಟೆ ಸರ ಗೆಜ್ಜೆ ಸರದಿಂದ ಕೂಡಿದೆ ವಿಗ್ರಹವು ೪೫ ಸೆ. ಮಿ. ಎತ್ತರವಾಗಿದ್ದು ೫೦ ಸೆ. ಮಿ. ಅಗಲವಾಗಿದ್ದು ಉದ್ದ ೧೫೦ ಸೆ. ಮಿ. ಕೂಡಿದೆ. ಈ ದೇವಾಲಯದ ಸಭಾ ಮಂಟಪದ ಮೆಲ್ಚವಣೆಯನ್ನು ನಕ್ಷತ್ರಾಕಾರದ ಹೂಗಳ ಶಿಲ್ಪದಿಂದ ಬಿಡಿಸಿದ್ದು ಇವುಗಳನ್ನು ಬಂಡೆಗಲ್ಲಿನ ಸಹಾಯದಿಂದ ಕಟ್ಟಿರುತ್ತಾರೆ. ಈ ದೇವಾಲಯದ ಹೊರಗಡೆ ಮೂರು ಗಣಪತಿ ವಿಗ್ರಹಗಳಿದ್ದು, ಈ ಮೂರ್ತಿ ಗಣಪತಿಗಳು ಕಿರೀಟಧಾರಿಗಳಾಗಿದ್ದಾರೆ. ಗಣಪತಿಯ ಸೊಂಡಿ ಏಡಕ್ಕೆ ವಾಲಿದ್ದು, ಚರ್ತುಭುಜ ಮೂರ್ತಿಗಳಾಗಿವೆ. ಈ ಮೂರ್ತಿಗಳು ಮೊದಕ ಪಾತ್ರೆಯನ್ನು ಹಿಡಿದು ಸೊಂಡಿಲಿನಿಂದ ಮೊದಕ ತಿನ್ನುವಂತೆ ತೋರುತ್ತದೆ. ಇವುಗಳು ಪ್ರಸನ್ನ ಗಣಪತಿಯ ಮೂರ್ತಿಗಳಾಗಿವೆ. ಗಣಪತಿಯ ವಾಹನವಾದ ಇಲಿಯು ಪೀಠದ ಕೆಳಭಾಗದಲ್ಲಿ ಕಂಡು ಬರುತ್ತದೆ, ಹೀಗೆ ಸೋಮನಾಥ ದೇವಾಲಯದ ವಿಶಿಷ್ಟ ಕಲಾ ನೈಪುನ್ಯತೆ ಹೊಂದಿದ ದೇವಾಲಯವಾಗಿ ಕಂಡು ಬರುತ್ತದೆ. ದೇವಾಲಯದ ಹೊರಗೋಡೆಯ ಮೇಲ್ಬಾಗದಲ್ಲಿ ಸಂಗಿತ ಮೇಳ ಹಾಡುಗಾರರು ವಾದ್ಯ ಬಾರಿಸುವವರು ನರ್ತಕಿಯ ಚಿತ್ರಗಳು ಕಲ್ಲಿನಲ್ಲಿ ಕೆತ್ತಲಾಗಿದೆ. ಹೀಗೆ, ಶೈವ ದೇವಾಲಯಗಳಲ್ಲಿ ಪ್ರಮುಖವಾ ದೇವಾಲಯವಾಗಿ ಸೋಮನಾಥ ದೇವಾಲಯ ಹೊರ ಬಂದಿದೆ.

ಬಂಕನಾಥ ದೇವಾಲಯ :

ಬಂಕನಾಥ ದೇವಾಲಯ 'ಬಾಗಿ ಬಂಕನಾಥ' ಎಂದೇ ಹೇಳಬಹುದು ಈ ದೇವಾಲಯವು ರಾಯಬಾಗದ ಪೂರ್ವ ಭಾಗದಲ್ಲಿದ್ದು ಇದು ಮೂರ್ವಾಭಿಮುಖವಾಗಿ ಇದೆ. ದೇವಾಲಯದ ಸ್ವರೂಪ ಈ ಕೆಳಗಿನಂತಿದೆ.

ದೇವಾಲಯದ ಹೆಸರು – ಬಂಕನಾಥ (ಬಾಗಿ)

ಮೂರ್ತಿ – ಲಿಂಗ ಮತ್ತು ನಂದಿ

ಸ್ವರೂಪ – ದುಂಡು ಶಿಲ್ಪ

ಕಾಲ	– ಮಧ್ಯಕಾಲ
ದಿಕ್ಕು	– ಪೂರ್ವಾಭಿಮುಖ
ಶಿಲೆ	– ಕಪ್ಪು ಶಿಲೆ
ಶೈಲಿ	– ಚಾಲುಕ್ಯಶೈಲಿ
ಪರಿವಾರ	– ಗಣಪತಿ & ನಂದಿ

ಬಂಕನಾಥ ದೇವಾಲಯವು ಕಿರಿದಾದ ದ್ವಾರದಿಂದ ಗರ್ಭಗೃಹ ಮತ್ತು ಮುಖ ಮಂಟಪ ಮಾತ್ರ ಬಳಸಿಕೊಂಡಿದೆ. ಈ ದೇವಸ್ಥಾನಕ್ಕೆ ನವರಂಗವಿಲ್ಲ. ಇದು ಚಾಲುಕ್ಯ ಶೈಲಿಯ ದೇವಾಲಯವಾಗಿದ್ದು ಪಕ್ಕದಲ್ಲಿ ಪುರಾತನವಾದ ಮಟ್ಟಿಲುಗಳಿಂದ ಕೂಡಿದ ಕೆರೆ ಇದೆ. ಈ ಕೆರೆಯ ಅಕ್ಕ-ಪಕ್ಕದಲ್ಲಿ ಹೂವಿನ ಸಶಿಯು ಇದ್ದು ಅವುಗಳಿಂದ ಹೂವಿನ ಎಂಬ ಹೆಸರು ಬಂದಿದೆ. ಬಂಕನಾಥ ದೇವಾಲಯದಿಂದ ಬಾಗಿ ಎಂಬ ಹೆಸರು ಕೂಡಿ ಬಾಗಿ ಬಂಕನಾಥವಾಗಿದೆ. ಇದು ಪ್ರಾಚೀನ ಹೆಸರೂ ಹೂವಿನ ಬಾಗಿ ಹೂವ ಭಾಗಿ ಎಂಬುದು ಇಲ್ಲಿ ಸ್ಮರಿಸಬಹುದು. ಕೆರೆಯ ಬಲಗಡೆಗೆ ಕಂಬಗಳಿಂದ ಮಂಟಪವಿದ್ದು ಬಂಕನಾಥನ್ನು ಸಿದ್ದ ದೇವರೆಂದು ಕರೆಯುತ್ತಾರೆ.

ಬಂಕನಾಥ ದೇವಾಲಯವಾಗುವು ನವೀಕರಣಗೊಂಡ ಪ್ರಾಚೀನ ಮಂದಿರವಾಗಿದ್ದು ಚಿಕ್ಕವು ಚೊಕ್ಕವು ಆದ ಮಂದಿರ ಇದಾಗಿದೆ. ಈ ಮಂದಿರವೂ ಶಿವಲಿಂಗ ಶಿಲ್ಪ ಮೂರ್ತಿ ವೃಷಭ, ಇವೆರಡು ಶೈವ ಗುರು ಪರಂಪರೆಯಲ್ಲಿ ಕಂಡು ಬರುತ್ತದೆ. ಶೈವ ಪರಂಪರೆಯಲ್ಲಿ ಹಿರಿದಾದ ಸ್ಥಾನ ಪಡೆದಿರುವ ಭಾಗಿಯ ಬಂಕನಾಥ ಶೈವ ಧರ್ಮಕ್ಕೆ ಹೊಸ ಸ್ಫೂರ್ತಿ ನೀಡಿದ ಮಹಾಗುರು ಎನಿಸಿ ಹೋಗಿದ್ದಾರೆ. ಈ ಬಂಕನಾಥ ಹೆಸರಿನಿಂದಲೇ ರಾಯಬಾಗಕ್ಕೆ 'ಬಾಗಿ' ಎಂಬ ಹೆಸರು ಬಂದಿರುವುದನ್ನು ನಾವು ಅಲ್ಲಗಳೆಯುಂತಿಲ್ಲ. ಬಂಕನಾಥ ದೇವಾಲಯ ಕುರಿತು ಸ್ಥಳೀಯರು ಒಂದು ಐತಿಹ್ಯವನ್ನು ಹೇಳುತ್ತಾರೆ. ದೈತ್ಯರು ಈ ದೇವಸ್ಥಾನವನ್ನು ಒಂದೇ ರಾತ್ರಿಯಲ್ಲಿ ನಿರ್ಮಿಸಲಿಕ್ಕೆ ಪ್ರಾರಂಭಿಸಿದರಂತೆ ಅದಕ್ಕಾಗಿ ಆ ದೈತ್ಯರಿಗೆ ಏಳು ಕೊಪ್ಪರಿಗೆ ಚಿನ್ನವನ್ನು ಕೊಡುವುದಾಗಿ ಮಾತು-ಕತೆಯನ್ನು ಮಾಡಿಕೊಂಡಿದ್ದರಂತೆ, ದೈತ್ಯರು ಸಂಪೂರ್ಣವಾಗಿ ದೇವಸ್ಥಾನವನ್ನು ನಿರ್ಮಾಣ ಮಾಡಿ ಜಿಡ್ಡಿ ಬಾಗಿಲನ್ನು ಹಚ್ಚುವುದನ್ನು ಮರೆತರಂತೆ ಆದ್ದರಿಂದ ಆ ದೇವಸ್ಥಾನ ಮತ್ತೆ ಕುಸಿದು ಕೆಳಕ್ಕೆ ಬಿತ್ತಂತೆ ಎಂಬ ಮಾಹಿತಿಯನ್ನು ಸ್ಥಳಿಯರು ನೀಡುತ್ತಾರೆ.

ಒಟ್ಟಿನಲ್ಲಿ ಬಂಕನಾಥ ದೇವಾಲಯದಲ್ಲಿ ರಾಯಬಾಗದ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದ್ದು, ಈ ದೇವಾಲಯದ ಪಕ್ಕದಲ್ಲಿ ಐತಿಹಾಸಿಕವಾದ ಪುರಾತನ ಪುಷ್ಪರಣೆ ಇದೆ. ಭಕ್ತರು ಸ್ನಾನ ಮಾಡಿ ಭಾವಶ್ರದ್ಧೆಯಿಂದ ಈಗಲೂ ಸಹಿತ ನೆಡೆದು ಕೊಳ್ಳುತ್ತಾರೆ. ಆ ಪುಷ್ಕರಣೆಯು ಪಕ್ಕದಲ್ಲಿ ಹೂವಿನ ತೋಟವನ್ನು ಬೆಳೆಸಿದ್ದರು ಈಗ ಅಲಕ್ಷತೆಗೆ ಗುರಿಯಾಗಿದೆ.

ವೈಷ್ಣವ ದೇವಾಲಯಗಳು :

ಭರತ ಖಂಡದಲ್ಲಿ ದೇವಾಲಯಗಳ ನಿರ್ಮಾಣವು ಪ್ರಾಚೀನ ಕಾಲದಿಂದಲೂ ನೆಡೆದುಕೊಂಡು ಬಂದಿದೆ. ಶೈವ ಧರ್ಮದ ದೇವಾಲಯಗಳಂತೆ ವೈಷ್ಣವ ದೇವಾಲಯಗಳು ರಾಯಬಾಗದಲ್ಲಿ ಕಂಡು ಬರುತ್ತದೆ. ಅವುಗಳಲ್ಲಿ ನರಸಿಂಹ ದೇವಾಲಯ, ದತ್ತಮಂದಿರ, ಆಂಜನೇಯ ದೇವಾಲಯಗಳು ಪ್ರಮುಖವಾಗಿ ಕಂಡು ಬರುತ್ತವೆ.

ನರಸಿಂಹ ದೇವಾಲಯ :

ದೇವಾಲಯದ ಹೆಸರು – ಉಗ್ರ ನರಸಿಂಗ(ಜ್ಞಾನ ನರಸಿಂಹ)

ಮೂರ್ತಿ – ನರಸಿಂಹ

ಶಿಲೆ – ಉಸುಕು ಮಿಶ್ರಿತ ಪಾದಶಿಲೆ

ಸ್ವರೂಪ – ದುಂಡು ಶಿಲ್ಪ

ಶೈಲಿ – ಚಾಲುಕ್ಯ ಶೈಲಿ

ಸ್ಥಳ – ಗರ್ಭಗುಡಿ

ಮೂರ್ತಿಯ ಸ್ಥಿತಿ – ಕುಳಿತ ಭಂಗಿ

ಮೂರ್ತಿ ದೊರೆತ ಸ್ಥಳ – ಜಲಾಲಪುರ

ಸ್ಥಾಪಿತವಾದ ಗ್ರಾಮ – ರಾಯಬಾಗ

ಪರಿವಾರ – ಆಂಜನೇಯ, ಲಿಂಗ, ನಂದಿ, ಅನಂತ

ರಾಯಬಾಗದ ವಾಯುವ್ಯ ಭಾಗದಲ್ಲಿ ಕೂಷ್ಠಿ ಗಲ್ಲಿಯಲ್ಲಿರುವ (ಜ್ವಾಲಾ) ಉಗ್ರ ನರಸಿಂಹ ದೇವಾಲಯವು ನೆಲೆ ಮನೆಯ ಗುಣಾಂತ ದೇವಾಲಯವಾಗಿದ್ದು ಈ ದೇವಾಲಯವು ಪ್ರಾಚೀನವಾದುದ್ದು, ಇಲ್ಲಿಯ ಮೂರ್ತಿಯನ್ನು ಚಾಲುಕ್ಯ ಶೈಲಿಯಲ್ಲಿ ಕೆತ್ತಿದ್ದಾರೆ. ಸ್ಥಳೀಯರು ಇಲ್ಲಿಯ ಮೂರ್ತಿಯನ್ನು ಜಲಾಲಪೂರ ಗ್ರಾಮದಿಂದ ತಂದಿದ್ದಾರೆ. ಈ ಮೂರ್ತಿಯ ವೈಶಿಷ್ಠ ಜಕಣಾಚಾರ್ಯರ ಕಾಲದಲ್ಲಿ ಇದು ನಿರ್ಮಾಣಗೊಂಡಿದ್ದು, ಉಸುಕು ಮಿಶ್ರಿತ ಶಿಲೆಯ ರಚನೆಯಿಂದ ಕೂಡಿದೆ. ಉಗ್ರ ನರಸಿಂಹ ಜ್ವಾಲೆಯಂತೆ ಪ್ರಜ್ವಲಿಸುತ್ತಿದ್ದು ಅದಕ್ಕಾಗಿ ಈ ಮೂರ್ತಿಯನ್ನು ಜ್ವಾಲಾ ನರಸಿಂಹನೆಂದು ಕರೆಯುತ್ತಾರೆ. ನರಸಿಂಹ ದೇವಾಲಯಕ್ಕೆ ಚಿಕ್ಕ ಪ್ರವೇಶದ್ವಾರವಿದ್ದು, ದ್ವಾರದ ಮೇಲೆ ದ್ಯಾನಸ್ಥ ಪುರುಷ ವಿಗ್ರಹವನ್ನು ಕಾಣುತ್ತೇವೆ. ಅಲ್ಲಿಂದ ಮುಂದಕ್ಕೆ ಹೋದರೆ ಚಿಕ್ಕ ಮೆಟ್ಟಿಲು ಈ ಮೆಟ್ಟಿಲ ಮೂಲಕ ಕೆಳಗೆ ಹೋದಂತೆ ಒಂದು ದ್ವಾರ ಕಂಡು ಬರುತ್ತದೆ. ಅದನ್ನು ಸಂಪೂರ್ಣವಾಗಿ ಈಗ ಮುಚ್ಚಲಾಗಿದೆ. ಜನರ ನಂಬಿಕೆಯಿಂದ ತಿಳಿದು ಬರುತ್ತದೆ. ನರಸಿಂಹನ ಪೂಜೆಗೆಂದು ದಿನಾಲೂ ಆ ಸುರಂಗ ಮಾರ್ಗದಿಂದ ನೀರನ್ನು ತರುತ್ತಿದ್ದರೆಂದು ಕೆಲ ಜನ ಹೇಳಿದರೆ ಇನ್ನು ಕೆಲ ಜನ ಇದು ಕಾಶಿಯವರೆಗೆ ಸಾಗುತ್ತದೆ. ಎಂಬ ಐತಿಹ್ಯವನ್ನು ಹೇಳುತ್ತಾರೆ. ಈ ಗುಹೆಯಲ್ಲಿ ವಿಷ್ಣುವಿನ ಮೂರ್ತಿ ಇರುವ ಸಂಭಂಧ ಇದೆ ದಕ್ಷಿಣಕ್ಕೆ ಮುಖಮಾಡಿ ಕೆಳಭಾಗಕ್ಕೆ ಹೋದರೆ ಶಿವಲಿಂಗ ನಾಗ ಮೂರ್ತಿ ನಂದಿ ಕಂಡು ಬರುತ್ತವೆ. ಅವು ದಿನಾಲೂ ಪೂಜೆಗೆ ಒಳಗಾಗುತ್ತವೆ. ಪೂರ್ವಾಭಿಮುಖವಾಗಿ ಅಲ್ಲಿಂದ ಒಳಗಡೆ ಹೋದರೆ ಗರ್ಭಗುಡಿ ಸಿಗುತ್ತದೆ. ಪಶ್ಚಿಮಾಭಿಮುಖವಾಗಿ ಇರುವ ನರಸಿಂಗ ದೇವಸ್ಥಾನ ಕಾಣುತ್ತದೆ. ಚಿಕ್ಕ ಗರ್ಭಗುಡಿಯಲ್ಲಿ ವಿರಾಜಮಾನವಾಗಿರುವ ನರಸಿಂಹನ ಸುತ್ತ ಪ್ರದಕ್ಷಿಣ ಪಥವಿದೆ. ಅಲ್ಲಲ್ಲಿ ಜಾಲಂದ್ರಗಳಿದ್ದು ಗಾಳಿ ಬೆಳಕು ದೊರೆಯುತ್ತದೆ. ಗರ್ಭಗುಡಿಯ ಗೋಡೆಯ ಮೇಲೆ ಕನ್ನಡದ ಶಾಸನವಿದೆ. ಶಾಸನ ಸಂಪೂರ್ಣವಾಗಿ ಸವೆದ ಹೋಗಿದ್ದು ಗುರುತಿಸಲು ಸಾಧ್ಯವಿಲ್ಲದಾಗಿದೆ. ಗರ್ಭಗುಡಿಯ ಮೇಲೆ ಚಿಕ್ಕ ಮೂರ್ತಿಗಳಿದ್ದು, ಅವುಗಳ ಜೊತೆಗೆ ಶ್ರೀಪಂಥ ಮಹಾರಾಜರ ಭಾವಚಿತ್ರವಿದೆ. ಶ್ರೀ ಪಂಥ ಮಹಾರಾಜ ಬಾಳೆಕುಂದ್ರಿ ಸಾ॥ಯಮನಕ್ಕ ಇವರ ವಿವಾಹವು ವೈಶಾಖ ಪು॥ ಪ್ರತಿಪದ ಶಕೆ ೧೮೦೪ರಲ್ಲಿ ಮದುವಿರೆಂದು ತೋರಿ ಬರುತ್ತದೆ.

ಕಪ್ಪು ಶಿಲೆಯಲ್ಲಿ ನರಸಿಂಹ ಪೂರ್ತಿ ಎರಡು ಅಡಿ ಎತ್ತರವಿದ್ದು, ಸದ್ಯ ಪೂಜೆಗೆ ಒಳಗಾಗುತ್ತದೆ. ನರಸಿಂಹನ ಕಥೆಯಲ್ಲಿ ಆತನ ಅವತಾರವನ್ನು ನಾವು ಗೃಹಿಸುವಂತ ಈ ಶಿಲ್ಪಕಲೆಯಲ್ಲಿ ಸಹ ಕಂಡು ಬರುತ್ತದೆ. ನರಸಿಂಹನಿಗೆ ೧೬ ಭುಜಗಳನ್ನು ಹೊಂದಿದ್ದು, ಎಡ ಇಂಗೈಗಳಲ್ಲಿ ಶಂಕ ಚಕ್ರ ಮತ್ತು ಅಭವ ಹಾಗೂ ವರದಿ ಹಸ್ತುಗಳುವವಾಗಿದ್ದು ಮುಂದಿನ ಎಡಗೈಯನ್ನು ಮೇಲುಟ್ಟುತ್ತಿದ್ದಾನೆ. ಸಿಂಹಾಸನ ರೂವಾರಿ ಕಿರಿಟ ದಾರಿಯಾಗಿದ್ದಾನೆ. ಹರಿತವಾದ

ತನ್ನ ದಂತಗಳನ್ನು ಈ ನರಸಿಂಹ ೧೬ ಆಕೈಗಳಿಂದ ಹಿರಣ್ಯಕಶ್ಯಪನನ್ನು ತನ್ನ ತೊಡೆಯ ಮೇಲೆ ಮಲಗಿಸಿ ಆ ಹೊಟ್ಟೆಯನ್ನು ಬಗೆಯತ್ತಿರುವ ಕಂಡು ಬರುತ್ತದೆ. ಬಲಗೈಯೊಂದು ಅಭಯ ಹಸ್ತವಿದ್ದು ಇನ್ನೊಂದು ಕೈಲ್ಲಿ ಬಿಚ್ಚುಗತ್ತಿ ಮತ್ತೊಂದು ಕೈ ಹಿರಣ್ಯಕಶ್ಯಪುವಿನ ಮುಕುಟವನ್ನು ಹಿಡಿದಿರುತ್ತದೆ. ಇನ್ನೊಂದು ಎಡಗೈ ಹಿರಣ್ಯಕಶ್ಯಪುವನ್ನು ಹೊಡೆಯಲು ಮೇಲಕ್ಕೆತ್ತಿರುವುದು. ಕಂಡು ಬರುತ್ತದೆ. ಶ್ರೀದೇವಿ, ಭೂದೇವಿ, ನಾರದರು ನರಸಿಂಹನಿಗೆ ಸುತ್ತುವರಿದಿದ್ದಾರೆ. ನರಸಿಂಹನ ಇನ್ನುಳಿದ ಕೈಗಳಲ್ಲಿ ಶಂಖ, ಚಕ್ರ, ಗಡೆ, ಪದ್ಮಗಳನ್ನು ಹಿಡಿದುಕೊಂಡಿದ್ದಾನೆ. ಅಲ್ಲದೇ ದೇವಾದಿಗಳ ಮೇಲೆ ಲೋಕಪಾಲಕರು ಇದ್ದಾರೆ. ಇನ್ನೆರಡು ಕೈಗಳಿಂದ ಹಿರಣ್ಯಕಶ್ಯಪುವಿನ ಕರಳನ್ನು ಹಿಡಿದು ಹೊರಗಡೆಯೆಳೆಯುವುದು. ನರಸಿಂಹನ ಉಗ್ರಾತೆಯನ್ನು ತೋರಿಸುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಪುರಾಣ ಕಾವ್ಯಗಳಲ್ಲಿ ಅಭಿವ್ಯಕ್ತಗೊಂಡ ನರಸಿಂಹನ ಅವಕಾರ ಈ ಮೂರ್ತಿಯ ಶಿಲ್ಪ ಕಲೆಯಲ್ಲಿ ಒಳಗೊಂಡಿದೆ.

ಆಂಜನೇಯ ದೇವಸ್ಥಾನ :

ಉಗ್ರ ನರಸಿಂಹನ ಸಭಾ ಮಂಟದ ಬಳಿ ಎಡಭಾಗದಲ್ಲಿ ಆಂಜನೇಯ, ಲಿಂಗ, ನಂದಿ, ನಾಗದೇವ ಮೂರ್ತಿಗಳು ಕಂಡು ಬರುತ್ತವೆ. ನಿಂತ ಭಂಗಿಯಲ್ಲಿದ್ದ ಆಂಜನೇಯ ಮೂರ್ತಿಯ ಕೈಯಟ್ಟು ಗದೆಯನ್ನು ಹಿಡಿದುಕೊಂಡಿದ್ದು ಬಲಗೈಯನ್ನು ಮೇಲಕ್ಕೆ ಎತ್ತಿ ಆಶೀರ್ವದಿಸುವ ಭಂಗಿ ಕಂಡು ಬರುತ್ತದೆ. ಆಂಜನೇಯನ ಬಾಲವು ಹಿಂದಿನಿಂದ ಮೇಲಗಡೆ ಹಾದು ಮುಂದೆ ಸುತ್ತಿಕೊಂಡಿರುವುದು ಆಂಜನೇಯ ಕಂಠಾಭರಣ ರೂಡವಾಗಿ ಕಾಲ್ಗಡಗ ಮತ್ತು ಕೈ ಗಡಗ ತೊಟ್ಟುಕೊಂಡು ಕಿರೀಟಧಾರಿಯಾಗಿದ್ದಾನೆ.

ನಂದಿ ವಿಗ್ರಹವು ಕುಳಿತ ಭಂಗಿಯಲ್ಲಿದ್ದು, ಸುಂದರವಾದ ಶಿಲ್ಪಕಲೆಯಾಗಿದೆ. ಕೊರಳಲ್ಲಿ ಸರಮಾಲೆ, ಹಣೆಪಟ್ಟಿ ಇವೆ. ಲಿಂಗವು ಉತ್ತರಾಭಿಮುಖವಾಗಿದ್ದು, ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಇವುಗಳ ಜೊತೆಗೆ ಎರಡು ಸರ್ಪಗಳು ಸುತ್ತಿಕೊಂಡು ಮೋಹಿಸುವಂತೆ ನಾಗದೇವನ ಶಿಲ್ಪ ಕಂಡು ಬರುತ್ತವೆ. ಇವುಗಳ ಮುಂದೆ ಚೌಕಾರವಾದ ಕಲ್ಲಿನ ಮೇಲೆ ಉಬ್ಬು ಶಿಲ್ಪದ ಎರಡು ಪಾದಗಳು ಕಂಡು ಬರುತ್ತವೆ. ಹೀಗೆ ನರಸಿಂಹ ದೇವಾಲಯದಲ್ಲಿ ಆಂಜನೇಯ ಇತರ ದೇವರುಗಳು ಕಂಡು ಬರುತ್ತವೆ.

ಅನಂತ ಪದ್ಮನಾಭ ದೇವಾಲಯ :

ಮೂರ್ತಿಯ ಹೆಸರು	–	ಅನಂತ ಪದ್ಮನಾಭ
ಶಿಲೆ	–	ಕಪ್ಪುಶಿಲೆ
ದೇವಾಲಯ ಸ್ಥಳ	–	ಉಗ್ರನರಸಿಂಹ ದೇವಾಲಯದ ಆವರಣ
ಸ್ವರೂಪ	–	ಹುಬ್ಬು ಶಿಲ್ಪ

ಉಗ್ರ ನರಸಿಂಹ ದೇವಾಲಯದ ಮೇಲಿನ ಗೋಡೆಗೆ ಆಧಾರವಾಗಿಟ್ಟಿರುವ ಅನಂತ ಪದ್ಮನಾಥ ಮೂರ್ತಿ ಶಾಯನ ಭಂಗಿಯಲ್ಲಿದೆ. ಈ ಮೂರ್ತಿಯನ್ನು ನೋಡಿದರೆ ಶೇಷನ ಮೇಲೆ ಮಲಗಿದಂತೆ ತೋರುತ್ತದೆ. ಅನಂತ ಪದ್ಮನಾಭನಿಗೆ ನಾಲ್ಕು ಭುಜಗಳಿದ್ದು, ಈತನ ಬಲಭಾಗದ ಮುಂಗೈ ಚಿನ್ಮುದ್ರೆಯಲ್ಲಿದೆ. ಹಿಂಗೈಯಲ್ಲಿ ಚಕ್ರ ಹಿಡಿದು ಪದ್ಮನಾಭ ಎಡಭಾಗದಲ್ಲಿ ಕೈಯಲ್ಲಿ ಶಂಕ ಹಾಗೂ ಎಡ ಮುಂಗೈಯಲ್ಲಿ ತನ್ನ ಮೋಳಕಾಲು ಮೇಲೆ ಇಟ್ಟುಕೊಂಡಿದ್ದಾನೆ. ಪಾದದ ಹತ್ತಿರ ಲಕ್ಷ್ಮೀಯ ಕುಳಿತಿರುವುದು. ಬಲಗಾಲ ಮೇಲೆ ಲಕ್ಷ್ಮೀಯ ತೊಡೆಯ ಮೇಲೆ ತನ್ನ ಎಡಗಾಲನ್ನು ಮಡಚಿಕೊಂಡಿದ್ದಾನೆ. ಮೂರ್ತಿಯ ಕೀರಿಟ ಧಾರಿಯಾಗದುದ್ದು, ಹಾರ, ಮಂಡಳ, ಯಜ್ಞೆಪೆ ವೇದದಿಂದ ಅಲಂಕೃತಗೊಂಡ ಪದ್ಮನಾಭನ ಶಿಲ್ಪ ರಂಗೊಳಿಸುತ್ತದೆ. ನಾವಿಯಲ್ಲಿ ಕಮಲದ ಹೂ ಚಿಕ್ಕಬ್ರಹ್ಮನ ಮೂರ್ತಿಯ ಅದರಲ್ಲಿ ಒಳಗೊಂಡು ಆಕರ್ಪಣೆಯನ್ನು ಹೆಚ್ಚಿಸಿದೆ.

ದತ್ತ ಮಂದಿರ :

ರಾಯಬಾಗದ ಹೃದಯ ಭಾಗದಲ್ಲಿರುವ ಹೊಸದಾಗಿ ನಿರ್ಮಾಣವಾದ ದೇವಾಲಯವಾಗಿದೆ. ಈ ದೇವಾಲಯವು ರಾಯಭಾಗದ ಪಶ್ಚಿಮ ಭಾಗದಲ್ಲಿದೆ. ಇದು ವೈದಿಕ ಸಂಪ್ರದಾಯಸ್ಥಿತಿಗೆ ಆರಾಧ್ಯ ದೈವವಾಗಿದೆ. ಇದನ್ನು ಸಿಮೆಂಟು ಗಾರೆಯಿಂದ ನಿರ್ಮಾಣ ಮಾಡಲಾಗಿದೆ. ಮಹಾದ್ವಾರದ ಮೇಲೆ ಕಳಸಾಕೃತಿಯ ಗೋಪುರದ ಕಮಾನು ಇದ್ದು, ನೋಡಲು ಸುಂದರವಾಗಿದೆ. ದತ್ತಮಂದಿರದ ಪ್ರವೇಶ ದ್ವಾರದಲ್ಲಿ ಇತ್ತಿಚೆಗೆ ನಿರ್ಮಾಣ ಮಾಡಲಾದ ಚಿಕ್ಕ ಹನುಮಾನ ಮಂದಿರವಿದೆ. ಇದರಲ್ಲಿ ಕಪ್ಪು ಶಿಲೆಯಲ್ಲಿ ಹನುಮಾನ ಶಿಲ್ಪವಿದೆ. ಇದನ್ನು ಇತ್ತೀಚೆಗೆ ನಿರ್ಮಾಣ ಮಾಡಿರುವುದರಿಂದ ಐತಿಹಾಸಿಕವಾಗಿ ಅಷ್ಟಾಗಿ ಮಹತ್ವ ಪಡೆದಿಲ್ಲ.

ರಾಮಮಂದಿರ :

ವೈದಿಕ ಸಂಪ್ರದಾಯದ ಭಕ್ತರು ರಾಮನ ಮೇಲಿನ ಭಕ್ತಿಗಾಗಿ ತೀರಾ ಇತ್ತೀಚೆಗೆ ರಾಮನ ಮಂದಿರವನ್ನು ನಿರ್ಮಿಸಿದ್ದಾರೆ. ಇಲ್ಲಿ ಯಾವುದೇ ಮೂರ್ತಿ ಇಲ್ಲ. ರಾಮನ ಮೂರ್ತಿಯನ್ನು ಗೋಡೆಯ ಮೇಲೆ ಚಿತ್ರ ಬಿಡಸಲಾಗಿದೆ. ಚಿಕ್ಕದಾದ ಪೀಠವನ್ನು ಹೊಂದಿದೆ. ಬಿಳಿಯ ಶಿಲೆಯಲ್ಲಿ ಶಿಲೆ ಇದೆ. ಹಾಗೂ ಆ ಶಿಲೆಯ ಮೇಲೆ ಎರಡು ಪಾದುಕೆಗಳಿವೆ. ಅವನ್ನೆ ಇಲ್ಲಿ ಪೂಜಿಸುತ್ತಾರೆ. ಹೀಗೆ ವೈಷ್ಣವ ಸಮಾದಾನಯಕ್ಕೆ ಸಂಬಂಧಿಸಿದ ದೇವಾಲಯಗಳು ರಾಯಬಾಗದಲ್ಲಿ ಕಂಡು ಬರುತ್ತವೆ.

ಹಾಲುಮತ ದೇವಾಲಯಗಳು

ರಾಯಬಾಗ ಪ್ರದೇಶದಲ್ಲಿ ಪೂರ್ವಕಾಲದಿಂದಲ್ಲಿ ಹಾಲುಮತ ಸಮೂದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುವುದರಿಂದ ತಮ್ಮ ಸಮೂದಾಯದ ದೈವಗಳನ್ನು ಆ ಗ್ರಾಮದಲ್ಲಿ ಗುಡಿ ಕಟ್ಟಿ ಪೂಜಿಸುತ್ತಿದ್ದಾರೆ. ಅವುಗಳಲ್ಲಿ ಪ್ರಮುಖದಾದವುಗಳು ಬೀರಪ್ಪನ ದೇವಾಲಯ, ಎಡೆ ಮಾಯಾಕ್ಕನ ದೇವಾಲಯ, ಹಾಲಸಿದ್ದನ ದೇವಾಲಯ ಹಾಗೂ ಲಕ್ಕವ್ವನ ದೇವಾಲಯಗಳು ಪ್ರಮುಖವಾಗಿವೆ.

೧. ಬೀರಪ್ಪನ ದೇವಾಲಯ

ಹಾಲುಮತ ದೈವಗಳಲ್ಲಿ ಬೀರಪ್ಪನು ಅತ್ಯಂತ ಪ್ರಸಿದ್ಧ ದೇವಾಲಯವಾಗಿದೆ. ಬೀರಪ್ಪನ ಲೀಲೆಗಳನ್ನು ಡೊಳ್ಳು ಹಾಡಿನ ಸೊಲ್ಲಿನಲ್ಲಿ ವರ್ಣಿತವಾಗಿವೆ. ಬೀರಪ್ಪನ ಕುರಿತು ಹಾಲ್ಮತ್ತೋತ್ತೆಜಕ ಪುರಾಣದಲ್ಲಿ ಬೀರಪ್ಪನ ಕುರಿತು ಅನೇಕ ಮಾಹಿತಿಗಳು ಸಿಗುತ್ತವೆ. ಬೀರಪ್ಪನ ಹುಟ್ಟಿನ ಬಗ್ಗೆ ಡಾ. ವೀರಣ್ಣ ದಂಡೆಯವರು ಸಂಪಾದನೆ ಮಾಡಿದ ರಸ್ತಾಪೂರ ಭೀಮಕವಿ ರಚಿಸಿದ ಜನಪದ ಹಾಲುಮತ ಕಾವ್ಯದಲ್ಲಿ ಸಹಿತ ಈತನ ಪವಾಡ ಕುರಿತು ವರ್ಣಿತವಾಗಿವೆ. ರಾಯಬಾಗದಲ್ಲಿ ಪ್ರಮುಖವಾಗಿ ಬೀರಪ್ಪನು ಎರಡು ದೇವಾಲಯಗಳು ಕಂಡು ಬರುತ್ತವೆ. ಬೀರಪ್ಪನ ದೇವಾಲಯದ ಹೊರನೋಟ ಪೂರ್ವ ದಿಕ್ಕಿಗಿದೆ. ಬೀರಪ್ಪನ ದೇವಾಲಯವು ಗರ್ಭಗುಡಿಯನ್ನು ಹೂಳಗೊಂಡು ಶಿಖರವನ್ನು ಹೊತ್ತು ನಿಂತಿದೆ. ಬೀರಪ್ಪನ ಆಚರಣೆಗೆ ಸಂಬಂಧಿಸಿದ ಅನೇಕ ಕಂಚಿನ ವಿಗ್ರಹಗಳಲ್ಲಿ ಗರ್ಭಗುಡಿಯಲ್ಲಿ ಲಭಿಸುತ್ತವೆ. ಬೀರಪ್ಪನ ಸಹ ಪರಿವಾರದ ನಾಲ್ಕು ಮೂರ್ತಿಗಳು ಅಲ್ಲಿವೆ. ಅವುಗಳ ಜೊತೆಗೆ ಕುದುರೆ, ಕುರಿ, ಟಗರು, ಆಡು, ಹಂದಿ ಹೀಗೆ ಅನೇಕ ಕಂಚಿನ ವಿಗ್ರಹಗಳು ಇವೆ

ಬೀರಪ್ಪನ ಮೂರ್ತಿಯ ಕುದುರೆಯನ್ನು ಹತ್ತಿ ಕುಳಿತಂತೆ ಕಾಣುತ್ತದೆ. ಬೀರಪ್ಪನ ಹಿಂದೆ ಚಾಮರ-ಚವರಿಗಳು ಕಂಡು ಬರುತ್ತವೆ. ಗುಡಿಯ ಹೊರಾಂಗಣದಲ್ಲಿ ತಾಳಿ ಒಳಗೊಂಡಿದ್ದು, ಬೀರಪ್ಪನ ಗುಡಿಯ ಗೋಡೆಯ ಮೇಲೆ ಬೀರಪ್ಪನ ಲೀಲೆಯ ಚಿತ್ರಗಳಿವೆ. ಆಧುಕರಣಗೊಂಡ ಕಟ್ಟಡ ಇದಾಗಿರುವುದರಿಂದ ದೇವಾಲಯ ನಿರ್ಮಾಣದ ಬಗ್ಗೆ ಖಚಿತವಾಗಿ ಮಾಹಿತಿ ಇಲ್ಲ. ಹಾಗೂ ಮೂರ್ತಿಗಳು ಸುಮಾರು ೩೦೦ ವರ್ಷಗಳಿಂದೆ ಇರುವಂತವುಗಳಾಗಿವೆ.

ರಾಯಬಾಗದ ಹೊರವಲಯದಿಂದ ಇನ್ನೊಂದು ಬೀರದೇವರ ಗುಡಿ ಕಂಡು ಬರುತ್ತದೆ. ಇದು ಆಧುನಿಕ ದೇವಾಲಯವಾಗಿದ್ದು, ೧೯೫೨ರಲ್ಲಿ ಇದನ್ನು ನಿರ್ಮಿಸಿದ್ದಾರೆ. ಚಿಕ್ಕ ದೇವಾಲಯವಾದ ಈ ಮಂದಿರವು ಇಟ್ಟಿಗೆ ಸಿಮೆಂಟು ಬಳಸಿ ಕಟ್ಟಲಾಗಿದೆ. ಪಿರಾಮಿಡ್ ಮಾದರಿಯ ಶಿಖರವಿದೆ. ಗುಡಿಯ ಎತ್ತರವಾದ ಅದಿಷ್ಟಾನದ ಮೇಲೆ ಕಟ್ಟಿದೆ. ಗರ್ಭಗುಡಿಯಲ್ಲಿ ವಿವಿಧ ದೇವತೆಗಳ ಚಿತ್ರಗಳಿವೆ. ದೇವರ ಎಡ-ಬಲ ಭಾಗದಲ್ಲಿ ನಾಗ ದೇವತೆಗಳಿವೆ. ಬೀರಪ್ಪನ ಮೂರ್ತಿಯ ಕಂಚಿನ ಲೋಹದಿಂದ ಕೂಡಿದ ಮೂರ್ತಿಯಿದೆ. ತಲೆಯ ಮೇಲೆ ಸರ್ಪವಿದೆ. ಬಲಭಾಗದಲ್ಲಿ ಕುದುರೆ ಮತ್ತೊಂದು ತಲೆಯ ಮೇಲೆ ಕುಳಿತ ಕಂಚಿನ ವಿಗ್ರಹಗಳಿವೆ. ಹಾಗೂ ಟಗರು, ಹುಲಿ, ಮುಂತಾದ ಪ್ರಾಣಿಗಳಿವೆ.

೨. ಬಿರಪ್ಪನ ದೇವಾಲಯ :

ಹಾಲುಮತ ದೇವಾಲಯಗಳಲ್ಲಿ ಸಿದ್ದರದು ಒಂದು ಪರಂಪರೆ ಬೆಳೆದು ಬಂದಿರುವುದು ಕಂಡು ಬರುತ್ತದೆ. ಆ ಸಿದ್ದರ ಪರಂಪರೆಯಲ್ಲಿ ಬಿರಪ್ಪ ಒಬ್ಬನಾಗಿದ್ದಾನೆ. ಹಾಲುಮತ ಪುರಣಗಳಲ್ಲಿ ಹಾಲಸಿದ್ದನ ಉಲ್ಲೇಖ ಇಲ್ಲ ಡೋಳ್ಳಿನ ಹಾಡುಗಳಲ್ಲಿ ಉಲ್ಲೇಖಗಳಿವೆ.

ಬಿರಪ್ಪನ ದೇವಾಲಯದ ಮುಖ್ಯ ದ್ವಾರವು ಕೆಂಪು ಬಣ್ಣದ ಕಲ್ಲಿನಿಂದ ನಿರ್ಮಿಸಲಾಗಿದೆ. ಇದು ಕಮಾನಾಕೃತಿಯಲ್ಲಿ ಕಟ್ಟಿಸಲಾಗಿದೆ. ದ್ವಾರ ಬಾಗಿಲಿನ ಎಡ-ಬಲಭಾಗದಲ್ಲಿ ದ್ವಾರ ಪಾಲಕರು ವಿಷ್ಣು, ಬ್ರಹ್ಮ, ಕಾಳಿ ಶೀವನ ಮೂರ್ತಿಗಳಿವೆ. ಹಿಂದೂ ಮುಸ್ಲಿಂ ಶೈಲಿಯಲ್ಲಿ ನಿರ್ಮಾಣವಾಗಿದೆ. ಗರ್ಭಗೃಹ, ಅರ್ಧ ಮಂಟಪ ತೆರೆದ ಮುಖಮಂಟಪ ಹೊಂದಿದೆ. ಗರ್ಭಗೃಹದಲ್ಲಿ ಬಿರಪ್ಪನ ಕಲ್ಲಿನ ತಡಿಯನ್ನು ಸ್ಥಾಪಿಸಲಾಗಿದೆ. ದೇವಾಲಯದ ಮುಂಬಾಗದಲ್ಲಿ ಸುಮಾರು ೨೦ ಅಡಿ ಎತ್ತರದ ಮಾನಸ್ತಂಭವನ್ನು ಕಾಣಬಹುದು.

೩. ಎಡಿ ಮಾಯಕ್ಕ ದೇವಾಲಯ :

ಹಾಲುಮತದ ದೇವತೆಗಳ ಪರಂಪರೆಯಲ್ಲಿ ಮಾಯಕ್ಕನದು ವಿಶೇಷವಾದ ಸ್ಥಾನ ವಿಶಿಷ್ಟ ಸಾಂಸ್ಕೃತಿಕ ಆಚರಣೆಯನ್ನು ಒಳಗೊಂಡಿರುವ ಹಾಲುಮತ ಸ್ರೀ ದೇವತೆಗಳಲ್ಲಿ ಮಾಯಕ್ಕಳು ಒಬ್ಬಳು ಮಾಯಕ್ಕನ ಜಾಗೃತ ಸ್ಥಳ ಚಿಂಚಲಿಯಾದರೂ ಸಹ ರಾಯಬಾಗದಲ್ಲಿ ದೇವಾಲಯವನ್ನು ರಾಯಬಾಗದಲ್ಲಿ ನಿರ್ಮಿಸಿದ್ದಾರೆ. ಊರ ಹೊರ ಭಾಗದಲ್ಲಿರುವ ಈ ದೇವಾಲಯವು ಗೊಪುರಾಕೃತಿಯ ಕಟ್ಟಡಗಳನ್ನು ಒಳಗೊಂಡಿದ್ದು ೨೦೦೨ರಲ್ಲಿ ಈ ದೇವಸ್ಥಾನವನ್ನು ನಿರ್ಮಿಸಿದ್ದಾರೆ. ಸಾಮಾನ್ಯವಾಗಿ ಮಾಯಕ್ಕನಿಗೆ ಯಾವುದೇ ಮೂರ್ತಿಯು ಇರುವುದಿಲ್ಲ. ಆದರೆ ಕಪ್ಪು ಶಿಲೆಯಲ್ಲಿ ಎತ್ತರವಾದ ಜಗುಲಿಯ ಮೇಲೆ ಎಡಿ ಮಾಯಕ್ಕನನ್ನು ಮೂರ್ತಿಯನ್ನು ಸ್ಥಾಪಿಸಲಾಗಿದೆ. ದೇವಸ್ಥಾನದ ಎದುರಿಗೆ ೨೫ ಅಡಿ ಎತ್ತರದ ಕಲ್ಲಿನ ಸ್ತಂಭದ ಗೋಪುರವಿದೆ. ಆದರ ಮೇಲಗಡೆ ಕೇಸರಿಯ ಧ್ವಜ ನೆಟ್ಟಿದ್ದಾರೆ. ಎಡಿಯಕ್ಕ ಎಂಬ ಹೆಸರು ಚಿಂಚಲಿಯಲ್ಲಿರುವ ಮಾಯಕ್ಕನ ದೇವಾಲಯ ಎಡಕ್ಕೆ ಇರುವುದರಿಂದ ಎಡಿ ಮಾಯಕ್ಕ ಎಂದಿರಬಹುದಾಗಿದೆ. ಅಥವಾ ದೇವರಿಗೆ ಭಕ್ತರಿಗೆ ಎಡಿಯನ್ನು ಹರಕೆ ಹೊತ್ತು ಕೊಡುವುದರಿಂದ ಎಡಿ ಮಾಯಕ್ಕ ಆಗಿರಬಹುದು ಎಂದು ಊಹಿಸಬಹುದಾಗಿದೆ.

೪. ಲಕ್ಕವ್ವನ ದೇವಸ್ಥಾನ :

ನಗರದ ಮಧ್ಯಭಾಗದಲ್ಲಿ ಲಕ್ಕವ್ವನ ದೇವಸ್ಥಾನ ಕಂಡು ಬರುತ್ತದೆ. ಶಕ್ತಿ ದೇವತೆಯಾದ ಲಕ್ಕವ್ವ ಕಪ್ಪುಶಿಲೆಯ ಮೂರ್ತಿಯನ್ನು ಒಳಗೊಂಡಿರುವ ಲಕ್ಕವ್ವ ಶತಮಾನಗಳಿಂದ ಹಾಲುಮತದ ಸಮೂದಾಯದ ಸ್ತ್ರೀ ದೇವತೆಯಾಗಿ ಪೂಜೆಗೊಳ್ಳುತ್ತಾ ಬಂದಿದ್ದಾರೆ. ಲಕ್ಕವ್ವನ ಬಗ್ಗೆ ಹೆಚ್ಚಿನ ಐತಿಹ್ಯ ಹೊಂದಿಲ್ಲದ್ದರಿಂದ ಪುರಾವೆಗಳು ಹೆಚ್ಚಿಗೆ ದೊರುಕುವದಿಲ್ಲ.

ಹೀಗೆ ಹಾಲುಮತ ದೈವಗಳು ಅದಕ್ಕೆ ಸಂಬಂಧಿಸಿದ ದೇವಾಲಯಗಳು ರಾಯಬಾಗದಲ್ಲಿ ಕಂಡು ಬರುತ್ತದೆ.

ಇತರೆ ದೇವಾಲಯಗಳು :

ರಾಯಬಾಗ ನಗರದಲ್ಲಿ ಶೈವ, ವೈಷ್ಣವ, ಜೈನ ದೇವಾಲಯಗಳಂತೆ ಇನ್ನಿತರ ಅನೇಕ ದೇವಾಲಯಗಳು ರಾಯಬಾಗದಲ್ಲಿ ಹೆಚ್ಚಿನೆಚ್ಚು ಪ್ರಸಿದ್ಧಿ ಪಡೆದಿವೆ. ಅವುಗಳ ಸಂಕ್ಷಿಪ್ತ ನೋಟವನ್ನು ಈ .ಕೆಳಗಿನಂತೆ ನೋಡಲಾಗಿದೆ.

೧. ಅಂಭಾಬಾಯಿ ದೇವಾಲಯ :

ದೇವಾಲಯ ಹೆಸರು – ಅಂಬಾಬಾಯಿ

ಮೂರ್ತಿ – ಅಂಭಾಬಾಯಿ

ಶಿಲೆ – ಕಪ್ಪು ಶಿಲೆ

ಸ್ಥಳ – ರಾಯಬಾಗ

ಅಂಭಾಬಾಯಿ ದೇವಾಲಯವು ರಾಯಬಾಗದ ಥಾವಡಿ ಹಿಂದೆ ಇದ್ದು, ದೇವಾಲಯಕ್ಕೊಂದು ಹಿರಿದಾದ ಬಾಗಿಲು ಇರುತ್ತದೆ. ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ ಸಭಾ ಮಂಟಪ, ಶಿಖರವನ್ನು ಹೊಂದಿದೆ. ಅಂಭಾಬಾಯಿಯ ಮೂರ್ತಿಯ ಪೂರ್ವಾಭಿಮುಖವಾಗಿ ಎತ್ತರದ ಜಗುಲಿಯ ಮೇಲೆ ಪ್ರತಿ ಸ್ಥಾಪಿಸಿದ್ದಾರೆ. ಅಂಭಾಬಾಯಿಯ ನಾಲ್ಕು ಬುಜಗಳನ್ನು ಹೊಂದಿದ್ದು, ಅವಳ ಎಡಗಡೆ ಹಿಂಗೈ-ಮುಂಗೈಯಲ್ಲಿ ಡಮರುಗ, ಕುಂಕುಮ ಬಟ್ಟಲನ್ನು ಹಿಡಿದಿದ್ದಾಳೆ ಬಲಗಡೆ ಹಿಂಗೈ ಮತ್ತು ಮುಂಗೈಯಲ್ಲಿ ತ್ರಿಶೂಲ ಖಡ್ಗ ಹಿಡಿದಿದ್ದಾಳೆ ಕಿರೀಟದಾರಿಯಾದ ಅಂಭಾಬಾಯಿ ಮೂರ್ತಿಯ ಆಕರ್ಷಕವಾಗಿದ್ದು, ಈ ಮೂರ್ತಿಯನ್ನು ಕೊಲ್ಹಾಪುರ ಮಹಾರಾದ ಕರವೀರ ಸರ್ಕಾರ ೧೯೨೨ರಲ್ಲಿ ಸ್ಥಾಪಿಸಿದ್ದಾರೆ.

೨. ಹನುಮಾನ ಮಂದಿರ :

ದೇವಾಲಯದ ಹೆಸರು – ಹನುಮಾನ ಮಂದಿರ

ಮೂರ್ತಿ – ಹನುಮಾನ

ಶಿಲೆ – ಕಪ್ಪುಶಿಲೆ

ಸ್ವರೂಪ – ಹುಬ್ಬು ಶಿಲೆ

ಸ್ಥಳ – ರಾಯಬಾಗದ ಗರ್ಭಗುಡಿ

ಭಂಗಿ – ನಿಂತಿರುವ ಭಂಗಿ

ರಾಯಬಾಗದ ಗ್ರಾಮದೇವತೆರಲ್ಲಿ ಪ್ರಸಿದ್ಧವಾದ ದೇವಾಲಯ ಹನುಮಾನ ಮಂದಿರ ಒಂದಾಗಿದೆ. ಈ ದೇವಾಲಯವು ಸಾರ್ವಜನಿಕ ಗ್ರಂಥಾಲಯದಲ್ಲಿ ಪಕ್ಕದಲ್ಲಿದೆ. ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ಇತ್ತೀಚೆಗೆ ನವೀಕರಿಸಲಾಗಿದೆ. ಗರ್ಭಗೃಹ, ಶಿಖರ, ಸಭಾಮಂಟಪ ಹೊಂದಿದ ದೇವಾಲಯ ಎತ್ತರವಾದ ಜಗಲಿಯ ಮೇಲೆ ನಿರ್ಮಾಣವಾಗಿದೆ. ಈ ಹನುಮಂತನ ವಿಗ್ರಹಕ್ಕೆ ಕೆಲ ಐತಿಹ್ಯವನ್ನು ಸ್ಥಳೀಯರು ಹೇಳುತ್ತಾರೆ. ಈ ಹನುಮಾನ ವಿಗ್ರಹವು ಬ್ಯಾಕೂಡ ಎಂಬ ಗ್ರಾಮದಿಂದ ರಾಯಬಾಗಕ್ಕೆ ತರಲಾಗಿದೆ. ಅಲ್ಲಿಯ ಐತಿಹ್ಯದ ಪ್ರಕಾರ ರಾಯಬಾಗದಲ್ಲಿ ಹಲವು ವರ್ಷಗಳಿಂದ ಕಾರ ಹುಣ್ಣಿಮೆಯ ಸಂದಂರ್ಭದಲ್ಲಿ ಎರಡು ಎತ್ತುಗಳನ್ನು ಮೆರೆಸುತ್ತಿದರಂತೆ ಒಂದು ಎತ್ತು ರಾಯಬಾಗ ಗಡಿಯನ್ನು ದಾಟಿ ಬ್ಯಾಕೂಡ ಗ್ರಾಮಕ್ಕೆ ಹೋದಾಗ ಆ ಎತ್ತನ್ನು ಅಲ್ಲಿ ಜನ ಕಟ್ಟಿ ಹಾಕಿ ರಾಯಬಾಗ ಜನರಿಗೆ ಮರಳಿ ಕೊಡದೆ ಎತ್ತಿನ ಬಾಲವನ್ನು ಕಡಿದು ಅವಮಾನ ದೂಡಿದರಂತೆ, ಆ ಅವಮಾನವನ್ನು ತಾಳದೆ ರಾಯಬಾಗದ ಜನರು ಹನುಮಂತನ ವಿಗ್ರಹ ತಂದು ಪ್ರತಿಷ್ಟಾಪಿಸಿದ್ದಾರೆ. ಎಂದು ಹೇಳುತ್ತಾರೆ. ಇನ್ನೊಂದು ಹನುಮಾನ ಮಂದಿರ ರಾಯಬಾಗದ ಪಶ್ಚಿಮ ದಿಕ್ಕಿನಲ್ಲಿ ಕೆ.ಇ.ಬಿ.ಗೆ ಹೋಗುವ ದಾರಿಯಲ್ಲಿ ಕಂಡು ಬರುತ್ತದೆ. ಈ ಹನುಮಂತನ ವಿಗ್ರಹವನ್ನು ಇದು ಹೋಲುತ್ತದೆ. ರುದ್ರವತಾರ ಈ ವಿಗ್ರಹದಲ್ಲಿ ಕಂಡು ಬರುತ್ತದೆ.

೩. ವಿಠ್ಠಲ ಮಂದಿರ :

ದೇವಾಲಯ – ವಿಠ್ಠಲ ಮಂದಿರ

ಮೂರ್ತಿ – ವಿಠ್ಠಲ ರುಕ್ಮಿಣಿ ಸತ್ಯಭಾಮ

ಶಿಲೆ – ಕಪ್ಪುಶಿಲೆ

ಸ್ವರೂಪ – ದುಂಡು ಶಿಲ್ಪ

ಸ್ಥಳ – ಗರ್ಭಗೃಹ

ಬಂಗಿ – ನಿಂತ ಬಂಗಿ

ಪರಿವಾರ – ಕಾಳಿಕಾದೇವಿ

ಈ ಮಂದಿರವು ಮಡಿವಾಳದಲ್ಲಿ ಆಲದ ಮರದ ಪಕ್ಕದಲ್ಲಿದೆ. ದೇವಾಲಯ ಗರ್ಭಗೃಹ ಸಭಾ ಮಂಟಪ ಹೊಂದಿದ್ದು ಗರ್ಭಗೃಹದಲ್ಲಿ ಎತ್ತರವಾದ ಜಗುಲಿಯ ಮೇಲೆ ವಿಠ್ಠಲ ರುಕ್ಮಿಣಿ

ಸತ್ಯಾಭಾಲೆಯನ್ನು ಪ್ರತಿಷ್ಠಾಪಿಸಿದ್ದಾರೆ. ವಿಠ್ಠಲ ಸೊಂಟದ ಮೇಲೆ ಕೈ ಇಟ್ಟು ನಿಂತಿದ್ದಾನೆ. ಎಡದಲ್ಲಿ ರುಕ್ಮೀಣಿ ಬಲಭಾಗದಲ್ಲಿ ಸತ್ಯಾಬಾಮ ಶಿಲ್ಪಗಳಿವೆ. ವಿಠ್ಠಲ ಮೂರ್ತಿಯ ತಲೆಯ ಮೇಲೆ ಕಿರೀಟವಿದೆ. ಕಾಲಲ್ಲಿ ಕಾಲ್ಡಗಡ, ಕೈಯಲ್ಲಿ ಕೈಗಡಗ ಹಾಗೂ ರುಕ್ಮೀಣಿ–ಸತ್ಯಬಾಮ ಓಲೆ, ಸರ, ಕಡಗ, ಗೆಜ್ಜೆ ಕಂಠಾಭರಣ ಧರಿಸಿರುವುದು ಕಂಡು ಬರುತ್ತದೆ.

೪. ಕಾಳಿಕಾ ಮೂರ್ತಿ :

ದೇವಾಲಯ – ಕಾಳಿಕಾದೇವಿ

ಮೂರ್ತಿ – ಕಾಳಿಕಾದೇವಿ

ಶಿಲೆ – ಗಾರೆ ಕಲ್ಲು

ಸ್ವರೂಪ – ದುಂಡು ಶಿಲ್ಪ

ಇದೊಂದು ಸುಂದರವಾದ ಪ್ರಾಚೀನ ವಿಗ್ರಹವಾಗಿದ್ದು, ಹೊಯ್ಸಳರ ಕಾಲದ ಮೂರ್ತಿಶಿಲ್ಪದ ಲಕ್ಷ್ಮಣಗಳನ್ನೊಳಗೊಂಡಿದೆ. ಇದು ಕಲಾತ್ಮಕ ಕೆತ್ತನೆಯ ಮೂರ್ತಿಯಾಗಿದ್ದು, ನಾಲಗೆಯ ವಿಗ್ರಹ ಬಲಗೈಯಲ್ಲಿ ಖಡ್ಗ, ಎಡಗೈನಲ್ಲಿ ತ್ರಿಶೂಲ ಕಾಳಿಕಾದೇವಿ ನಾಗ ಕಮಲಧಾರಿಯಾಗಿದ್ದಾಳೆ. ದೇವ ಮನುಜರು ಸುತ್ತಲಿನ ಪ್ರಭಾವದಿಂದ ಚಕಿತ ಸ್ಥಿಯಲ್ಲಿದ್ದಾರೆ. ಪಾದದ ಕೆಳಭಾಗದಲ್ಲಿ ರಾಕ್ಷಸಗಳಿದ್ದಾರೆ. ಮುಖದಲ್ಲಿ ನಸು ಉಗ್ರತೆ ಇದ್ದರೂ ಸೌಮ್ಯಭಾವ ಮಿಶ್ರಿತವಾದ ಶಿಲ್ಪ ಇದಾಗಿದೆ. ಈ ಮೂರ್ತಿಯ ವಿಠ್ಠಲ ಮಂದಿರ ಹತ್ತಿರ ಆಲದ ಮರದ ಪಕ್ಕದಲ್ಲಿ ಹೊಲದಲ್ಲಿ ಹೂಳುವಾಗ ಈ ಮೂರ್ತಿಯ ೧೯೬೨ ರಲ್ಲಿ ಶ್ರೀ ವಾಮನರಾವ್ ದೇಶಪಾಂಡೆಯವರಿಗೆ ದೊರೆತಿದ್ದು ಅದನ್ನು ವಿಠ್ಠಲ ಮಂದಿರದಲ್ಲಿ ಇರಿಸಲಾಗಿದೆ.

೫. ಸಂತೂಬಾತಿ ದೇವಾಲಯ :

ರಾಯಬಾಗದ ಬೆಕ್ಕೇರಿ ರಸ್ತೆಯಲ್ಲಿರುವ ಈ ದೇವಾಲಯವು ಕೆಳವರ್ಗ ಜನರ ಆರಾಧ್ಯ ದೈವವಾಗಿದೆ. ಸಂತಾನ ಫಲ ನೀಡುವ ಈ ದೇವಾಲಯವು ಎಲ್ಲ ಸಮುದಾಯದ ಸ್ತ್ರೀಯರು ಪ್ರತಿ ಸೋಮವಾರ ಮತ್ತು ಗುರುವಾರ ಪೂಜಿಸುತ್ತಾರೆ. ಈ ದೇವಾಲಯವು ಇತ್ತೀಚೆಗೆ ನಿರ್ಮಾಣಮಾಡಿದ್ದು, ಈ ದೇವಾಲಯದಲ್ಲಿ ಎರಡು ಕಂಚಿನ ಮೂರ್ತಿಗಳಿವೆ. ಸಂತೂಬಾಯಿಯ ಎಡಬಾಗದಲ್ಲಿ ಲಕ್ಕವ್ವ ಹಾಗೂ ಬಲಬಾಗದಲ್ಲಿ ಭರಮಪ್ಪನ ಮೂರ್ತಿಗಳಿವೆ. ದೇವಾಲಯದ

ಮುಂಬಾಗದಲ್ಲಿ ಪಾದುಕೆಗಳಿವೆ ಹಾಗೂ ದೇವಸ್ಥಾನದ ಮುಂಬಾಗದಲ್ಲಿ ೨೦೦ ವರ್ಷಗಳ ಆಲದ ಮರವಿದೆ.

೬. ನಾಗಮ್ಮನ ದೇವಾಲಯ :

ರಾಯಬಾಗದಲ್ಲಿ ಎರಡು ನಾಗಮ್ಮನ ಚಿಕ್ಕ ದೇವಸ್ಥಾನವಿದ್ದು, ಎಡೆ ತೊರೆದ ಎರಡು ಶಿಲ್ಪಗಳಲ್ಲಿ ವ್ಯತ್ಯಾಸ ಅಷ್ಟಾಗಿ ಕಂಡು ಬರುವುದಿಲ್ಲ. ಪಶ್ಚಿಮ ದಿಕ್ಕಿನಲ್ಲಿರುವ ನಾಗಮ್ಮ ದೇವಾಲಯಗಳು ಮಾತ್ರ ಎರಡು ಎಡೆಯನ್ನು ಮಾತ್ರ ಒಳಗೊಂಡಿದೆ. ಪೂರ್ವ ದಿಕ್ಕಿನಲ್ಲಿರುವ ನಾಗಮ್ಮನ ಶಿಲ್ಪ ಒಂದು ಹೆಡೆಯನ್ನು ಹೊಂದಿದೆ. ಚಿಕ್ಕದಾದ ದೇವಸ್ಥಾನ ಹೊಂದಿದೆ. ಇದು ನಾಗವ್ವನ ಭಕ್ತರು ವಿಶೇಷ ಪೂಜೆ ಪುನಸ್ಕಾರವನ್ನು ಸಲ್ಲಿಸುತ್ತಾರೆ. ಐತಿಹಾಸಿಕವಾಗಿ ಅಷ್ಟಾಗಿ ಮಹತ್ವ ಹೊಂದಿಲ್ಲ.

೭. ಗಣಪತಿ ಮೂರ್ತಿಗಳು :

ಪ್ರಮುಖವಾಗಿ ಮೂರು ಗಣಪತಿ ಮೂರ್ತಿಗಳು ಕಂಡು ಬರುತ್ತವೆ. ಕಂಬಾರ ಓಣಿಯ ಗಣಪತಿಯೂ ಎರಡುವರೆ ಪೂಟು ಅಗಲ ಮೂರುವರೆ ಪೂಟ ಎತ್ತರ ಇದ್ದು, ನುಣುಪಾದ ಕಲ್ಲಿನಿಂದ ಕೆತ್ತಲಾಗಿದೆ. ಬಡಿಗೇರ ಓಣಿಯ ಗಣಪತಿ ಪ್ರಕೃತಿ ವಿಕೋಪದಿಂದ ನಶಿಸಿದ್ದು, ಮಧ್ಯಮ ಗಾತ್ರದ ಮೂರ್ತಿ ಇದಾಗಿದೆ. ಇವುಗಳಲ್ಲಿದೆ ಸೋಮನಾಥ ದೇವಾಲಯಗಳಲ್ಲಿರುವ ವಿಗ್ರಹವಿದೆ. ಹಾಗೂ ಚಿಂಚಲಿ ರಸ್ತೆಯಲ್ಲಿ ಸ್ಥಾಪಿಸಲ್ಪಟ್ಟಿದೆ. ಜೆ.ಎಲ್.ಬಿ.ಸಿ. ಆವರಣದಲಿರುವ ಗಣಪತಿ ವಿಗ್ರಹ ಪ್ರಮುಖವಾಗಿದೆ.

೮. ರೇಣುಕಾ ದೇವಾಲಯ :

ರೇಣುಕಾ ದೇವಾಲಯವು ರಾಯಬಾಗದಲ್ಲಿ ಹೊರ ವಲಯದಲ್ಲಿ ಪೂರ್ವ ದಿಕ್ಕಿಗೆ ಇದೆ. ಈ ದೇವಸ್ಥಾನವು ಸಭಾ ಮಂಟಪ ಗರ್ಭಗುಡಿ ಶಿಖರವನ್ನೊಳಗೊಂಡಿದ್ದು, ಸುಮಾರು ೮೦ ವರ್ಷದ ಹಿಂದುಗಡೆ ಈ ದೇವಾಲಯ ನಿರ್ಮಾಣಗೊಂಡಿದೆ. ಗರ್ಭಗುಡಿಯ ಎತ್ತರವಾದ ಜಗುಲಿಯ ಮೇಲೆ ಎಲ್ಲಮ್ಮನ ಕಪ್ಪು ಶಿಲೆಯ ಮೂರ್ತಿ ಇದ್ದು, ಬಲಗಡೆ ಜಮದಗ್ನಿ ಋಷಿ ಎಡಗಡೆ ಪರುಶುರಾಮನ ಮೂರ್ತಿಯ ಇದೆ. ಸವದತ್ತಿ ಎಲ್ಲಮ್ಮನ ಭಕ್ತರು ಅನುಕೂಲಕ್ಕಾಗಿ ತಮ್ಮ ಊರಿನಲ್ಲಿ ಈ ದೇವಸ್ಥಾನ ನಿರ್ಮಾಣ ಮಾಡಿದ್ದಾರೆ.

೯. ಬ್ರಹ್ಮ ವಿಷ್ಣು ಮಹೇಶ್ವರ ದೇವಾಲಯ :

ಸುಮಾರು ೪೦ ವರ್ಷಗಳ ಹಿಂದೆ ಈ ದೇವಸ್ಥಾನವನ್ನು ನಿರ್ಮಾಣ ಮಾಡಿದ್ದು, ಪ್ರಾಚೀನ ಕಾಲದ ಮೂರ್ತಿ ಶಿಲ್ಪಗಳು ಹೊಸ ಕಟ್ಟಡದಲಿ ಪ್ರತಿಷ್ಠಾಪಿತಗೊಂಡಿದೆ. ಕಪ್ಪು ಶಿಲೆಯಲ್ಲಿ ರಚನೆಯಾದ ಬ್ರಹ್ಮ, ವಿಷ್ಣು, ಮಹೇಶ್ವರ ಶಿಲ್ಪವು ಪ್ರಾಚೀನತೆಯ ಕುರುಹುಗಳಾಗಿ ಕಂಡು ಬರುತ್ತವೆ ಬಲ ಮತ್ತು ಎಡ ಭಾಗಕ್ಕೆ ನಾಗ ಶಿಲ್ಪ ಮಧ್ಯದಲ್ಲಿ ಗಣಪತಿ ಶಿಲ್ಪವನ್ನು ಒಳಗೊಂಡಿದೆ ಹಾಗೂ ಅಂಭಾಭವಾನಿ ದೇವಾಲಯದ ಹಾಂಬದಿಯಲ್ಲಿ ಉತ್ತರ ದಿಕ್ಕಿಗೆ ಸುಮಾರು ೪೦ ವರ್ಷದ ಬ್ರಹ್ಮ ದೇವರು ಇದೆ, ಗರ್ಭಗುಡಿಯಲ್ಲಿ ಮೂರ್ತಿಯ ಎತ್ತರವಾದ ಜಗಲಿಯಲ್ಲಿ ಅಸ್ಥಾಕಿತವಾಗಿದೆ. ಬಲಭಾಗದೂ ಒಂದು ನಾಗ ಶಿಲ್ಪ ಬಲಭಾಗದಲ್ಲಿ ೨ ನಾಗ ಶಿಲ್ಪಗಳನ್ನಾಗಿ ಹೊಂದಿದೆ.

೧೦. ಭರಮಪ್ಪನ ದೇವಸ್ಥಾನ :

ಈ ದೇವಸ್ಥಾನವು ಪೂರ್ವಕ್ಕಿದ್ದು ಆಧುನೀಕರಣಗೊಂಡ ಕಟ್ಟದಲೂ ಸ್ಥಾಪಿಸಲಾಗಿದೆ. ಗರ್ಭಗುಡಿಯ ಒಳಗೆ ಎಡಭಾಗದಲ್ಲಿ ಭರಮಪ್ಪನ ಮೂರ್ತಿಯಿದೆ. ಬಲಭಾಗಕ್ಕೆ ಎರಡು ನಾಗ ಮೂರ್ತಿ ಇವೆ. ಸುಮಾರು ೮೦ರಿಂದ ೯೦ವರ್ಷಗಳ ಹಿಂದೆ ಈ ಶಿಲ್ಪಗಳು ರಚನೆಯಾಗಿವೆ.

ಈ ಮೇಲೆ ಹೇಳಿದ ದೇವಾಲಯಗಳಲ್ಲದೆ ಇನ್ನು ಅನೇಕ ದೇವಾಲಯಗಳು ಆಧುನಿಕ ಕಟ್ಟಡಗಳ ವಿದ್ಯಾಸವನ್ನು ಹೊಂದಿ ತಲೆ ಎತ್ತಿ ನಿಂತಿವೆ. ಅವುಗಳಲ್ಲಿ ಪೋಲಿಸ್ ಠಾಣೆಯ ಪಕ್ಕದಲ್ಲಿರುವ ಶಿತಾಲವು ಪೂರ್ವದಿಕ್ಕಿಗಿದ್ದು, ಲಿಂಗ ಮತ್ತು ನಂದಿ ವಿಗ್ರಹಗಳನ್ನು ಹೊಂದಿದ್ದು, ೩೫ವರ್ಷಗಳ ಹಿಂದೆ ನಿರ್ಮಾಣದ ದೇವಾಲಯ ಇದಾಗಿದೆ. ಅದೇ ರೀತಿ ದುರ್ಗವ್ವನ ಗುಡಿಯ ಹರಿಜನ ಕೇರಿಯಲ್ಲಿದ್ದು ಎರಡು ಮೂರ್ತಿಗಳನ್ನು ಒಳಗೊಂಡ ಈ ದೇವಾಲಯವನ್ನು ೪೦ ವರ್ಷದ ಹಿಂದೆ ಕಾಲ್ಪಿಸಲಾಗಿದೆ. ಇವುಗಳಲ್ಲಿ ಮಲ್ಲಿಕಾರ್ಜುನ ದೇವಾಲಯ ಇತ್ತೀಚೆಗೆ ನಿರ್ಮಾಣವಾಗಿದೆ. ಭ್ರಮರಾಂಭಿಕ ದೇವಾಲಯವು ಈಶ್ವರಲಿಂಗ ಹಾಗೂ ನಂದಿಯನ್ನು ಒಳಗೊಂಡ ಪೂರ್ವ ದಿಕ್ಕಿಗೆ ದೇವಾಲಯ ಮುಖದ್ವಾರ ಕಂಡು ಬರುತ್ತದೆ. ಶಕ್ತಿದೇವತೆಗಳಲ್ಲಿ ಒಂದಾದ ಏಳು ಮಕ್ಕಳ ತಾಯಿ ದೇವಾಲಯ ಊರ ಹೊರಗಿನ ಪ್ರದೇಶದಲ್ಲಿ ಕಂಡು ಬರುತ್ತದೆ. ಇವುಗಳಲ್ಲದೆ ಕೋರ್ಟ ರಸ್ತೆಯಲ್ಲಿರುವ ಲಕ್ಷ್ಮೀ ಮಂದಿರ ೨೦೦೪ರೂ ನಿರ್ಮಾಣಗೊಂಡಿವೆ. ಮಹಾಲಕ್ಷ್ಮೀ ಮಂದಿರ ಗರ್ಭಗುಡಿಯ ೪೦ ವರ್ಷಗಳ ಹಿಂದೆ ನಿರ್ಮಾಣ ಮಾಡಿದ್ದು, ಹಲವು ಭಕ್ತರ ಆರಾಧ್ಯ ದೈವರಾಗಿ ಕಂಡು ಬರುತ್ತದೆ.

ಒಟ್ಟಾರೆಯಾಗಿ ರಾಯಬಾಗದ ದೇವಾಲಯಗಳು ಹತ್ತು ಹಲವು ವೈಶಿಷ್ಟತೆಗಳಿಂದ ರಚನೆಗಳಾಗಿರುವಂತವುಗಳು ಐತಿಹಾಸಿಕ ದೃಷ್ಟಿಯಿಂದ ಪ್ರತಿಯೊಂದು ಸಮುದಾಯದ ದೇವಾಲಯದ ಕುರಿತು ಅವುಗಳ ಸಾಮಾಜಿಕ, ಧಾರ್ಮಿಕ, ಕೊಡುಗೆಗಳ ಕುರಿತು ಇನ್ನು ನಡೆಯಬೇಕಾಗಿದೆ.

ಅಡಿ ಟಿಪ್ಪಣಿಗಳು

೧. *ಸಂಗಮರ ದೇವಾಲಯಗಳು*, ಡಾ.ಶ್ರೀಮತಿ ಸಿ. ಎಸ್. ಅಪರ್ಣ (ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ.೨೦೦೭ – ೦೮) ಪುಟ ಸಂಖ್ಯೆ –೫೧

೨. ಅದೇ ಪುಟ –೫೧

೩. ಅದೇ ಪುಟ –೫೨

೪. *Inscripsion in North Karanataka and The Kollapur state writted by* K.G.Kundanagar

೫. *ಜೈನ ಐತಿಹ್ಯ*, ಪಿ.ಜಿ.ಕೆಂಪನ್ನವರ.

೬. *ಜೈನ ಪರಂಪರೆ*, (೨೦೦೨ ಜಿಲ್ಲಾಧಿಕಾರಿಗಳು ಭಗವಾನ ಮಹಾವೀರ ಕಲ್ಯಾಣಕರ ಮಹೋತ್ಸವ ಸಮಿತಿ ಬೆಳಗಾವಿ).

೭. *ಕರ್ನಾಟಕ ಭಾರತಿ ವಾರ್ಷಿಕ ಪತ್ರಿಕೆ* ಸಂ.ಡಾ.ಹೆಚ್.ಎಂ.ಮಹೇಶ್ವರಯ್ಯ (ಕ.ವಿ.ವಿ ಧಾರವಾಡ. ಜುಲೈ–೨೦೦೮), ಪುಟ ಸಂಖ್ಯೆ –೨೦೭

೮. 'ಅದೇ' ಪುಟ ಸಂಖ್ಯೆ –೨೦೯

೯. 'ಅದೇ' ಪುಟ ಸಂಖ್ಯೆ –೨೦೯–೧೦

೧೦. 'ಅದೇ' ಪುಟ ಸಂಖ್ಯೆ –೨೧೧

೧೧. 'ಅದೇ' ಪುಟ ಸಂಖ್ಯೆ –೨೧೩

೧೨. 'ಅದೇ' ಪುಟ ಸಂಖ್ಯೆ –೨೧೩

ಅಧ್ಯಾಯ – ೪

ರಾಯಬಾಗದ ದೇವಾಲಯಗಳ ರಚನಾ ವಿನ್ಯಾಸ

ರಾಯಬಾಗದ ದೇವಾಲಯಗಳ ರಚನಾ ವಿನ್ಯಾಸ

ಮಾನವ ತಾಕಿಕ ಬದುಕಿನ ಜಂಜಾಟಗಳನ್ನು ದೂರವಿಡಲು ಧರ್ಮವನ್ನು ಆಸ್ರಯಿಸಿದ ಧರ್ಮದಿಂದ ತಾಕಿಕ-ಅತಾಕಿಕ ವ್ಯವಹಾರಗಳನ್ನು & ಅದರೊಂದಿಗೆ ವ್ಯವಹರಿಸತೊಡಗಿದ ಧರ್ಮವು ಅತ್ಯನ್ನತವಾಗಿ ಬೆಳೆಯಲು ಅವುಗಳಿಗೆ ನಿರ್ದಿಷ್ಪವಾದ ಒಂದು ನೆಲೆಯನ್ನು ಕಂಡುಕೊಳ್ಳುವ ಸಲುವಾಗಿ ದೇವಾಲಯಗಳನ್ನು ನಿರ್ಮಿಸತೊಡಗಿದ ಮೊದಮೊದಲು ಮೂರ್ತಿ ಪೂಜೆ ಮಾಡಿ ಸಾಧನೆಗೈದ ನಂತರ ಅವುಗಳಿಗೆ ನಿರ್ದಿಷ್ಪವಾದ ಸ್ಥಾನವನ್ನು ಪ್ರತಿಷ್ಟಾಪಿಸಿದನು.

ದೇವರ ಮೂರ್ತಿಗಳನ್ನು ಉದ್ದೇಶದಿಂದ ಅವುಗಳಿಗೆ ಸೂಕ್ತ ಭದ್ರತೆಯನ್ನು ಒದಗಿಸಲು ದೇವರಿಗೆ ಸುರಕ್ಷಿತವಾಗಿ ಇಡಲು ಚಿಕ್ಕಚಿಕ್ಕಗೂಡಿನಾಕಾರದ ಮನೆಗಳನ್ನು ನಿರ್ಮಿಸಿದ ನಾಗರಿಕತೆ ಬೆಳೆದೆಂತೆಲ್ಲ ದೇವರ ಸ್ಥಾನಗಳಿಗೆ ವಿಶೇಷವಾದ ಸ್ಥಾನ ಇರಬೇಕು. ಎಂದು ಅವನು ವಿಶೇಷವಾದ ಹಾಗೂ ವಿಭಿನ್ನವಾದ ಮಂದಿರಗಳನ್ನು ನಿರ್ಮಿಸಿದ ಮಾನವ ಇಂದು ಅಸಂಖ್ಯಾ ದೇವಾಲಯಗಳ ನಿರ್ಮಾಣ ಮಾಡಿದನು. ಮುಂದುವರೆದು ದೇವಾಲಯಗಳ ರಚನಾ ವಿನ್ಯಾಸವನ್ನು ವೈವಿಧ್ಯಮಯವಾಗಿ ರೂಪಿಸಲು ಜನರ ಅಭಿವೃದ್ಧಿಗೆ ತಕ್ಕಂತೆ ಆಯಾ ಮತಧರ್ಮಗಳ ಅನ್ವಯವಾಗಿ ದೇಆಲಯಗಳನ್ನು ಇಂದು ಅತ್ಯಂತ ವಿಶಿಷ್ಠವಾಗಿ ನಿರ್ಮಿಸಿದ್ದಾರೆ. ಈ ನಿಟ್ಟಿನಲ್ಲಿ ದೇವಾಲಯಗಳ ವಿಶಿಷ್ಟತೆ, ವೈವಿದ್ಯತೆ ರಚನಾ ವಿನ್ಯಾಸ ಕಟ್ಟಡದ ಸ್ವರೂಪ ನಿರ್ಮಿಸಿದ ಧರ್ಮಗಳ ಪಾತ್ರ ಮುಂತಾದವುಗಳನ್ನು ರಾಯಬಾಗ ದೇವಾಲಯಗಳನ್ನು ಹಿನ್ನೆಲೆಯಲ್ಲಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ರಾಯಬಾಗ ಪರಿಸರದ ದೇವಾಲಯಗಳಲ್ಲಿ ರಚನೆಯ ಹಿನ್ನೆಲೆಯಲ್ಲಿ ಹೆಚ್ಚಾಗಿ ದೇವಾಲಯ ರಚಿತವಾದದ್ದು ಚಾಲುಕ್ಯರ ಶೈಲಿಯಲ್ಲಿ ಆ ನಂತರ ಚಾಲುಕ್ಯ ಶೈಲಿ ಹಾಗೂ ಇಂಡೋ ಇಸ್ಲಾಂ ಶೈಲಿ, ಆಧುನಿಕ ಶೈಲಿ ಮುಂತಾದವುಗಳು ಪ್ರಮುಖವಾಗಿ ರಚನಾ ವಿನ್ಯಾಸದ ಹಿನ್ನೆಲೆಯಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ ಚಾಲುಕ್ಯರ ಶೈಲಿಯ ಗರ್ಭಗುಡಿ ಅರ್ಥ


ಮಂಟಪ, ಸಭಾ ಮಂಟಪ, ಮುಖ ಮಂಟಪಗಳನ್ನು ಒಳಗೊಂಡಿವೆ. ಕೆಲವು ಇತ್ತಿಚೀನ ದೇವಾಲಯಗಳ ದೇವಾಲಯಗಲ್ಲಿ ಗೋಡೆಯ ಆವರಣದಲ್ಲಿ ಮೂರ್ತಿಯನ್ನು ರಚಿಸುವ ಬದಲು ಬಣ್ಣದ ಮೂರ್ತಿಯನ್ನು ಬಿಡಿಸಿರುವುದು. ಕಂಡು ಬರುತ್ತದೆ. ನಂತರದ ಚಾಲುಕ್ಯರ ಶೈಲಿಯಲ್ಲಿ ಸಭಾ ಮಂಟಪದ ಮೇಲ್ಚಾವಣಿಯು ಬಂಡೆಗಲ್ಲಿನ ಸಹಾಯವಾದ ನಕ್ಷತ್ರ ಹೂವುಗಳ ರಚನೆ ಕಂಡು ಬರುತ್ತದೆ. ಗೋಡೆಯಲ್ಲಿ ಮಾಡಗಳು ರಚಿಸಿದ್ದು ವಿಶೇಷವಾಗಿರುತ್ತದೆ. ಕೆಲವು ಚಾಲುಕ್ಯ ಶೈಲಿಯ ದೇವಾಲಯಗಳಲ್ಲಿ ಸುಖ-ಶಿಖರ ದೇವಾಲಯಗಳು ಕಂಡು ಬರುತ್ತವೆ. ಎಲ್ಲ ದೇವಾಲಯಗಳಲ್ಲಿ ಎತ್ತರವಾದ ಪೀಠ ಸಾಮಾನ್ಯವಾಗಿ ಕಂಡು ಬರುತ್ತದೆ. ಚಾಲುಕ್ಯ ಶೈಲಿಯ ದೇವಾಲಯಗಳ ರಚನಾ ವಿನ್ಯಾಸ ರಾಯಬಾಗದ ಗಡಸ ಬಸದಿಯ ವಿಶಿಷ್ಟತೆಯಿಂದ ಕಂಡು ಬರುತ್ತದೆ. ರಚನಾ ವಿನ್ಯಾಸ ಶೈಲಿಯನ್ನು ಈ ರೀತಿಯಾಗಿ ನೋಡಲಾಗಿದೆ.

ಗಡದ ಬಸದಿಯ ಚಿತ್ರ-೧ (Daigramme)

ಗಡದ ಬಸದಿ



ಬಸದಿಯ ಗೋಪುರ



1. ಗರ್ಭಗುಡಿ. 2. ಸುಕನಾಸಿ. 3. ನವರಂಗ. 4.5.6. ಸುಂದರ ಕೆತ್ತನೆಯ ದಾಗಿಲ ಚೌಕಟ್ಟುಗಳು. 7. ಮುಖಮಂಟಪ. 8. ಪ್ರದಕ್ಷಿಣಾಪಥ 9. ರಾಜಕೀಯ ಗುಪ್ತಮಾರ್ಗ.

ಈ ಮೇಲಿನ ಗಡದ ಬಸದಿಯು ಪೂರ್ವಾಭಿಮುಖವಾಗಿದ್ದು ಗರ್ಭಗುಡಿಯ ಸುಖನಾಶಿ ಚೈತ್ಯಾಲಯ ಸಭಾ ಮಂಟಪ ಹೊರಾಂಡವನ್ನು ಹೊಂದಿದ್ದು, ಗರ್ಭಗುಡಿಯ ಮೇಲೆ ಶಿಖರ ಒಂಬತ್ತು ಮೆಟ್ಟಿಲಗಳಿಂದ ಕೂಡಿದ್ದು ಬಸದಿಯ ಸುಂದರತೆಯನ್ನು ಹೆಚ್ಚಿಸಿದೆ. ಗರ್ಭಗೃಹದಲ್ಲಿ ವಿಗ್ರಹಗಳನ್ನು ಎತ್ತರವಾದ ಜಗುಲಿಯ ಮೇಲೆ ಪ್ರತಿಸ್ಥಾಪಿಸಿದ್ದಾರೆ. ಸಭಾಮಂಟಪದ ಎಡ-ಬಲಭಾಗದಲ್ಲಿ ಪದ್ಮಾವತಿ ಹಾಗೂ ಕಿರೀಟಧಾರಿಯಾದ ಪಾರ್ಶ್ವನಾಥನ ಮೂರ್ತಿಯ ಆ ಬಸದಿಗೊಂಡು ಸೌಂಧರ್ಯತೆಯನ್ನು ತಂದುಕೊಟ್ಟಿವೆ. ಚಿಂಚಲಿ ರಸ್ತೆಯಲ್ಲಿರುವ ಈ ಗಡದ ಬಸದಿಯು ನವೀಕರಣಗೊಂಡಿದೆ. ಬಸದಿಯ ಹೊರ ಮಗ್ಗಲಿನ ಗೋಡೆಗಳು ಪೇಶ್ವಗಳ ಕಾಲದಲ್ಲಿ ಪುನರಚನೆಯಾದಂತೆ ಕಂಡು ಬರುತ್ತದೆ. ಮೇಲಿನ ಗೋಪುರ ನವೀಕರಣಗೊಳಿಸಿದ್ದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಗೋಪುರರವು ಸುಟ್ಟ ಇಟ್ಟಿಗೆಯಿಂದ ನಿರ್ಮಿತವಾಗಿದೆ. ಬಸದಿಯ ಒಳಭಾಗ ಚಾಲೂಕ್ಯಶೈಲಿಯ ವಿನ್ಯಾಸವನ್ನೆ ಮುಂದುವರಿಸಿಕೊಂಡು ಬಂದಿವೆ. ಇಲ್ಲಿ ಪುನರ್ ನಿರ್ಮಾಣಗೊಂಡ ಬಗ್ಗೆ ತಿಳಿದುಬರುವುದಿಲ್ಲ. ಗರ್ಭಗುಡಿಯ ವೇದಿಕೆಯ ಮೇಲೆ ನಿಂತ ಸುಮಾರು ಎರಡುವರೆ ಎತ್ತರವಿದ್ದ ಪಾರ್ಶ್ವನಾಥನ ಮೂರ್ತಿಯ ಶಿಲ್ಪ ಕಲಯೂ ನಜೂಕಿನಿಂದ ಕೂಡಿದ್ದು ಕಂಡು ಬರುತ್ತದೆ. ಸುಖನಾಸಿಯಿಂದ ಗುಪ್ತ ಮಾರ್ಗವಿರುವುದು ತಿಳಿದು ಬರುತ್ತದೆ. ಹಾಗೂ ಸುಂದರ ಕೆತ್ತನೆಯ ಸುಳಿವುಗಳಿಂದ ಕೂಡಿದ ಮನೋಹರ ಕಂಬಗಳು ಹೀಗೆ ಈ ಮಂಟಪ ಪ್ರಾಚೀನ ತಿಳುವಳಿಕೆಯ ದ್ಯೂತಕವಾಗಿದೆ. ಬೋಧಣೆಗಳಲ್ಲಿ ಹಾಗೂ ಮೇಲ್ಚಾವಣೆಗಳಲ್ಲಿ ಕಲ್ಲಿನಲ್ಲಿ ಅರಳಿದ ಕಮಲಗಳಿವೆ. ಗರ್ಭಗುಡಿ ಹಾಗೂ ಮಹಾದ್ವಾರ ಚೌಕಟ್ಟುಗಳು ಚಿತ್ರ ಮೈಯ್ಯಾರಗಳಿಂದ ಕೂಡಿವೆ. ಬಸದಿಯ ಹಿಂಬಾಗದಲ್ಲಿ ಕೊತ್ತಲವಿದೆ. ಇದು ಕೊಲ್ಲಾಪುರರಾಜರ ಕಾಲದಲ್ಲಿ ನಿರ್ಮಾಣಗೊಂಡಿದೆ. ಹೀಗೆ ಗಡದ ಬಸದಿಯ ರಚನಾ ವಿನ್ಯಾಸವನ್ನು ಗುರುತಿಸಲಾಗಿದೆ.

ಕಲ್ಯಾಣ ಚಾಲುಕ್ಯರ ಆ ನಂತರದ ಶೈಲಿಯ ಪುರಾತನ ಜಿನಾಲಯವಾದ ಪಾರ್ಶ್ವನಾಥ


ಬಸದಿಯು ಚಿತ್ರಾಕಾರದ ಗರ್ಭಗೃಹ ಅರ್ಧಮಂಟಪ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದ ಮೇಲಿನ ಶಿಖರವು ಕದಂಬರ ಓ ನಾಗರ ಶೈಲಿಯಲ್ಲಿದ್ದು ಜೀರ್ಣೋದ್ದಾರಗೊಂಡಿದೆ. ಗರ್ಭಗೃಹದ ಪ್ರವೇಶದ್ವಾರದ ಲಲಾಟದ ಮಧ್ಯ ಜಿನಬಿಂಬದ ಕೆತ್ತನೆಯಿದ್ದು ಅರ್ಧ ಮಂಟಪದ ಮೇಲ್ಚಾವಣೆಯಲ್ಲಿ ಕಮಲವಿದ್ದು ಅದರ ಪ್ರವೇಶದ್ವಾರವು ಅಲಂಕೃತವಾಗಿದೆ. ಅಲ್ಲಿ ೨೩ನೇ ತೀರ್ಥಂಕರನ ಪಾರ್ಶ್ವನಾಥನ ಮೂರ್ತಿ ಕಪ್ಪುಶಿಲೆಯಲ್ಲಿ ರಚಿತವಾಗಿದೆ. ಮುಖಮಂಟಪದ ಎರಡು ಬದಿಗಳಲ್ಲಿ ಯಕ್ಷ-ಯಕ್ಷಿಯರಿಗೆ ಕೋಷ್ಠಗಳನ್ನು ಕೆತ್ತಲಾಗಿದೆ. ಮುಖಮಂಟಪದ ಮಧ್ಯದ ನಾಲ್ಕು ಕಂಬಗಳು ಸುಂದರವಾದ ಕೆತ್ತನೆಯಿಂದ ಕೂಡಿದ್ದು ಮಧ್ಯದಲ್ಲಿ ಎತ್ತರವಾದ ಜಗುಲಿಯಿದ್ದು

ಸುತ್ತಲೂ ಅಕ್ಷಾಸನಗಳಿವೆ. ಇವುಗಳ ಮೇಲೆ ಸುಂದರ ಹುಬ್ಬು ಕಲಾಕೃತಿಗಳನ್ನು ಕೆತ್ತಲಾಗಿದೆ. ಸಾಮಾನ್ಯವಾಗಿ ರಾಯಬಾಗದ ಪ್ರಾಚೀನ ಮಂದಿರಗಳೆಲ್ಲ ಚಾಲುಕ್ಯ ಶಿಲ್ಪಶೈಲಿಯಲ್ಲಿಯಲ್ಲಿ ರಚಿತವಾಗಿವೆ. ಜಿನಾಲಯವು ಆ ಶೈಲಿಯ ಅತ್ಯುತ್ತಮ ಉದಾಹರಣೆಯಾಗಿದೆ. ಈ ಬಸದಿಯು ರಾಯಬಾಗದ ಅತೀ ಪ್ರಾಚೀನ ಮಂದಿರವಾಗಿದ್ದು ಚಾಲುಕ್ಯರ ವಾಸ್ತುಶಿಲ್ಪ ತನ್ನಪರಿಪೂರ್ಣತೆಯನ್ನು ಇಲ್ಲಿ ಬಿಂಬಿಸಿದೆ. ಈ ಜಿನಾಲಯವು ನಾಲ್ಕು ಅಂಗಗಳನ್ನು ಒಳಗೊಂಡಿದ್ದು, ಒಂದು ಗರ್ಭಗುಡಿಯ ಮೇಲೆ ಗೋಪುರ ಎರಡು, ಸುಖನಾಸಿ (ಒಳಮಂಟಪ ಗರ್ಭಗುಡಿಯ ಮುಂಬಾಗ) ಸುಮಾರು, ನವರಂಗ, ನಾಲ್ಕು ಮುಖಮಂಟಪವು ಈ ಬಸದಿಯ ವೈಭವವನ್ನು ಹೆಚ್ಚಿಸಿದೆ. ಇಲ್ಲಿಯ ಮಾನಸ್ತಂಭ ಜಿನಾಲಯದ ಎದುರಿಗೆ ಎತ್ತರವಾದ ಪೀಠದ ಮೇಲೆ ನಿರ್ಮಾಣಗೊಂಡಿದೆ.

ಗರ್ಭಗುಡಿಯಲ್ಲಿ ಪದ್ಮಾನಸ್ತನಾದ ಪಾರ್ಶ್ವನಾಥನ ವಿಗ್ರಹವು ಮನೋಹರವಾಗಿದೆ. ಸುಖನಾಸಿಯ ಗರ್ಭಗುಡಿಯ ಮುಂಬಾಗ ಭಕ್ತರು ದೇವತಾ ಸೇವೆಯನ್ನು ಮಾಡಲು ನೋಡಲು ಸ್ಥಳವಕಾಶವಿದೆ. ಇವುಗಳೊಂದಿಗೆ ಆ ಮಾನಸ್ತಂಭವು ವಿಶಾಲವಾದ ತಳಹದಿಯನ್ನು ಹೊಂದಿ ಎತ್ತರವಾಗಿದ್ದು ಧರ್ಮದಿಗ್ವಿಜಯದ ಕುರುಹಾಗಿ ನಿಂತಿದೆ. ಇನ್ನು ರಂಗಮಂಟಪದ ಮೇಲ್ಚಾವಣೆಯ ಚಾಲುಕ್ಯರ ಶೈಲಿಯು ಸುಂದರವಾದ ಮೈ-ಮಾಟ ಗೋಚರಿಸುತ್ತದೆ. ಬಸದಿಯ ಹೊರ ಮೈಯಿ ಉಬ್ಬು ತಗ್ಗುಗಳಿಂದ ಕೂಡಿದ್ದು ಹಾಗೂ ಮಡಿಕೆಗಳಿಂದ ಕೂಡಿದ್ದು ಈ ಜಿನಾಲಯದ ರಚನಾ ವಿನ್ಯಾಸ ಈ ಕೆಳಗಿನಂತೆ ನೋಡಲಾಗಿದೆ.

ಊರೋಳಗಿನ ಪಾರ್ಶ್ವನಾಥ ಬಸದಿ ಚಿತ್ರ-೨ (Daigramme)

ಊರೊಳಗಿನ ಪಾರ್ಶ್ವನಾಥ ಬಸದಿ




ವಿವರಣೆ : 1. ಗರ್ಭಗುಡಿ. (ಬುದ್ರ ಪದ್ಮಾ ಸನಸ್ಥ ಮೂರ್ತಿ). 2. ಸುಕನಾಸಿ. 3. ನವರಂಗ. 4. ಮಾನಸ್ತಂಭ 5. ಕಾರ್ತ್ಯವೀರ-11 ಕಾಲದ ಶಿಲಾಲೇಖ 6. ಪ್ರದಕ್ಷಿಣಾ ಪಥ. 7. ಕೆತ್ತನೆಯ ಕೆಲಸದ ಚೌಕಟ್ಟುಗಳು (ನವರಂಗದಲ್ಲಿಯ ಕಂಭಗಳ ಕೆಲಸ ಅಪೂರ್ವ.)

ಶೈವ ದೇವಾಲಯಗಳ ರಚನಾ ವಿನ್ಯಾಸವು ರಾಯಬಾಗದಲ್ಲಿ ವಿಶಿಷ್ಟತೆಯಿಂದ ಕಂಡು ಬರುತ್ತದೆ. ಅವುಗಳಲ್ಲಿ ಸೋಮನಾಥ ದೇವಾಲಯ ದೇವಾಲಯ ಬಾಗಿ ಬಂಕನಾಥ ದೇವಾಲಯ ಪ್ರಮುಖವಾದವು. ಸೋಮನಾಥ ದೇವಾಲಯವು ನಂತರದ ಚಾಲುಕ್ಯರ ಶೈಲಿಯ ರಚನೆಯಲ್ಲಿ ನಿರ್ಮಿಸಲಾಗಿದೆ. ಸೋಮನಾಥ ದೇವಾಲಯವು ಗರ್ಭಗುಡಿ ಅರ್ಧಮಂಟಪ, ಸಭಾಮಂಟಪ, ಮುಖಮಂಟಪಗಳನ್ನು ಹೊಂದಿದೆ. ಸಭಾ ಮಂಟಪದಲ್ಲಿ ಸುಂದರವಾಗಿ ಕುಸುರೆ ಕೆತ್ತನೆಯ ನಾಲ್ಕು ಕಂಬಗಳಿದ್ದು, ಇದರ ಅಂದವನ್ನು ಹೆಚಿಸಿದೆ. ಈ ದೇವಾಲಯದ ಸಭಾಮಂಟಪದ ಮೇಲ್ಛಾವಣೆಯು ನಕ್ಷತ್ರಹೂಗಳ ಶಿಲ್ಪಕಲೆಯಿಂದ ಗೋಡೆಗಳಲ್ಲಿ ಮಾಡಗಳಿವೆ. ಈ ದೇವಾಲಯದ ಅಂದವನ್ನು ಮತ್ತಷ್ಟು ಹೆಚ್ಚಿಸಿದೆ.

ಚಾಲುಕ್ಯ ಶೈಲಿಯಲ್ಲಿ ರಚನೆಯಾದ ಇನ್ನೊಂದು ದೇವಾಲಯವೆಂದರೆ ಬಾಗಿ ಬಂಕನಾಥ ದೇವಾಲಯ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಸಭಾ ಮಂಟಪ ಹಾಗೂ ಶೀಖರವನ್ನು ಹೊಂದಿರುತ್ತದೆ. ಈ ದೇವಾಲಯವು ಹಲವಾರು ಬಾರಿ ನವೀಕರಿಸಲಾಗಿದೆ. ಈ ದೇವಾಲಯವು ಹಲವಾರು ಬಾರಿ ನವೀಕರಿಸಲಾಗಿದೆ. ಇದರ ರಚನೆ ವಿನ್ಯಾಸವು ಈ ಕೆಳಗಿನಂತೆ ಇರುತ್ತದೆ. ಈ ದೇವಾಲಯವು ಭೂಮಿಯ ಸಮಪಾತಳಿಯಿಂದ ಸ್ವಲ್ಪ ಕೆಳಗಿದ್ದು ಅಲ್ಲಿನ ಜನರ ನಂಬಿಕೆಯಂತೆ ಪ್ರತಿವರ್ಷ ಗೋಧಿ ಕಾಳಿನಷ್ಟು ಕೆಳಗೆ ಇಳಿಯುತ್ತಾ ಹೋಗುತ್ತದೆ ಎಂದು ನಂಬಿಕೆ ಸಂಪೂರ್ಣವಾಗಿ ಈ ದೇವಾಲಯ ಮುಳುಗಿ ಹೋದರೆ ಈ ಪ್ರಪಂಚವೇ ಮುಳುಗಿ ಹೋಗುತ್ತದೆ. ಎಂಬ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ.

ಬಾಗಿ ಬಂಕನಾಥ ದೇವಾಲಯದ ಒಳವಿನ್ಯಾಸ

ಬಾಗಿ ಬಂಕನಾಥ ದೇವಾಲಯದ ಒಳವಿನ್ಯಾಸ




೧) ಗರ್ಭಗೃಹ

೨) ಸಭಾಮಂಟಪ

೩) ಹೊರವಲಯದ ರಕ್ಷಣಾಗೋಡೆ


ಬಾಗಿ ಬಂಕನಾಥ ದೇವಾಲಯದ ಗೋಪುರ



ಬಾಗಿ ಬಂಕನಾಥ ದೇವಾಲಯದ ಗೋಪುರ

ರಾಯಬಾಗ ದೇವಾಲಯಗಳಲ್ಲಿ ಪ್ರಸಿದ್ಧವಾದದ್ದು ಸಿದ್ದೇಶ್ವರ ದೇವಾಲಯವಾಗಿದೆ. ಎತ್ತರವಾದ ಕಟ್ಟಿಯ ಮೇಲೆ ನಕ್ಷತ್ರಾಕಾರದಲ್ಲಿ ಈ ದೇವಾಲಯ ನಿರ್ಮಿಸಲಾಗಿದ್ದು, ಒಳಗಡೆ ಮತ್ತು ಹೊರಗಡೆ ಕಮಾನುಗಳನ್ನು ಹೊಂದಿದ್ದು, ದೇವಾಲಯಕ್ಕೆ ಮೂರು ದ್ವಾರ ಬಾಗಿಲುಗಳಿವೆ. ದೇವಾಲಯದ ಸುತ್ತಲೂ ಒಂಭತ್ತು ಪೌಳಿಗಳಿವೆ. ಈ ದೇವಾಲಯವು ಗರ್ಭಗೃಹ ಸಭಾಮಂಟಪ ನಗಾರಿ ಕಾಣೆಯನ್ನು ಹೊಂದಿದ್ದು ರಚಿತವಾದ ಕಮಾನುಗಳು ಶೈಲಿಯನ್ನು ನೋಡಿದರೆ ಇದು ಇಂಡೋ-ಇಸ್ಲಾಮಿಕ ಮಾದರಿಯ ಶೈಲಿಯಲ್ಲಿ ರಚನೆಯಾಗಿರುವುದು ತಿಳಿದು ಬರುತ್ತದೆ.

ರಾಯಬಾಗದ ಸಿದ್ಧೇಶ್ವರ ದೇವಸ್ಥಾನದ ರಚನಾ ವಿನ್ಯಾಸ



೧) ನಗಾರಿ ಕಾಣೆ (ಪ್ರವೇಶದ್ವಾರ)

೨) ದೇವಾಲಯ ಸುತ್ತ

೩) ಗರ್ಭಗೃಹ

೪) ಕಮಾನುಗಳು

೫) ಸಭಾಮಂಟಪ

ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ದೇವಾಲಯಗಳು ನಿರ್ಮಾಣ ಆಗಿರುವುದು. ಬಾದಾಮಿ ಚಾಲುಕ್ಯರ ಹಾಗೂ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಅದರಲ್ಲೂ ವಿಶೇಷವಾಗಿ ರಾಯಬಾಗ ಪರಿಸರದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯ ರಚನಾ ದೇವಾಲಯಗಳು ದೊರೆಯುತ್ತವೆ. ಹೀಗಾಗಿ ಇಲ್ಲಿ ಐತಿಹಾಸಿಕವಾದ ದೇವಾಲಯಗಳು ಜಿನಾಲಯಗಳು ಕಲ್ಯಾಣ ಚಾಲುಕ್ಯರ ಹಾಗೂ ಆ ನಂತರದ ಕಾಲದಲ್ಲಿ ಕಂಡು ಬರುತ್ತದೆ.

ಆಧುನಿಕ ಯುಗದಲ್ಲಿ ಪ್ರಾಚೀನ ಕಾಲದಂತೆ ಇಂದು ನೂರಾರು ದೇವಾಲಯಗಳು ತಲೆ ನಿಂತು ಕೊಂಡಿವೆ. ಆಧುನಿಕ ಕಾಲದ ದೇವಾಲಯಗಳು ವಿಶೇಷತೆ ಎಂದರೆ ಹೆಚ್ಚಿನ ದೇವಾಲಯಗಳು ಪೂರ್ವಾಭಿಮುಖವಾದ ದೇವಾಲಯಗೊಂಡಿವೆ. ಹಾಗೂ ದೇವಾಲಯಗಳ ಶೈಲಿಯ ರಚನೆಯನ್ನು ಪ್ರತ್ಯೇಕಿಸಿ ಹೇಳುವುದು ಕಷ್ಟಕರವಾಗಿದೆ. ಎಲ್ಲ ಶೈಲಿಯ ಮಾದರಿಯನ್ನು ಒಳಗೊಂಡ ದೇವಾಲಯಗಳು ರಾಯಬಾಗದಲ್ಲಿ ರಚನೆಯಾಗಿವೆ. ಸಿಮೆಂಟು ಮತ್ತು ಕಬ್ಬಿಣದ ತಂತಿಗಳಿಂದ ಮೂರ್ತಿಶಿಲ್ಪಗಳನ್ನು ಕಲ್ಲಿನ ಮೂರ್ತಿಗಳಿಗಿಂತಲೂ ನಯನಾಜೂಕಾಗಿ ನಿರ್ಮಿಸುತ್ತಾರೆ. ಪ್ರಾಚೀನ ದೇವಾಲಯದ ಮೂರ್ತಿಗಳು ಕಪ್ಪುಶಿಲೆಯಲ್ಲಿ ರಚನೆಯಾದರೆ ಆಧುನಿಕ ಶಿಲ್ಪಮೂರ್ತಿಯ ಸಿಮೆಂಟನ್ನು ಒಳಗೊಂಡು ಬಣ್ಣದ ಲೇಪನ ಮಾಡಿದ ಮೂರ್ತಿಗಳೇ ಹೆಚ್ಚು.

ಕೆಲವು ದೇವಾಲಯಗಳು ಹಳೆಯ ಮಾದರಿಯ ಸಭಾಮಂಟಪ, ಗರ್ಭಗೃಹ, ಪ್ರಾಂಗಣ ಮುಖಮಂಟಪವನ್ನು ಒಳಗೊಂಡಿದ್ದಾರೆ. ಇನ್ನೂ ಕೆಲವು ಕುರುಬ ಸಮುದಾಯದ ದೇವಾಲಯಗಳು ನಗಾರಿ ಕಾನೆಗೆ ಹೆಚ್ಚಿನ ಮೊತ್ತನ್ನು ಕೊಟ್ಟದ್ದು ಕಂಡು ಬರುತ್ತದೆ. ರಾಯಬಾಗದ ಹಲವು ಆಧುನಿಕ ದೇವಾಲಯಗಳು ತೀರ ಚಿಕ್ಕದಾದ ಆವರಣಗಳನ್ನು ಒಳಗೊಂಡಿದ್ದು ಅವುಗಳಲ್ಲಿ ಕೆಲವು ಗರ್ಭಗೃಹ, ಮತ್ತು ಚಿಕ್ಕದಾದ ಶಿಖರ ಒಳಗೊಂಡು ಎತ್ತರವಾದ ಕಟ್ಟೆಯ ಮೇಲೆ ನಿರ್ಮಿಸಿದ್ದಾರೆ. ಇನ್ನು ಕೆಲ ದೇವಾಲಯಗಳ ಶಿಖರವು ವಿವಿಧ ಶಿಲ್ಪ ಮೂರ್ತಿಯನ್ನು ಒಳಗೊಂಡು ರಚನೆಯಾಗಿವೆ.

ಒಟ್ಟಿನಲ್ಲಿ ರಾಯಬಾಗದ ಆಧುನಿಕ ಅಭಿಯಂತರರ ಶೈಲಿಯ ಈ ದೇವಾಲಯಗಳಲ್ಲಿ ಎರಡು ಪ್ರಮುಖವಾದ ಪ್ರಕಾರಗಳನ್ನು ಗುರುತಿಸುತ್ತೇವೆ.

೧)	ಕಟ್ಟಡದ ರಚನಾ ವಿನ್ಯಾಸ ಹಳೆಯ ಮಾದರಿಯನ್ನು ಒಳಗೊಂಡು ಆಧುನಿಕ ಸಿಮೆಂಟು ಕಲ್ಲುಗಳಿಂದ ರಚನೆಗೊಂಡಿವೆ.

೨)	ಕೇವಲ ಗರ್ಭಗೃಹದ ಶಿಖರವನ್ನೊಳಗೊಂಡ ಚಿಕ್ಕದೇವಾಲಯಗಳು ಕಂಡು ಬರುತ್ತವೆ.

ಹೀಗೆ ಆಧುನಿಕ ದೇವಾಲಯಗಳು ಈ ರಾಯಬಾಗದಲ್ಲಿ ಹಳೆಯ ಶೈಲಿಯ ರಚನೆ ಒಳಗೊಂಡಿದ್ದರೂ ಆಧುನಿಕ ಸ್ಪರ್ಶದ ರೂಪು ನೀಡಿ ರಚಿತವಾಗಿವೆ.

ಅಡಿ ಟಿಪ್ಪಣಿ

೧) *ಇತಿಹಾಸ ಪುಟಗಳಲ್ಲಿ ರಾಯಬಾಗ,* 'ಕಾಲಗತಿ' ತ್ರೈಮಾಸಿಕ ಪತ್ರಿಕೆ, (ಕಾಲಗತಿ ಪ್ರಕಾಶನ ರಾಯಬಾಗ. ೧೯೯೦) ಪುಟ ೫೯.

೨) 'ಅದೇ' ಪುಟ ಸಂಖ್ಯೆ ೬೦.

ಅಧ್ಯಾಯ – ೫

ರಾಯಬಾಗದ ದೇವಾಲಯಗಳು:ಆಚರಣೆ ಮತ್ತು ಸಂಪ್ರದಾಯ ಹಾಗೂ ನಂಬಿಕೆಗಳು

ರಾಯಬಾಗದ ದೇವಾಲಯಗಳು:ಆಚರಣೆ ಮತ್ತು ಸಂಪ್ರದಾಯ ಹಾಗೂ ನಂಬಿಕೆಗಳು

ಮಾನವ ತನ್ನ ಜೀವನದಲ್ಲಿ ಪ್ರತಿನಿತ್ಯವಾಗಿ ಒಂದಿಲ್ಲೊಂದು ಧಾರ್ಮಿಕ ವಿಧಿ-ವಿಧಾನಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಾನೆ. ಅವುಗಳು ತನ್ನ ಆತ್ಮ ಸಂತೃಪ್ತಿಯ ಸಾಕ್ಷಾತಕ್ಕಾರಕ್ಕಾಗಿ ಈ ಧಾರ್ಮಿಕ ನಂಬಿಕೆಗಳಿಗೆ ಜೋತು ಬಿದ್ದಿರುತ್ತಾನೆ. ಮಾನವ ತನ್ನ ಬಿಡುವಿನ ವೇಳೆಯಲ್ಲಿ ಕೆಲ ಸಮಯ ಇಂತಹ ಧಾರ್ಮಿಕ ಆಚರಣೆಯಲ್ಲಿ ಕಾಲಕಳೆಯುತ್ತಾನೆ. ಇದು ಮಾನವನ ಲೌಕಿಕ-ಅಲೌಕಿಕ ಜೀವನದ ಆಚರಣೆಯ ಹಿನ್ನೆಲೆಯಲ್ಲಿ ತನ್ನ ಸಂಸ್ಕಾರವನ್ನು ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಆತನಿಗೆ ಸಹಾಯಕವಾಗಿ ತನ್ನ ದೈವದ ಹೆಸರಿನಲ್ಲಿ ನಂಬಿಕೆಗಳನ್ನು ಪಡೆಯುತ್ತಾನೆ. ಅವುಗಳಲ್ಲಿ ಪ್ರಮುಖವಾಗಿ ಮಾನವ ತಾನು ಬಾಳಿ ಬದುಕಿದ ಕಾಲದಲ್ಲಿರುವ ಧಾರ್ಮಿಕ ಜೀವನ ವಿವಿಧ ಮುಖಗಳು ಮುಂದಿನ ಪೀಳಿಗೆ ರವಾನೆಯಾಗಿ ಕೆಲವು ಅರ್ಥವನ್ನು ಕಳೆದುಕೊಂಡ ಸಂಪ್ರದಾಯಗಳಾದ ಇನ್ನು ಕೆಲವು ಅರ್ಥಸಹಿತ ಆಚರಣೆಗಳಾಗಿವೆ.

ಮಾನವನಲ್ಲಿ ಈ ಧಾರ್ಮಿಕ ಜೀವನ ಪದ್ಧತಿಯ ಅನಾದಿ ಕಾಲದಿಂದಲೂ ಒಂದಿಲ್ಲ ಒಂದು ರೀತಿಯಲ್ಲಿ ತನ್ನ ಲಯವನ್ನು ಬದಲಿಸಿ ನಡೆದುಕೊಂಡು ಬಂದಿದೆ. ಅವುಗಳಲ್ಲಿ ಧಾರ್ಮಿಕ ನಂಬಿಕೆಗಳು, ಸೇವಾ ವಿಧಾನಗಳು, ಪೂಜೆ, ಜಪ-ತಪ, ಇವುಗಳ ಜೊತೆಗೆ ಜಾತ್ರೆ-ಹಬ್ಬ ಹರಿದಿನಗಳು, ಜೊತೆಗೆ ಜನಪದೀಯ ಆಚರಣೆಯ ಕಲೆಗಳು ಇಂದಿಗೂ ಸಹ ಜೀವಂತವಾಗಿ ದೊರೆಯುತ್ತವೆ. ಇವೆಲ್ಲ ಮಾನವ ತನ್ನ ವಂಶೋದ್ಧಾರಕ್ಕಾಗಿ ತನ್ನ ನಾಡಿನ ಹಿತದ ಸಲುವಾಗಿ, ತನ್ನ ನೆಚ್ಚಿನ ಅರಸ-ಅರಸಿ ಮುಂತಾದವರಿಗಾಗಿ ರೂಡಿಸಿಕೊಂಡು ಬಂದ ಸಂಪ್ರದಾಯಗಳಾಗಿವೆ. ಹೀಗೆ ಮಾನವ ತನ್ನ ದೈವದ ಮೇಲಿನ ಭಕ್ತಿ, ಭಯ, ನಂಬಿಕೆ, ನಿಷ್ಠೆ ಇವುಗಳು ಕಾಲಕ್ರಮೇಣ ಹೆಚ್ಚಾಗಲು ಅನಾದಿ ಕಾಲದಿಂದ ಸಮಕಾಲೀನವರೆ ಪ್ರಕೃತಿಯಲ್ಲಿ ದೇವರನ್ನು ಆರಾಧಿಸುತ್ತ ನಂತರ ಅದಕ್ಕೊಂದು ಆಲಯವನ್ನು ಕಟ್ಟಿ ದೇವಾಲಯ ನಿರ್ಮಾಣಕಾರನಾದ ಮುಂದೆ ತನ್ನ ವಂಶಕ್ಕೆ

ಒಳ್ಳೆಯದಾದಾಗ ಗುಡಿ ಗೋಪುರ ನಿರ್ಮಿಸಲಿಕ್ಕೆ ಪ್ರಾರಂಭಿಸಿದ ಬರಬರುತ್ತಾ ರಾಜರ ಆಳ್ವಿಕೆ ಬಂದಾಗ ಧರ್ಮ ಮತ್ತು ರಾಜಕೀಯ ಒಂದನ್ನೊಂದು ಪೋಷಿಸಿಕೊಂಡು ಹೋಗಲು ಪ್ರಾರಂಭವಾದವು. ಜನರ ಆಸಕ್ತಿಯನ್ನು ರಾಜನು ತಮ್ಮ ಕಡೆಗೆ ಅವರ ಗಮನವನ್ನು ಸೆಳೆಯಲು ಅವರ ದೈವಕ್ಕೊಂದು ದೇವಾಲಯ ನಿರ್ಮಿಸಲಿಕ್ಕೆ ಪ್ರಾರಂಭಿಸಿದರು. ಹೀಗೆ ದೇವಾಲಯಗಳು, ಸಂಪ್ರದಾಯಗಳು ತನ್ನದೇ ಆದ ರೂಪದಲ್ಲಿ ಇವತ್ತು ಬೆಳೆದು ನಮ್ಮುಂದೆ ನಿಂತಿವೆ. ಅವುಗಳ ಕಾರ್ಯ ಸಮಾಜದ ಉದ್ಧಾರವಾದುದರಿಂದ ಕೆಲವು ಮಠಮಾನ್ಯಗಳು ವಿದ್ಯಾಕೇಂದ್ರಗಳಾಗಿ ಮುಂದುವರೆದು ಜನರಲ್ಲಿ ಭಕ್ತಿಯ ನೆಲೆಗಳಾಗಿವೆ.

ದಾನ-ಧರ್ಮ ಕೇವಲ ವ್ಯಕ್ತಿಗತವಾಗಿರುತ್ತವೆ. ೧"ಆದರೆ, ದೇವಾಲಯಗಳಲ್ಲಿ ನಡೆಯುವ ಪೂಜೆ-ಪುನಸ್ಕಾರಗಳು ಒಂದು ಸಮಾಜದ ಸಂದರ್ಭದಲ್ಲಿ ಮುಖ್ಯವಾಗುತ್ತವೆ. ಅಲ್ಲಿ ನಡೆವ ಪೂಜಾ ವಿಧಿಗಳು ಇಡೀ ಸಮಾಜದ ಆಶೋತ್ತರಗಳನ್ನು, ಭಾವನೆಗಳನ್ನು ಪ್ರತಿನಿಧಿಸುತ್ತವೆ. ಎಲ್ಲ ಜನತೆಯ ವಿವಿಧ ರೀತಿಯ ಪ್ರಾಚೀನ-ಅರ್ವಾಚೀನ ಧಾರ್ಮಿಕ ನಂಬಿಕೆಗಳು ಅಭಿಪ್ರಾಯಗಳು ಮಡುಗಟ್ಟಿದ ಸನ್ನಿಧಿ-ದೇವಾಲಯಗಳು. ಹೀಗಾಗಿ, ಅಲ್ಲಿ ನಡೆಂಯೂವ ಪೂಜಾವಿಧಿ, ಆಚರಣೆಗಳು ಅಂತಹ ನಂಬಿಕೆಗಳ ಪ್ರತೀಕಗಳೇ ಆಗಿರುತ್ತವೆ. ಮೂರ್ತರೂಪದ ದೇವರು ಮತ್ತು ಭಕ್ತನ ನಡುವಿನ ಸಂಬಂಧವು ವಿವಿಧ ಕಾಲಗಳಲ್ಲಿ ವಿವಿಧ ರೀತಿಯಲ್ಲಿ ಸಾಮೂಹಿಕ ಆಚರಣಾ ರೂಪದಲ್ಲಿ ವ್ಯಕ್ತವಾಗಿದ್ದನ್ನು ಇಲ್ಲಿ ಕಾಣುತ್ತೇವೆ. ಹೀಗಾಗಿ, ದೇವಾಲಯಗಳಲ್ಲಿ ನಡೆವ ಪೂಜಾವಿಧಿ-ವಿಧಾನಗಳ ಅಧ್ಯಾಯನವು ಸಮಾಜದ ಒಂದು ವಿಶಿಷ್ಟ ಮುಖವನ್ನು ತೆರೆದಿಡುತ್ತದೆ."೧

ಮಾನವನಿಗೆ ಪೂಜೆ-ಪುನಸ್ಕಾರ ಆಚರಣೆಯ ಒಂದು ಅನನ್ಯತೆಯ ಶಕ್ತಿಯ ಆರಾಧನೆಯಾಗಿತ್ತು. ಅದು ಉತ್ಸವವಾಗಿ, ಜಾತ್ರೆಯಾಗಿ ಬದಲಾವಣೆ ಪಡೆದುಕೊಂಡಿತು. ಹೀಗಾಗಿ ಮಾನವ ಆ ಆಚರಣೆಯ ಭಾಗವಾಗಿ ವ್ರತಾಚರಣೆ ವಿಧಿಕ್ರಿಯೆ, ಉತ್ಸವ, ನೃತ್ಯ, ಹಾಡು, ಸ್ತುತಿ, ಹರಕೆ ಮುಂತಾದವುಗಳು ನಿಸರ್ಗದ ಭಾಗವಾಗಿ ಮುಂದುವರೆದು ಬೆಳೆದು ಬಂದವು. ಮುಂದೆ ಸಂಪ್ರದಾಯದ ಆಚರಣೆಯ ಪ್ರಬಲವಾದ ಅಂಶಗಳಾದವು.

ವ್ಯಕ್ತಿ ತಾನು ಮರಣಹೊಂದಿದ ಮೇಲೆ ತನ್ನ ಆತ್ಮನಾಶವಾಗುವುದಿಲ್ಲ. ಅದು ಅವಿನಾಶಿಯಾದುದು. ಇದು ಅಲೌಕಿಕ ಬದುಕಿನ ನಂಬುಗೆಯಲ್ಲಿ ಸ್ಥಾನಪಡೆದಾಗ ಮನುಷ್ಯನಿಗೆ ಏಳು-ಜನ್ಮದ ವೃಂತ್ತಾತದಲ್ಲಿ ಭಾಗಿಯಾಗುತ್ತಾನೆ. ತಾನು ಮಾಡಿದ ಪುಣ್ಯ-ಪಾಪ ಆ ಜನ್ಮದಲ್ಲಿ ತನ್ನ ಬೆನ್ನಿಗೆ ಇರುತ್ತವೆ. ಇದು ದೈವಿ ಸ್ವರೂಪವನ್ನು ನಂಬಿರುವ ಜನರ ಆಶೆಯ ಇವತ್ತಿಗೂ ಸಹ

ನಾವು ಕಾಣುತ್ತೇವೆ. ಹೀಗಾಗಿ ಅಲೌಕಿಕ ಜೀವನವು ಮನುಷ್ಯನಲ್ಲಿ ಇಂತಹ ಆಚರಣೆ ಪುಷ್ಠಿ ನೀಡುವ ನಂಬುಗೆಯ ಆಚರಣೆಯಾಗುತ್ತದೆ.

[೨]"ಹಬ್ಬ-ಜಾತ್ರೆಗಳು ಸಾಮಾನ್ಯವಾಗಿ ನಂಬಿಕೆಯ ಆಧಾರದ ಮೇಲೆ ನೆಲೆಗೊಂಡ ಸಾಂಪ್ರದಾಯಿಕ ಆಚರಣೆಗಳು. ಇವೆಲ್ಲ ಬಹುಬೇಗನೆ ಹುಟ್ಟು ಪಡೆಯದೆ ಮನುಷ್ಯನ ಭೌಗೋಳಿಕ ಸಾಮಾಜಿಕ ಹಿನ್ನೆಲೆಯಲ್ಲಿ ನೆಲೆಗೊಂಡ ಜಾನಪದ ಸಂಪ್ರದಾಯಗಳು. ಈ ಜನಪದ ಸಂಸ್ಕೃತಿ ಬದಲಾಗುತ್ತಿರುವ ಸಾಮಾಜಿಕ ಹಿನ್ನೆಲೆಯಲ್ಲಿ ಕಾಲ ಸಂದರ್ಭಗಳಿಗೆ ಅನುಗುಣವಾಗಿ ಅರ್ಥಪೂರ್ಣ ಹಿನ್ನೆಲೆಯನ್ನು ಪಡೆದುಕೊಂಡಿರುತ್ತದೆ."[೨] ಜನಪದರಲ್ಲಿ ಧಾರ್ಮಿಕ ಆಚರಣೆಗಳು ನೂರಾರು ನಮಗೆ ಲಭಿಸುತ್ತವೆ. ಕೆಲವನ್ನು ಈ ರೀತಿಯಲ್ಲಿ ಕಲೆಹಾಕಲಾಗಿದೆ.

ಜಾನಪದ ಧಾರ್ಮಿಕ ಆಚರಣೆಯ ಸಂಪ್ರದಾಯದಲ್ಲಿ ಮನುಷ್ಯ ಹತ್ತು ಹಲವು ನಂಬಿಕೆಯನ್ನಿಟ್ಟುಕೊಂಡವನು. ಅವುಗಳಲ್ಲಿ ಪ್ರಮುಖವಾಗಿ ದೇವರಿಗೆ ತಲೆಗೂದಲನ್ನು ಅರ್ಪಿಸುವದು. ಕಿರು ಬೆರಳನ್ನು ಕತ್ತರಿಸಿ ಕೊಡುವದು, ಎದೆಯ ಮೇಲೆ ಅಥವಾ ಕೈಯ ಮೇಲೆ ದೇವರ ನಾವು ಅಥವಾ ಭಾವ ಚಿತ್ರವನ್ನು ಹಣಚಿಕಲೆಯಿಂದ ತಗೆಸಿಕೊಳ್ಳುವುದು ಪ್ರಮುಖವಾದ ಭಕ್ತಿಯ ಪರಾಕಾಷ್ಠೆಯ ಧಾರ್ಮಿಕ ಸಂಪ್ರದಾಯದ ನಂಬಿಕೆಗಳಾಗಿವೆ. ಕೆಲವು ಒಂದುಷ್ಟು ಬದಲಾವಣೆ ಪಡೆದುಕೊಂಡು ಇಂದಿಗೂ ಸಹ ಮುಂದುವರೆದು ಬಂದಿವೆ. ಉದಾ: ತಲೆಗೂದಲನ್ನು ಅರ್ಪಿಸುವ ಸಂಪ್ರದಾಯ ಕಾರ್ಯ ತಿರುಪತಿ ಹಾಗೂ ಎಡೆಯಾರು ಕ್ಷೇತ್ರದಲ್ಲಿ ಜರಗುತ್ತಲಿದೆ.

[೩]"ಬೆರಳನ್ನು ಕತ್ತರಿಸಿ ದೇವರಿಗೆ ಅರ್ಪಿಸುವ ಕ್ರಿಯೆ ನಮ್ಮ ನಾಡಿನಲ್ಲಿ ಹಿಂದೆ ರೂಢಿಯಲ್ಲಿತ್ತು. ನೃಪತುಂಗನು ಸೊಲ್ಲಾಪೂರ ಮಹಾಲಕ್ಷ್ಮಿಗೆ ಬೆರಳು ಕತ್ತರಿಸಿಕೊಟ್ಟನೆಂಬ ಹೇಳಿಕೆ ಸುಪ್ರಸಿದ್ಧವಾಗಿದೆ. ಬಳ್ಳಿಗಾವಿ ಶಾಸನದಲ್ಲಿ ಬರುವ ತುಳುವ ಚಂಡಿಗನೆಂಬವನು 'ಬೆರಳ್ಗೆ ವೇಳೆಗೂಂಡನ್' ಎಂಬ ಉಲ್ಲೇಖವೂ ಇಂತಹ ಆಚರಣೆಯನ್ನೇ ಸೂಚಿಸುತ್ತಿದೆ"[೩] ಎದೆಯ ಮೇಲೆ ದೇವರ ಹೆಸರಿನ ಹಚ್ಚೆಯನ್ನು ಹಾಕಿಸುವುದು ಹೆಚ್ಚಾಗಿ ದೇವರ ಹೆಸರಿನ ಸೇವಕರು. ಜೊತೆಗೆ ದೇವರ ಮೇಲೆ ಪ್ರೀತಿಯಿಂದ ಕೈಮೇಲೆ ಭಾವಚಿತ್ರ ಮತ್ತು ಹೆಸರನ್ನು ಹಾಕಿಸುವುದು ಈಗಲೂ ಸಹ ಕಂಡು ಬರುತ್ತದೆ. ಇಂತಹ ಅನೇಕ ಜಾನಪದ ಆಚರಣೆಯ ಸಂಪ್ರದಾಯ ಹಾಗೂ ನಂಬಿಕೆಗಳು ರಾಯಬಾಗದ ದೇವಾಲಯಗಳಲ್ಲಿ ನಡೆದಿರುತ್ತವೆ. ಅವುಗಳನ್ನು ಈ ರೀತಿಯಲ್ಲಿ ಕಲೆಹಾಕಲಾಗಿದೆ.

೧. ಹಾಲುಮತ ದೈವಗಳ ಆಚರಣೆ ಸಂಪ್ರದಾಯ ಮತ್ತು ನಂಬಿಕೆಗಳು :

ರಾಯಬಾಗದ ತಾಲ್ಲೂಕ ಹೆಚ್ಚಾಗಿ ಹಾಲುಮತ ಸಮುದಾಯದವರು ನೆಲೆಸಿರುವ ಪ್ರಮುಖ ನೆಲೆಯಾಗಿದೆ. ಹೀಗಾಗಿ ಇಲ್ಲಿ ಹಾಲುಮತ ಸಮುದಾಯದ ದೈವೀ ಆಚರಣೆಗಳು ಕಂಡು

ಬರುತ್ತವೆ. ಅವುಗಳಲ್ಲಿ ರಾಯಬಾಗ ಗ್ರಾಮದಲ್ಲಿ ಎರಡು ಬೀರಪ್ಪನ ದೇವಸ್ಥಾನ ಹಾಗೂ ಊರ ಹೊರಗಡೆ ಇರುವ ಎಡಿ ಮಾಯಕ್ಕನ ದೇವಸ್ಥಾನ ತನ್ನದೇ ಆದ ಆಚರಣೆಯ ಪ್ರಮುಖ ಕೇಂದ್ರವಾಗಿವೆ. ಅವುಗಳಲ್ಲಿ ನಡೆಯವು ಕ್ರಿಯೆಗಳನ್ನು ಈ ರೀತಿಯಲ್ಲಿ ವಿಶ್ಲೇಷಿಸಲಾಗಿದೆ.

೧. ಕಂಬಳಿಯನ್ನು ಸಿದ್ಧಪಡಿಸುವುದು

೨. ಅಲಗ ಹಾಯುವುದು

೩. ಭಂಡಾರದ ಆಚರಣೆ

೪. ಡೊಳ್ಳುವಾದ್ಯ ಬಾರಿಸುವ ಕಲೆ

೫. ಡೊಳ್ಳುಕುಣಿತ

೬. ಹಾಲಗಂಭ ನೆಡುವ ಆಚರಣೆ

೭. ಕರಿಕಟ್ಟುವುದು ಮತ್ತು ಕರೀಹರಿಯುವುದು

೮. ಕವಲ ಹಚ್ಚುವುದು

೯. ಪಲ್ಲಕ್ಕಿ ಉತ್ಸವ

೧. ಕಂಬಳಿ ಸಿದ್ಧಪಡಿಸುವುದು :

ರಾಯಬಾಗದಲ್ಲಿ ಕುರಬ ಸಮೂದಾಯದವರು ತಮ್ಮ ದೈವದ ನಂಬಿಕೆಯಿಂದ ಕುರಿಗಳ ಉಣ್ಣೆಯಿಂದ ವಿವಿಧ ಪ್ರಕಾರದ ಕಂಬಳಿಯನ್ನು ಸಿದ್ಧಪಡಿಸುತ್ತಿದ್ದರು. ಈಗ ಕೆಲ ವರ್ಷಗಳಿಂದ ಈ ಕಂಬಳಿ ಸಿದ್ಧ ಪಡಿಸುವಿಕೆ ನಿಂತು ಹೋಗಿದ್ದು ಕಂಡು ಬರುತ್ತದೆ. ಕಂಬಳಿ ಪ್ರತಿಯೊಂದು ಪೂಜಾ ಕಾರ್ಯಕ್ರಮದಲ್ಲಿ ತನ್ನ ಪಾವಿತ್ರತೆಯನ್ನು ಉಳಿಸಿಕೊಂಡು ಬಂದಿದೆ. ಕಂಬಳಿಗೆ ಪುರಾಣದಲ್ಲಿ ಮಹತ್ವಪೂರ್ಣವಾದ ಸ್ಥಾನವಿದೆ. ಕುರಬರು ತಾವು ಮಾಡಿದ ಕಂಬಳಿಯನ್ನು ಇಂತಹ ದೇವರಿಗೆ ಹರಕೆ ರೂಪವಾಗಿ ಅರ್ಪಿಸುತ್ತಾರೆ. ಈ ಕಂಬಳಿಯ ಮಹತ್ವವನ್ನು ಕುರಿತು ಟಿ.ಎಸ್. ವಂಟಗೂಡಿ ಅವರು ಈ ರೀತಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

[೪]"ಕಂಬಳಿ ಜೀವಂತ ಪೀಠ, ಹುಲಿ, ಜಿಂಕೆ ಚರ್ಮಗಳ ಪೀಠ ಸತ್ತ ಪೀಠ. ಸತ್ಯಸಂದ ಶಾಂತಿ ಪ್ರಾಣಿಯಾದ ಕುರಿಯು ಜೀವಂತ ಇರುವಾಗಲೇ ಅದರಿಂದ ಉಣ್ಣೆ ಪಡೆದು ಕಂಬಳಿ ತಯಾರಿಸುವುದರಿಂದ ಇದು ಜೀವಂತ ಪೀಠವಾಗುವುದು. ಹಿಂಸಾ ಪ್ರಾಣಿಯಾದ ಹುಲಿಯ ಮರಣದ ನಂತರ ಅದರ ಚರ್ಮ ಸಲುಯುವುದರಿಂದ ಅದು ಸತ್ತ ಪೀಠವಾಗುವುದು. ಹಾಗಂತಲೇ ಕಂಬಳಿ ಪೀಠಕ್ಕೆ ಮಹತ್ವವಿರುವುದು. ಎಲ್ಲ ಶುಭ ಕಾರ್ಯಗಳು ಕಂಬಳಿ ಪೀಠದ ಮೇಲೆಯೇ ಜರುಗುವವು."[೪] ಹೀಗೆ ಕುರಬರ ಪ್ರತಿಯೊಂದು ಕಾರ್ಯಚಟುವಟಿಕೆಯಲ್ಲಿ ಈ ಕಂಬಳಿ ಹಾಸೂಹೊಕ್ಕಾಗಿದೆ. ಕಂಬಳಿಯಲ್ಲಿ ಹಲವು ಪ್ರಕಾರಗಳು. ಕರಿಕಂಬಳಿ, ಬಿಳಿಕಂಬಳಿ,

ರತ್ನಗಂಬಳಿ, ಜಿಣುಗುಕಂಬಳಿ ಮುಂತಾದವು. ಇವೆಲ್ಲ ಕಂಬಳಿಯು ಬೀರಪ್ಪ ಜಾತ್ರೆ ಹಾಗೂ ಎಡೆಮಾಯಕ್ಕನ ಜಾತ್ರೆಯಲ್ಲಿ ಗದ್ದಿಗೆಯ ಮೇಲೆ ಇಟ್ಟು ಅವುಗಳ ಮೇಲೆ ದೇವರನ್ನು ಇಡುತ್ತಾರೆ. ಜೊತೆಗೆ ಕುರುಬರ ಮದುವೆ ಮುಂತಾದ ಕಾರ್ಯಕ್ರಮದಲ್ಲಿ ಈ ಕಂಬಳಿಯನ್ನು ಪವಿತ್ರವೆಂದು ತಿಳಿದು ಉಪಯೋಗಿಸುತ್ತಾರೆ. ಹಿಂದೆ ಈ ಭಾಗದಲ್ಲಿ ಕಂಬಳಿಯನ್ನು ತಯಾರಿಸುವ ಕೈಮಗ್ಗಳು ಇದ್ದವು. ಆದರೆ ಇವತ್ತು ಅವು ತನ್ನ ಕೆಲಸವನ್ನು ನಿಲ್ಲಿಸಿವೆ. ಈ ಕಂಬಳಿಯ ಮಹತ್ವವನ್ನು ಕಬ್ಬೂರಿನ ಶಿವಲಿಂಗ ಕುಂಬಾರ ಎಂಬ ಕವಿ ಡೊಳ್ಳು ಹಾಡುನ್ನು ರಚಿಸಿದ್ದಾನೆ. ಅದು ಈ ರೀತಿಯಲ್ಲಿದೆ.

"ಕಂಬಳಿ ಕೊಂಡಿಹೆನೋ ನಾನೊಂದು !
ಕಂಬಳಿ ಕೊಂಡಿಹೆನೋ
ಕರಿಯ ಉಣ್ಣೆಯ ಕರಿಯ ಕಂಬಳಿ !
ಬಿಳಿಯ ಉಣ್ಣೆಯ ಬಿಳಿಯ ಕಂಬಳಿ!
ಕರಿ–ನೆರೆ ಬಣ್ಣದ ಕರಿ–ನೆರೆ ಕಂಬಳಿ॥
ಮದ್ರಾಸ ಕಡೆಯ ಜಿಣುಗು ಕಂಬಳಿ !
ಕುರುಬನು ಹೊರುವ ಉರುಟು ಕಂಬಳಿ !
ದೇವರ ಗದ್ದುಗೆ ಮಾಡುವ ಕಂಬಳಿ ॥
ಚಳಿ–ಮಳಿಯಲ್ಲಿ ಹೊರಬರುವ ಕಂಬಳಿ !
ಕಾಳು–ಕಡಿಗಳನ್ನು ಹಾಕುವ ಕಂಬಳಿ
ನೆಲದ ಮೇಲೆ ಹಾಸುವ ಕಂಬಳಿ ॥
ಕಣ್ಣು–ಕಣ್ಣಿನ ಹಂಡ ಬಂಡ ಕಂಬಳಿ
ಅಮೃತಸರದಲ್ಲಿ ಹುಟ್ಟಿದ ಕಂಬಳಿ
ರಾಜರು ಹೊದೆಯುವ ರತ್ನ ಕಂಬಳಿ
ಬಡವರ ಬಾಳನು ನೂಕುವ ಕಂಬಳಿ !
ಹಳೆಯದಾದರೂ ದುಡಿಯುವ ಕಂಬಳಿ
ಮಡಿಯ ಮೈಲಿಗೆ ಇಲ್ಲದ ಕಂಬಳಿ ॥
ಬಾಗಲಕೋಟೆಯ ಬೆಲೆಯ ಕಂಬಳಿ !
ಕಡಪಟ್ಟಿಯ ತಾಳಿಕೆ ಕಂಬಳಿ
ನೆಹರುಗ ಜಾಕಿಟ ಆದ ಕಂಬಳಿ ॥

ಗುರುವಿನ ಗದ್ದುಗೆಗೆ ಮೀಸಲಾದ ಕಂಬಳಿ

ರೈತನು ರಾಶಿ ಮಾಡುವ ಕಂಬಳಿ

ಯೋಗಿ ಒಡೆಯಗೆ ಸಲ್ಲುವ ಕಂಬಳಿ"[೫] ಎಂಬ ಹಾಡು ಇಡೀ ಕಂಬಳಿಯ ಮಹತ್ವವನ್ನು ಅರ್ಥಪೂರ್ಣವಾಗಿ ಚಿತ್ರಿಸುತ್ತದೆ.

೨. ಅಲಗ ಹಾಯುವುದು :

ಅಲಗ ಅಂದರೆ ಖಡ್ಗ. ಇದಕ್ಕೆ ಗ್ರಾಮ್ಯ ಭಾಷೆಯಲ್ಲಿ ಹತಾರ ಅನ್ನುತ್ತಾರೆ. ಹತಿಯಾರ ಹತಾರ ಎಂಬ ಉಚ್ಚಾರಣೆಯಾಗಿರಬೇಕು. ಕುರಬ ಸಮುದಾಯದ ದೇವರ ಹೆಸರಿನಲ್ಲಿ ಇಂತಹ ಆಚರಣೆಗಳು ಜಾತ್ರೆಯ ವಿಶೇಷ ಸಂದರ್ಭದಲ್ಲಿ ಜರಗುತ್ತವೆ. ಅಲಗ ಹಾಯುವರು ಆ ದೇವಸ್ಥಾನದ ಪೂಜಾರಿ. ಆತ ಅಲಗ ಹಾಯುವ ಪೂರ್ವದಲ್ಲಿ ಒಂದು ತಿಂಗಳಿಂದ ಉಪವಾಸವಿದ್ದು. ದೇವರ ಜಾತ್ರೆಯ ದಿನ ಮೈದುಂಬಿ ಅಲಗದಿಂದ ತನ್ನ ಹೊಟ್ಟೆಗೆ ಹೊಡೆದುಕೊಳ್ಳುತ್ತಾನೆ. ಹೀಗೆ ಮೂರುಸಾರಿ ಅಲಗದಿಂದ ಹೊಡೆದುಕೊಂಡ ಮೇಲೆ ಕೆಲವು ಕಡೆ ದೈವಿ ಹೇಳಿಕೆಗಳು ಬರುತ್ತವೆ. ಆ ದೇವರು ಪೂಜಾರಿಯ ಮೈಮೇಲೆ ಬಂದು ಆತನಿಂದ ವಾಣಿಯಾಗುತ್ತದೆ. ಜನರು ಭಯ ಭಕ್ತಿಯಿಂದ ಆ ವಾಣಿಯನ್ನು ಆಲಿಸುತ್ತಾರೆ.

"ಎಲೇ ಮಕ್ಕಳಿರಾ ! ಏಳು ಸಮುದ್ರ ದಾಟಿ ಬಂದಿನಿ. ಈಗ ತುರ್ತು ರೋಹಣಿ, ಮಿರ್ಗಾ, ಪುಷ್ಪಾ ಮಳಿ ಬರ್ತೆತಿ ಕೂರಿಗೆ ಕುಂಟೆಸಾಗ ಮಾಡಿರಲೆ, ಆಶ್ಲೇಶಾ ಮಳೆಗೆ ರೈತನ ಕಣ್ಣು ಮ್ಯಾಲ್ ಹೋಗಬಾರದು. ತಗ್ಗಿ ಬಗ್ಗಿ ನಡೀಹಿರಲೇs ಹಾಕರಲೇss ಡೊಳ್ಳು"[೬] ಎಂಬ ಮಾತುಗಳು ಇಡೀ ವರ್ಷದ ಭವಿಷ್ಯವಾಗಿರುತ್ತದೆ. ಅಲಗಿನ ಆಟಕ್ಕೆ ಈ ಪ್ರದೇಶದಲ್ಲಿ ಎಲ್ಲಿಲ್ಲದ ಮಹತ್ವವಿದೆ. ಅಲಗ ಹಾಯುವುದನ್ನು ನೋಡಿದರೆ ಮೈ ರೋಮಾಂಚನವಾಗುತ್ತದೆ. ಕೈಯಲ್ಲಿಯ ಕತ್ತಿ ಹರಿತವಾಗಿರುತ್ತದೆ. ಡೊಳ್ಳಿನ ನಾದಕ್ಕೆ ಅಲಗವನ್ನು ಪೂಜಾರಿಯ ಜೋರಾಗಿ ತನ್ನ ಹೊಟ್ಟೆಗೆ ಬಡಿದುಕೊಳ್ಳುತ್ತಾನೆ. ಇದು ಬೀರಪ್ಪನ ವರವಿದ್ದವರಿಗೆ ಮಾತ್ರ ಸಾಧ್ಯವೆಂದು ಹೇಳುತ್ತಾರೆ. ಪ್ರತಿಸಾರಿ ಕತ್ತಿಯಿಂದ ಹೊಡೆದುಕೊಂಡಾಗ ಭಂಡಾರ ಎರಚುತ್ತಾರೆ. ಹೀಗೆ ಈ ಆಚರಣೆಯೂ ಬಲಿಷ್ಟವಾಗಿ ಈ ಪ್ರದೇಶದಲ್ಲಿ ಬೆಳೆದು ಬಂದಿದೆ.

೩. ಭಂಡಾರದ ಆಚರಣೆ :

ಕುರಬರು ತಮ್ಮ ದೈವದ ಹೆಸರಿನಲ್ಲಿ ಭಂಡಾರವನ್ನು ಹಣೆಯ ಮೇಲೆ ಹಚ್ಚಿಕೊಳ್ಳುವ ಸಂಪ್ರದಾಯ ಬೆಳೆದು ಬಂದಿದೆ. ಈ ಭಾಗದಲ್ಲಿ ಹಲವು ಹಾಲುಮತ ದೈವಗಳು ಇರುವುದರಿಂದ ಪ್ರತಿದಿನ ಕುರುಬರು ದೇವರಿಗೆ ನಮಸ್ಕರಿಸಿ ಈ ಭಂಡಾರವನ್ನು ಹಣೆಗೆ ಲೇಪಿಸಿಕೊಳ್ಳುತ್ತಾರೆ.

ವೈಜ್ಞಾನಿಕವಾಗಿ ನೋಡಿದರೆ ಭಂಡಾರದಲ್ಲಿ ಔಷಧಿಯ ಗುಣವಿದೆ. ಇದನ್ನು ಅರಿಷಿಣದಿಂದ ತಯಾರಿಸುತ್ತಾರೆ. ಭಂಡಾರ ಸಂಸ್ಕೃತಿಯ ಅತೀ ಪ್ರಾಚೀನವಾದುದು. ಇದು ವಿಭೂತಿ ಸಂಸ್ಕೃತಿಕಗಿಂತಲೂ ಮೊದಲು ಕಂಡು ಬರುತ್ತದೆ.

ಕುರುಬರ ಸಮುದಾಯದ ಪೂಜಾರಿಗಳು (ವಡೇಯರ) ದೇವರ ಹೆಸರಿನಲ್ಲಿ ಈ ಪ್ರಸಾದ ರೂಪದಲ್ಲಿ ಈ ಭಂಡಾರವನ್ನು ಕೊಡುತ್ತಾರೆ. ಭಂಡಾರಕ್ಕೆ ಪುರಾಣ ಕಾವ್ಯಯದಲ್ಲಿ ವಿಶಿಷ್ಟ ಮಹತ್ವವಿದೆ. ಇದು ಕ್ಷುದ್ರ ದೇವತೆಗಳ ಅಂಗಾರವಾಗಿದೆ. ಶಕ್ತಿ ದೇವತೆಗಳಾದ ಯಲ್ಲವ್ವ, ಮಾಯವ್ವಾ, ಉದ್ದಮ್ಮ ಹಾಗೂ ಬೀರಪ್ಪ ಮುಂತಾದವರ ಜಾತ್ರೆ ಉತ್ಸವದಲ್ಲಿ ಭಂಡಾರ ಹಾರಿಸುವ ವಾಡಿಕೆ ತೀವ್ರವಾಗಿ ಇಲ್ಲಿ ಕಂಡು ಬರುತ್ತದೆ. ಕುರುಬರು ಭಂಡಾರಕ್ಕೆ ದೈವಾರಾಧನೆಯಿಂದ ಮಹತ್ವ ಪಡೆದಿದೆ. ಡೊಳ್ಳು ಬಾರಿಸುವಾಗ ಅವರ ಮೇಲೆ ಎರಚುತ್ತಾರೆ. ಬೇಡಿಕೊಂಡವರು ದೇವರಿಗೆ ಚೀಲಗಂಟಲೇ ಭಂಡಾರವನ್ನು ಕೊಡುತ್ತಾರೆ. ಇದೆಲ್ಲವನ್ನು ಗಮನಿಸಿದಾಗಿ ಕುರಬರು ಭಂಡಾರ ಪ್ರಿಯರು ಎಂದು ತಿಳಿದುಬರುತ್ತದೆ. ಹೀಗೆ ಈ ಭಂಡಾರ ಸಂಪ್ರದಾಯವು ಇಲ್ಲಿ ಪ್ರಬಲವಾಗಿ ಬೆಳೆದು ಬಂದಿದೆ.

೪. ಡೊಳ್ಳುವಾದ್ಯ ಬಾರಿಸುವ ಕಲೆ ಅಥವಾ ಡೊಳ್ಳು ಕುಣಿತ :

ಡೊಳ್ಳುವಾದ್ಯ ಕುರಿತು ಹಲವು ಪುರಾಣದಲ್ಲಿ ಉಲ್ಲೇಖ ಲಭಿಸುತ್ತದೆ. ಡೊಳ್ಳುಸುರನೆಂಬ ರಾಕ್ಷಸನಿಂದ ಈ ವಾದ್ಯ ಡೊಳ್ಳು ಎಂಬ ಹೆಸರು ಬಂದಿದ್ದು ತಿಳಿದು ಬರುತ್ತದೆ. ಡೊಳ್ಳು ಕರ್ನಾಟಕದ ಬಹುಮುಖ್ಯ ಚರ್ಮವಾದ್ಯದಲ್ಲಿ ಒಂದಾಗಿದೆ. ಡೊಳ್ಳು ಅಷ್ಟ ಒಲಗದಲ್ಲಿ ಶ್ರೇಷ್ಠವಾದದೆಂದು ಹೇಳುತ್ತಾರೆ.

ಕುರಬರ ತಮ್ಮ ಆಚರಣೆಯಲ್ಲಿ ಡೊಳ್ಳಿನ ಮೂಲಕ ಪ್ರಾರಂಭಿಸುತ್ತಾರೆ. ಡೊಳ್ಳು ಬಾರಿಸುವುದರೊಂದಿಗೆ ದೇವರನ್ನು ಒಲಿಸಿಕೊಳ್ಳಲು ಡೊಳ್ಳ ಕುಣಿತವನ್ನು ಮಾಡುತ್ತಾರೆ. ಡೊಳ್ಳಿನ ಮೇಳವನ್ನು ಸಾಮಾನ್ಯವಾಗಿ 'ವಾಲಗ' ಎಂದು ಕರೆಯುತ್ತಾರೆ. ಈ ಡೊಳ್ಳಿನ ಮೇಳದಲ್ಲಿ ಹತ್ತು ಜನರಿಂದ ಕೂಡಿರುತ್ತದೆ. ಈ ಡೊಳ್ಳಿನ ಜೋತೆಗೆ ಜೋಡು ಕಂಚಿನ ತಾಳದವನು ತಾಳನ್ನು ಲಯವಾಗಿ ಬಾರಿಸುತ್ತಾನೆ. ಆ ತಾಳಕ್ಕೆ ತಕ್ಕಂತೆ ಡೊಳ್ಳುಗಾರರು ನೃತ್ಯಮಾಡುತ್ತಾ ಮೀರಾವೇಶದಿಂದ ಜೋರಾಗಿ ಡೊಳ್ಳನ್ನು ಬಾರಿಸುತ್ತಾರೆ.

ಜಾತ್ರೆ ಸಂದಂರ್ಭದಲ್ಲಿ ಪೂರ್ತಿ ಒಂದು ದಿನ ಈ ವಾದ್ಯವನ್ನು ನುಡಿಸುತ್ತಾರೆ. ಜೋತೆಗೆ ಅಕ್ಕಪಕ್ಕದ ಊರವರಿಂದಲೂ ಸಹ ಕಲಾವಿದರು ಆಗಮಿಸುತ್ತಾರೆ. ಡೊಳ್ಳು ಬಾರಿಸುವಾಗ ಹೆಜ್ಜೆಯನ್ನು ಲಯಬದ್ಧವಾಗಿ ಹಾಕುತ್ತಾರೆ. ಡೊಳ್ಳಿ ಮೇಲೊಂದು ಡೊಳ್ಳನ್ನು ಇಟ್ಟು ಬಾರಿಸುತ್ತಾರೆ. ಕೆಲವು ಸಲ ಮಕ್ಕಳನ್ನು ಡೊಳ್ಳುಗಳ ಮೇಲೆ ನಿಲ್ಲಿಸುತ್ತಾರೆ. ಹೀಗೆ ಹಲವು ವಿಧದಲ್ಲಿ ಈ ಡೊಳ್ಳು

ಮೇಲೆ ಇಡೀ ದಿನ ದೇವರ ಸಾನಿಧ್ಯದಲ್ಲಿ ತಮ್ಮ ಸೇವೆಯನ್ನು ಮಾಡುತ್ತಾರೆ. ರಾಯಬಾಗದ ಬೀರಪ್ಪ ದೇವರ ಜಾತ್ರೆಯಲ್ಲಿ ಈ ಡೊಳ್ಳಿನ ಕಲೆ ಅದ್ಭುತವಾಗಿ ಕಂಡು ಬರುತ್ತದೆ.

ಡೊಳ್ಳಿನ ಹಾಡು ಹಾಡುವ ಸಂಪ್ರದಾಯ :

ಡೊಳ್ಳಿನ ಹಾಡು ಹಾಡುವ ಸಂಪ್ರದಾಯಕ್ಕೂ ಮತ್ತು ಡೊಳ್ಳು ಬಾರಿಸುವ ಸಂಪ್ರದಾಯಕ್ಕೆ ಭಿನ್ನವಾಗಿವೆ. ಇಲ್ಲಿ ಡೊಳ್ಳುವಾದ್ಯದಲ್ಲಿ ಚಿಕ್ಕದಾದ ಡೊಳ್ಳು ಅದಕ್ಕೆ ದಿಮ್ಮ ಎಂದು ಕರೆಯುತ್ತಾರೆ. ಆ ದಿಮ್ಮದ ಮೂಲಕ ಇಬ್ಬರು ತಾಳನ್ನು ಹಿಡಿದುಕೊಂಡು ಮುಂಮೇಳದವನು ಹಾಡುತ್ತಾನೆ. ಹಿಮ್ಮೇಳದವರು ಅದಕ್ಕೆ ಧ್ವನಿಗೂಡಿಸುತ್ತಾರೆ. ಈ ರಾಯಬಾಗದಲ್ಲಿ ಡೊಳ್ಳು ಹಾಡಿನ ಸ್ಪರ್ಧೆಯ ಜಾತ್ರೆಯ ಸಂದರ್ಭದಲ್ಲಿ ಜರುಗುತ್ತದೆ. ಎರಡು ಡೊಳ್ಳು ಹಾಡಿನ ತಂಡವನ್ನು ಆಹ್ವಾನಿಸುತ್ತಾರೆ. ಒಬ್ಬರು ಪರದೇಶಿಯಾದರೆ ಮತ್ತೊಬ್ಬರು ನಾಗೇಶಿ ಹಾಡನ್ನು ಹಾಡುತ್ತಾರೆ. ಅಂದರೆ ಹೆಣ್ಣು-ಗಂಡು ಎಂಬ ಎರಡು ತಂಡಗಳು ಇಲ್ಲಿ ಭಾಗವಹಿಸುತ್ತವೆ. ಅವುಗಳಲ್ಲಿ ಪುರಾಣದಲ್ಲಿ ಹೆಣ್ಣು ಹೆಚ್ಚು ಅಥವಾ ಗಂಡು ಹೆಚ್ಚು ಎಂಬ ಜಿದ್ದು ಬಿದ್ದು ಇವುಗಳಲ್ಲಿ ಯಾರು ನಿರೂಪಿಸುತ್ತಾರೋ ಅವರಿಗ ಬಹುಮಾನವನ್ನು ಕೊಡುತ್ತಾರೆ. ಇದು ಜಾತ್ರೆಯ ರಾತ್ರಿಯ ವೇಳೆಯಲ್ಲಿ ಜರುಗುತ್ತದೆ. ಹೆಚ್ಚಾಗಿ ಬೀರದೇವರ ಗುಡಿಯ ಮುಂದೆ ಜಾತ್ರೆಯಲ್ಲಿ ಇಂತಹ ಹಾಡುಗಳ ಸ್ಪರ್ಧೆ ಜರುಗುತ್ತದೆ.

ಡೊಳ್ಳಿನ ಹಾಡಿನಲ್ಲಿ ಎರಡು ರೀತಿಯನ್ನು ಗುರುತಿಸಲಾಗಿದೆ. ಒಂದು ಸಂಪ್ರದಾಯಕ ಹಾಡುಗಳು ಇವು ಕಥಾ ದೃಷ್ಟಿಯ ನಿರೂಪಣೆಯಿಂದ ಕೂಡಿರುತ್ತದೆ. ತಮ್ಮ ಸಮೂದಾಯದ ದೈವದ ಸುತ್ತ ಈ ಹಾಡುಗಳ ರಚನೆಯಾಗಿರುತ್ತವೆ. ಎರಡು ನಾಗರಿಕ ಸಮಾಜದಲ್ಲಿಯ ವಸ್ತುವನ್ನು ಊದಾರಿಸಿ ಹಾಡುವ ಹಾಡುಗಳು ಇಲ್ಲಿ ಸಂಪ್ರದಾಯಕ್ಕೆ ಅವಕಾಶವಿರುವುದಿಲ್ಲ, ಜೊತೆಗೆ ಈ ಹಿಂದೆ ಇದ್ದ ಸಂಪ್ರದಾಯದ ರಾಗದ ಹಾಡುಗಳು ಈಗ ಕಣ್ಮರೆಯಾಗಿವೆ. ಆಧುನಿಕ ಸಿನಿಮಾ ಹಾಡುಗಳ ಧಾಟಿಯಲ್ಲಿ ಇವತ್ತು ಹೊಸ ಡೊಳ್ಳಿನ ಹಾಡುಗಳು ರಚನೆಯಾಗುತ್ತಿರುವದನ್ನು ನೋಡಿದರೆ ಖೇದವಾಗುತ್ತದೆ. ಏನೇ ಆದರೂ ಹಾಲುಮತ ಸಮೂದಾಯದ ಜನಪದ ಕಲೆ ಇನ್ನು ಜೀವಂತವಿರುವದು ಈ ಎಲ್ಲ ದೇವರ ಆಚರಣೆಯಿಂದಲೇ ಎಂಬುದು ಸ್ಪಷ್ಟವಾಗುತ್ತದೆ.

ಡೊಳ್ಳಿನ ಹಾಡುಗಳು ಯಾವಾಗಲೂ ಗುರುವಿನ ಸ್ತುತಿಯೊಂದಿಗೆ ಪ್ರಾರಂಭವಾಗುತ್ತವೆ.

ಉದಾ: "ಸ್ವಾಮಿ ನಮ್ಮಯ್ ದೇವರ್
ಬಂದಾವ್ ಬನ್ನಿರೇ" ಎಂಬ ಸ್ತುತಿ ಪದ್ಯದ ಪಲ್ಲವಿಯನ್ನು ಡೋಳ್ಳು

ಹಾಡನ್ನು ಹಾಡುವ ಕಲಾವಿದರು ಹಾಡಿನ ನಂತರ ಬೇರೆ ಬೇರೆ ಹಾಡುಗಳನ್ನು ಹಾಡುತ್ತಾರೆ.

ಉದಾ: ಗುಲ್ಲಮಾಡದೆನ್ನ ಸೊಲ್ಲ ಕೇಳಿರಿ
ನಿಂತು ಹೇಳುವೆನು ಕೈಮುಗದಾ

ಮುಂಡಾಸುರನೆಂಬ ಮುಂಡ ದೈತ್ಯನ
ರುಂಡ ಕಡಿದ ರೇವಣಸಿದ್ದ
ಅರಿಯದ ಅರ್ಥ ಕೇಳಿಲ್ಲ ತಮ್ಮ
ಅಗಾದ ನಮಗೇನೂ ಆಗಿಲ್ಲಾ
ಕುರಿಗಳು ಧರಣಿಗೆ ಬಂದ ಮಜಕುರ
ವರ್ಣಿಸಿ ಹೇಳುನೆ ತಿಳಿ ಮೊದಲಾ"೭ ಎಂಬ ಡೋಳು ಹಾಡಿನಲ್ಲಿ

ಗ್ರಾಮೀನ ಜನಪದರ ಪ್ರತಿಭೆ ಹಾಗೂ ಪದ್ಯದ ಪ್ರಾಸ ಅನುಪ್ರಾಸ ಲಯ ವಿನ್ಯಾಸ ಇವೆಲ್ಲವುಗಳು ಇಂತಹ ಡೋಳ್ಳು ಹಾಡಿನಲ್ಲಿ ಎದ್ದು ಕಾಣುತ್ತವೆ.

೫. ಹಾಲಗಂಬ ನೆಡುವ ಆಚರಣೆ :

ಹಾಲಗಂಬ ಆಚರಣೆಯ ವಿಶೇಷವಾಗಿ ಕುರುಬರ ಸಮುದಾಯದಲ್ಲಿ ನಡೆದ ಮದುವೆಯ ಸಂದಂರ್ಭದಲ್ಲಿ ನೆಡುತ್ತಾರೆ. ಆದರೆ ಹಾಲಗಂಬ ನೆಡುವ ಪೂರ್ವದಲ್ಲಿ ಬೀರದೇವರ ಗುಡಿಗೆ ಹೋಗಿ ನಮಸ್ಕಾರಿ ಆತನ ಅಪ್ಪಣೆ ಪಡೆದು ಮದುವೆಯ ಹಂದರಕ್ಕೆ ಬಂದು ನೆಡುತ್ತಾರೆ. ಹಾಲಗಂಬವೆಂದರೆ ಆಲದ ಮರದ ಟೊಂಗೆಯನ್ನು ಕಡಿದು ತಂದು ನಿಲ್ಲಿಸುವುದು. ಇದರಲ್ಲಿರುವ ಹಾಲಿನ ದ್ಯವ್ಯದ ಮೂಲಕ ಇದಕ್ಕೆ ಹಾಲಗಂಬವೆಂಬ ಹೆಸರು ಬಂದಿದೆ. ಇದನ್ನು ಮದುವೆಯಾಗುವ ವರನ ಸೋದರ ಮಾವ ತಂದ ನೆಡುತ್ತಾನೆ. ನಂತರ ಮುತ್ತೈದೆಯ ಅದಕ್ಕೆ ಆರತಿಯನ್ನು ಬೆಳಗಿ ಪೂಜಿಸುತ್ತಾರೆ. ಇದು ಸಂತಾನ ಹಾಗೂ ಮನೆಯ ಸೌಬಾಗ್ಯದ ಸಂಖೇತವಾಗಿದೆ.

೬. ಕರಿ ಕಟ್ಟುವುದು ಮತ್ತು ಕರಿ ಹರಿಯುವುದು :

ಜಾತ್ರೆ ಪ್ರಾರಂಭವಾಗುವ ಪೂರ್ವದಲ್ಲಿ ಅಂದರೆ ಐದು ದಿನ ಮುಂಚಿತವಾಗಿ ವಿವಿಧ ತರಹದ ಏಣ್ಣೆಯಲ್ಲಿ ಕರಿದ ಸಿಹಿಯಾದ ಆಹಾರ ಪದಾರ್ಥಗಳಾದ ಕರಚಿಕಾಯಿ, ತರಗ, ಹಪ್ಪಳ ಮುಂತಾದವುಗಳನ್ನು ದೇವರ ಜಗುಲಿಯ ಮೇಲೆ ಚಿತ್ತಾರಗಳಿಂದ ಕಟ್ಟುವ ಸಂಪ್ರದಾಯ ಬೆಳೆ ಬಂದಿರುವುದಕ್ಕೆ ಕರಿಕಟ್ಟುವುದು ಎನ್ನುತ್ತಾರೆ. ಇದು ಜಾತ್ರೆಯ ಆಚರಣೆ ಅಧಿಕೃತ ಚಾಲನೆಗೆ ಅನುಮತಿಯನ್ನು ನೀಡುವ ಸಂಕೇತವಾಗಿದೆ. ಆ ಬಳಕವೇ ಜಾತ್ರೆ ಪ್ರಾರಂಭಗೊಳ್ಳುತ್ತದೆ.

ಕರಿಹರಿಯುವುದು :

ಜಾತ್ರೆಯ ಪ್ರಾರಂಭದಲ್ಲಿ ಕಟ್ಟಿದ ಕರಿಯನ್ನು ಜಾತ್ರೆ ಮುಗಿದ ನಂತರ ಹರಿದು ಪ್ರಸಾದ ರೂಪದಲ್ಲಿ ಎಲ್ಲ ಭಕ್ತರಿಗೆ ಕೂಡುವುದಾಗಿದೆ. ತಮ್ಮ ದೇವರ ಸೇವಕರಾದ ಭಕ್ತರಿಗೆ ಕಟ್ಟಿ ಸಿಹಿ

ಪದಾರ್ಥವನ್ನು ಹರಿದು ಹಂಚಿಕೊಡುವುದು. ಕರಿಹರಿಯುವುದು ಎನ್ನುತ್ತಾರೆ. ಹೀಗೆ ಕರಿ ಹರಿಯೂವದರೊಂದಿಗೆ ಆ ವರ್ಷದ ಜಾತ್ರೆ ಅಧೀಕೃತವಾಗಿ ಮುಕ್ತಾಯಗೊಳ್ಳುತ್ತದೆ ಎಂಬ ಅರ್ಥ ಇದರಿಂದ ತಿಳಿದು ಬರುತ್ತದೆ.

೭. ಕವಲ ಹಚ್ಚುವುದು :

ಕುರಬ ಸಮುದಾಯದಲ್ಲಿ ಕವಲ ಹಚ್ಚುವುದೆಂದರೆ ದೇವರು ಆಜ್ಞೆಯನ್ನು ನೀಡುವ ಪದ್ಧತಿಯಾಗಿದೆ. ಈ ತೆರನಾದ ಕವಲ ಹಚ್ಚುವ ಪದ್ಧತಿಯು ಬೀರಪ್ಪ ದೇವರ ಸನ್ನಿದಾನದಲ್ಲಿ ನಡೆಯುತ್ತದೆ. ಕವಲ ಹಲವು ರೀತಿಯಲ್ಲಿವೆ. ಹೂವನ್ನು ದೇವರ ಮೂರ್ತಿಗೆ ಏರಿಸಿ ಅದು ಬಲಕ್ಕೆ ಬಿದ್ದರೆ ಶುಭಶಕುನ ಎಡಕ್ಕೆ ಬಿದ್ದರೆ ಅಪಶಕುನ ಅದೇ ರೀತಿ ಅಡಕೆಯನ್ನು ಹಚ್ಚು ಪದ್ಧತಿ ಈ ಗ್ರಾಮದಲ್ಲಿದೆ. ಅಡಕೆ ಉರುಳಿ ಬಲಭಾಗಕ್ಕೆ ಬಂದರೆ ಅವರ ಕಾರ್ಯ ಯಶಸ್ವಿಯಾಗುತ್ತದೆ. ಎಡಕ್ಕೆ ಬಂದರೆ ಯಶಸ್ಸು ದೊರೆಯುವದಿಲ್ಲವೆಂಬ ನಂಬಿಕೆಯನ್ನು ಇಟ್ಟುಕೊಂಡು ರವಿವಾರ ಅಥವಾ ಅಮವಾಸೆ ಮುಂತಾದ ಒಳ್ಳೆಯ ಸಂದಂರ್ಭದಲಿ ಇಂತಹ ಸಂಪ್ರದಾಯದ ನಂಬಿಕೆಗಳು ಜರಗುತ್ತವೆ.

ಕವಲು ಹಚ್ಚುವರು ಶುಚಿಯಾದ ಬಟ್ಟೆಯಿಂದ ದೇವರ ಸನ್ನಿಧ್ಯಾನದಲ್ಲಿ ಕುಳಿತು ಪೂಜಾರಿಗೆ ಹೇಳುತ್ತಾರೆ. ಪೂಜಾರಿಯ ಕವಲನ್ನು ಕಟ್ಟುತ್ತಾನೆ. ಅದರ ಫಲಿತಾಂಶವನ್ನು ವಿವರಿಸುತ್ತಾನೆ ಹೀಗೆ ಈ ಕವಲ ಹಚ್ಚುವ ಕಾರ್ಯ ಕುರಬ ಸಮುದಾಯದಲ್ಲಿ ಅಷ್ಟೇ ಅಲ್ಲ ಅದು ಸಾರ್ವತ್ರಿಕವಾಗಿ ನಡೆಯುತ್ತದೆ.

೮. ಪಲ್ಲಕ್ಕಿ ಉತ್ಸವ :

ದೇವರ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿಕೊಂಡು ಊರ ಪ್ರಮುಖ ಬೀದಿಯಲ್ಲಿ ಮೆರವಣಿಗೆಯನ್ನು ಮಾಡುತ್ತಾರೆ. ಈ ಭಾಗದಲ್ಲಿ ಬೀರಪ್ಪನ ಎರಡು ಪಲ್ಲಕ್ಕಿಗಳು ಯಾವುದೇ ಜಾತ್ರೆಯೂ ನಡೆದರು ಅಲ್ಲಿ ಆಗಮಿಸುತ್ತದೆ. ಇವು ದೇವರ ನಂಬಿಕೆಗೆ ಭಕ್ತರನ್ನು ಇನ್ನಷ್ಟು ಸೆಳೆಯುವ ಕ್ರಿಯೆಯಲ್ಲಿ ಬೆಳೆದು ಬಂದತವು. ಪಲ್ಲಕ್ಕಿ ಉತ್ಸವ ಜಾತ್ರೆಯ ಸಂದಂರ್ಭದಲ್ಲಿ ಒಂದು ವಿಶಿಷ್ಟವಾದ ಆಚರಣೆಯ ಸಂಪ್ರದಾಯವಾಗಿದೆ. ಡೊಳ್ಳು ಬಾರಿಸುತ್ತಾ, ಭಂಡಾರ ಎರಚುತ್ತಾ ಹಲಿಗೆ ವಾದ್ಯದೊಂದಿಗೆ ಆಗಮಿಸುತ್ತದೆ. ಹೀಗೆ ಪಲ್ಲಕ್ಕಿ ಉತ್ಸವ ಸಹ ವಿಶೇಷವಾಗಿ ಈ ಪ್ರದೇಶದಲ್ಲಿ ಗಮನ ಸೆಳೆದಿದೆ.

ಈ ಮೇಲಿನ ಆಚರಣೆಗಳಷ್ಟೇಯಲ್ಲದೆ ಏಡಿಮಾಯಕ್ಕನಿಗೆ ಪ್ರತಿ ರವಿವಾರ ಹಾಗೂ ಹುಣ್ಣಿಮೆಯ ದಿನ ವಿಶೇಷ ಪೂಜೆ ನಡೆಯುತ್ತದೆ. ಭಾರತ ಹುಣ್ಣಿಮೆ, ಕಾರಹುಣ್ಣಿಮೆ ಹಾಗೂ

ನೂಲು ಹುಣ್ಣಿಮೆಯಂದು ಮಾಯಕ್ಕನಿಗೆ ಭಕ್ತರು ಆಗಮಿಸಿ ವಿಶೇಷ ಪೂಜೆಯ ಸಮಯದಲ್ಲಿ ಪಲ್ಲಕ್ಕಿಯ ಜೊತೆ ಕುದುರೆ, ಕಟ್ಲೆತ್ತು, ಕೊಂಬು, ಕಹಳೆ, ಡೊಳ್ಳುವಾದನ ನಡೆಯುತ್ತದೆ. ಹೀಗಾಗಿ ಮಾಯಕ್ಕನಿಗೆ ಸಂಬಂಧಿಸಿದ ಕುದುರೆ, ಕಟ್ಲೆತ್ತು, ಗೂಳಿ, ಕುರಿಗಳ ಕುರಿತಾಗಿಯೂ ಭಕ್ತರಲ್ಲಿ ಅನೇಕ ನಂಬಿಕೆಗಳಿವೆ. ಮಾಯಕ್ಕನ ಪಲ್ಲಕ್ಕಿಯ ಕೆಳಗೆ ಕಂಬಳಿ ಹಾಸುವುದು. ಕುರಿ ಉಣ್ಣೆಯನ್ನು ಇಡುವುದು. ಕುರುಬರು ಹಾಗೂ ಲಿಂಗಾಯತ ಪೂಜಾರಿಗಳೆ ದೇವಿಗೆ ಪೂಜೆಯನ್ನು ಮಾಡುತ್ತಾರೆ. ಪೂಜಾರಿಗಳು ಮೌಂಸಾಹಾರ ತಿನ್ನುವಂತಿಲ್ಲ. ಮೈಮೇಲೆ ದೇವರು ಬಂದಾಗ ಹೇಳಿಕೆಗಳು ಆಗುತ್ತವೆ. ಅವನ್ನು ಜನರು ಅಣುಕಿಸುವಂತಿಲ್ಲ. ಹೀಗೆ ಹತ್ತು ಹಲವು ನಂಬಿಕೆಗಳು ಈ ಕುರುಬ ಸಮುದಾಯದ ದೇವರ ಹೆಸರಿನಲ್ಲಿ ನಡೆಯುತ್ತವೆ.

ಜೈನ ಜಿನಾಲಯದ ಆಚರಣೆಗಳು ಮತ್ತು ಸಂಪ್ರದಾಯ :

ಎಲ್ಲ ಸಮುದಾಯದಲ್ಲಿ ಕಂಡು ಬರುವಷ್ಟು ಆಚರಣೆಗಳು ಮತ್ತು ಸಂಪ್ರದಾಯಗಳು ಈ ಜೈನ ಜಿನಾಲಯದಲ್ಲಿ ಕಂಡು ಬರುವುದಿಲ್ಲ. ಆದರೂ ಸಹ, ಆಚರಣೆ ಮತ್ತು ಸಂಪ್ರದಾಯ ಇವುಗಳಿಲ್ಲದ ಧರ್ಮ ಈ ಭೂಮಿಯ ಮೇಲೆ ಇಲ್ಲ "ಆತ್ಮ ಸಮರ್ಪಣೆಗಿಂತಲೂ ಆತ್ಮನ ಸ್ವ-ಸಾಧನೆಗೆ ಮಹತ್ವವನ್ನು ಕೊಟ್ಟ ಜೈನಧರ್ಮವು ದೈವ ಪರಮಾಧಿಕ್ಯವನ್ನು ಒಪ್ಪಲಿಲ್ಲವೆಂಬುದು ತಿಳಿದ ವಿಷಯವೇ ಆಗಿದೆ. ಆದರೂ ಕಾಲಾನುಕ್ರಮದಲ್ಲಿ ಎಲ್ಲ ಧರ್ಮದಂತೆ ಜೈನಧರ್ಮವೂ ಮೂರ್ತಿ ಪೂಜೆಯನ್ನು ಅಳವಡಿಸಿಕೊಂಡಿತೆಂಬುದು ವಾಸ್ತವಿಕ ಸತ್ಯ. ಇದರಿಂದಾಗಿ, ಶೈವ ಮತ್ತು ವೈಷ್ಣವ ದೇವಾಲಯಗಳಲ್ಲಿ ಆಚರಿಸುವ ನಿತ್ಯ ಪೂಜಾ ವಿಧಿಗಳನ್ನು ಜೈನಧರ್ಮದಲ್ಲಿ ಕಾಣುತ್ತೇವೆ"೮

ಈ ರಾಯಬಾಗ ಜಿನಾಲಯದಲ್ಲಿ ಪ್ರಮುಖವಾಗಿ ಎರಡು ರೀತಿಯ ಪೂಜೆಗಳು ಜರಗುತ್ತವೆ. ಜಿನನ ಮೇಲೆ ಮನಸ್ಸನ್ನು ಕೇಂದ್ರಿಕರಿಸಿ ಮನದಲ್ಲಿ ಪೂಜ್ಯತೆಯನ್ನು ಇಟ್ಟುಕೊಳ್ಳುವುದು ಭಾವಪೂಜೆಯಾಗುತ್ತದೆ. ಇದರ ಜೊತೆಗೆ ದ್ರವ್ಯ ಪೂಜೆಯನ್ನು ಮಾಡುತ್ತಾರೆ. ಅಂದರೆ ಜಿನನ ಬಿಂಬವನ್ನು ವಿವಿಧ ದ್ರವ್ಯಗಳಿಂದ ವಿಧಿಪೂರ್ವಕವಾಗಿ ಪೂಜಿಸುತ್ತಾರೆ. ಈ ಸಮಯದಲ್ಲಿ ಅಭಿಷೇಕ ಆರತಿ ಇವುಗಳೊಂದಿಗೆ ಜೈನ ಶ್ಲೋಕಗಳನ್ನು ಹೇಳುತ್ತಾರೆ. ದಿನಕ್ಕೆ ಎರಡು ಸಾರಿ ಪೂಜೆಯನ್ನು ಮಾಡುತ್ತಾರೆ. ಶ್ರಾವಕರು ಮತ್ತು ಶ್ರಾವಕಿಯರು ಭಕ್ತಿ ಭಾವದಿಂದ ಜಿನಾಲಯಕ್ಕೆ ಬಂದು ಅಕ್ಷತೆಯನ್ನು ಹಾಕುತ್ತಾರೆ. ಈ ಅಕ್ಷತೆಯನ್ನು ಭಕ್ತರು ನೀರಿನಲ್ಲಿ ತೊಳೆದುಹಾಕಿ ಅದನ್ನು ಬಿಸಿಲಿನಲ್ಲಿ ಒಣಗಿಸಿ ನಂತರ ಅದನ್ನು ಜಿನಾಲಯ ತಂದು ಮನಸ್ಸಿನಲ್ಲಿರು ಇಚ್ಛೆಯಂತೆ ಸಂಕೇತ ರೂಪದಲ್ಲಿ ಅಕ್ಷತೆಯನ್ನು ಹಾಕುತ್ತಾರೆ. ಈ ಸಂಪ್ರದಾಯಕ್ಕೆ 'ಪೂಂಜೆ' ಎಂದು ಕರೆಯುತ್ತಾರೆ. ಈ ರೀತಿ ಮಾಡುವುದರಿಂದ ಯಾವುದೇ ಕ್ರಿಮಿಕೀಟಗಳು ಅವುಗಳಲ್ಲಿ ಹುಟ್ಟುಕೊಳ್ಳುವದಿಲ್ಲ, ಒದ್ದೆಯಾದ

ಯಾವ ಪದಾರ್ಥವನ್ನು ಅವರು ನೈವದ್ಯಕ್ಕೆ ಬಳಸುವುದಿಲ್ಲ. ಅದರ ಬದಲಿಗೆ ಬಾದಾಮ, ಕಾರಿಕ, ಮುಂತಾದ ವಸ್ತುಗಳನ್ನು ನೈವೆದ್ಯೆಕ್ಕೆ ಬಳಸುತ್ತಾರೆ.

ಹೊಸ ಬಸದಿ ನಿರ್ಮಾಣಕಾರ್ಯದಲ್ಲಿ 'ಪಂಚಕಲ್ಯಾಣ' ಉತ್ಸವವನ್ನು ಮಾಡುತ್ತಾರೆ. ವಿವಿಧ ಭಾಗದಿಂದ ಆ ಸಮಯದಲ್ಲಿ ಶ್ರಾವಕರು ಮತ್ತು ಶ್ರಾವಕಿಯರು ಆಗಮಿಸುತ್ತಾರೆ. ಆ ಸಂದಂರ್ಭದಲ್ಲಿ ವಿವಿಧ ಪೂಜೆಗಳು ಮಂತ್ರ ಮುಂತಾದವುಗಳು ಜರುಗುತ್ತವೆ. ಪ್ರತಿ ವರ್ಷ ಒಂದು ನಿಗದಿಯಾದ ಮೂರ್ತದಲ್ಲಿ ಬಸದಿಯ ಉತ್ಸವವನ್ನು ಮಾಡುತ್ತಾರೆ. ಇದಕ್ಕೆ 'ವಾರ್ಷಿಕ ಪೂಜೆ' ಎನ್ನುತ್ತಾರೆ. ಹೀಗೆ ಹಲವು ರೀತಿಯ ಆಚರಣೆಯ ಸಂಪ್ರದಾಯಗಳು ಈ ರಾಯಬಾಗದ ಜಿನಾಲಯದಲ್ಲಿ ನಡೆದುಕೊಂಡು ಬಂದಿವೆ.

ಶೈವ ದೇವಾಲಯಗಳು ಹಾಗೂ ಇತರ ದೇವಾಲಯಗಳ ಆಚರಣೆ ಮತ್ತು ಸಂಪ್ರದಾಯಗಳು :

ಎಲ್ಲ ಸಮುದಾಯದ ದೇವಾಲಯಗಳಲ್ಲಿ ನೆಡೆಯುವ ಪೂಜೆಗಳಂತೆ ರಾಯಬಾಗ ಶೈವ ದೇವಾಲಯ ಹಾಗೂ ಇತರ ದೇವಾಲಯಗಲ್ಲಿ ಕಂಡು ಬರುತ್ತವೆ. ನಿತ್ಯ ಪೂಜೆ ಹಬ್ಬ ಹರಿ ದಿನಗಳಲ್ಲಿ ವಿಶೇಷ ಪೂಜೆಗಳ ಜರುಗುತ್ತವೆ. ನವರಾತ್ರಿ, ಯುಗಾದಿ, ಸಂಕ್ರಾತಿ, ಶಿವರಾತ್ರಿ, ಮಹಾಲಯ ಅಮವಾಸೆ ಶ್ರಾವಣಮಾಸ ಮುಂತಾದ ಸಂದರ್ಭದಲ್ಲಿ ಹುಣ್ಣಿಮೆ ಹಾಗೂ ಅಮವಾಸೆಗಳನ್ನು ಒಳಗೊಂಡ ದಿನದಂದು ಪೂಜೆಗಳು ಹಾಗೂ ಸಂಪ್ರದಾಯಿಕ ಆಚರಣೆಗಳು, ಜಾತ್ರೆಗಳು, ಉತ್ಸವಗಳು ವಿಶೀಷ್ಠತೆಯಲ್ಲಿ ಕಂಡು ಬರುತ್ತವೆ. ಇವುಗಳಲ್ಲಿ ಪಲ್ಲಕ್ಕಿ ಉತ್ಸವ, ದಟ್ಟಿ ಕುಣಿತ, ಚೌಡಕಿ, ಭಜನೆ ಮುಂತಾದ ಜನಪದ ಕಲೆಗಳು ಜರುಗುತ್ತವೆ. ಸೋಮನಾಥ ದೇವಾಲಯದ ಜಾತ್ರೆ ರಾಯಬಾಗ ಪರಿಸರದಲ್ಲಿ ಅತೀ ಹೆಚ್ಚು ವಿಜೃಂಬನೆಯಿಂದ ಜರುಗುತ್ತದೆ. ಸಿದ್ದೇಶ್ವರ ದೇವಸ್ಥಾನದ ಜಾತ್ರೆ ಶ್ರಾವಣ ಮಾಸದಲ್ಲಿ ಜರುಗುತ್ತದೆ.

ಸರ್ವ ಸಮುದಾಯದ ಭಕ್ತರು ಜಾತ್ರೆಯಲ್ಲಿ ಒಂದು ಗೂಡಿ ಸಿದ್ದೇಶ್ವರ ದೇವರ ತೇರನ್ನು ಎಳೆಯುತ್ತಾರೆ. ಸಂತೂ ಬಾಯಿ ದೇವಿಯ ಜಾತ್ರೆ ಮೇ ತಿಂಗಳಲ್ಲಿ ಜರುಗುತ್ತದೆ. ಈ ಸಂತೂ ಬಾಯಿ ದೇವರಲ್ಲಿ ಭಕ್ತರು ನಾನಾ ರೀತಿಯ ಹರಕೆಗಳನ್ನು ಹೊತ್ತುಕೊಳ್ಳುತ್ತಾರೆ. ಅವುಗಳಲ್ಲಿ ಪ್ರಮುಖವಾದದ್ದೆಂದರೆ ಮಕ್ಕಳಲ್ಲದವರಿಗೆ ಮಕ್ಕಳ ಭಾಗ್ಯ ಕರುಣಿಸುವ ತಾಯಿ ಇವಳಾದುದ್ದರಿಂದ "ಸಂತತಿಯನ್ನು ಬೆಳೆಸುವ ತಾಯಿ" ಸಂತೂಬಾಯಿ ಎಂದು ಜನರು ನಂಬಿದ್ದಾರೆ. ಮಕ್ಕಳಾದ ದಂಪತಿಗಳು ತಮ್ಮ ಹರಕೆಯನ್ನು ತೀರಿಸುವರು ಅವರು ಊರೂಟವನ್ನು ಹಾಕಿಸುವ ಪದ್ಧತಿ ಇದೆ. ಹಾಗೂ ಸಂತೂಬಾಯಿಗೆ ವಿಶೇಷವಾಗಿ ಹೋಳಿಗೆ, ಹುಗ್ಗಿ, ನೈವೇದ್ದವಾಗಿ ಸಲ್ಲಿಸುತ್ತಾರೆ.

ರೇಣುಕಾ ದೇವಿಯ ಜಾತ್ರೆಯ ರಂಡಿ ಹುಣ್ಣಿಮೆಯಲ್ಲಿ ವಿಜೃಂಭಣೆಯಿಂದ ಜರುಗುತ್ತದೆ. ಇಲ್ಲಿ ಜೋಗತಿಯರು ರೇಣುಕಾದೇವಿಯ ಮೂರ್ತಿಯ(ಜಗ)ನ್ನು ಹೊತ್ತು ಚೌಡಕಿಯೊಂದಿಗೆ ಆಗಮಿಸುವ ಪರಿ ಅದ್ಭುತವಾದದ್ದು. ಊರ ಪ್ರಮುಖ ದೇವಾಲಯವಾದ ಹನುಮಪ್ಪನ ದೇವಾಲಯವು ತನ್ನದೇ ಆದ ವಿಶಿಷ್ಟತೆಯಿಂದ ಭಕ್ತರ ಗಮನವು ರಾಯಬಾಗದಲ್ಲಿ ಕೂಡಿಕೊಂಡಿದೆ. ದಿನಕ್ಕು ಎರಡು ಬಾರಿ ಪೂಜೆಗೊಳ್ಳುವ ಹನುಮಪ್ಪ ರಾಯಬಾಗ ಭಾಗದ ಆರಾಧ್ಯ ದೈವವಾಗಿದ್ದಾನೆ. ಹನುಮಪ್ಪನ ಜಾತ್ರೆಯಲ್ಲಿ ನಾಟಕ ಜಾನಪದ ಕಲೆಗಳು ಹಾಗೂ ಓಕಳಿ ಉತ್ಸವ ಜರುಗುತ್ತದೆ. ಓಕುಳಿಯಲ್ಲಿ ಮೂರು ಪ್ರಕಾರಗಳು ನೀಲೋಕುಳಿ, ಹಾಲೋಕಳಿ, ಕಡೆಯೋಕಳಿ ಇವುಗಳಲ್ಲಿ ಹಾಲೋಕಳಿಯ ವೈಭವವನ್ನು ಹನುಪ್ಪನ ಜಾತ್ರೆಯಲ್ಲಿ ಕಂಡು ಬರುತ್ತದೆ. ಹನುಪ್ಪನ ದೇವಸ್ಥಾನದಲ್ಲಿ ದಿನನಿತ್ಯ ಅಂಬಲಿ ಸೇವೆ ಜರುಗುತ್ತದೆ. ಕೆಲವು ಕೆಳವರ್ಗದ ದೇವರ ಹೆಸರಿನಲ್ಲಿ ಮರಿ ಬಲಿಯನ್ನು ಕೊಡುವ ಪದ್ಧತಿ ಇದೆ. ಅವುಗಳಲ್ಲಿ ಹುಂಜ, ಕುರಿ, ಗಂಡು ಮೇಕೆ ಮುಂತಾದ ಬಲಿಗಳನ್ನು ಕೊಡುತ್ತಾರೆ.

ರಥೋತ್ಸವದಲ್ಲಿ ರಥಕ್ಕೆ ಕಾರಿಕು, ಕಾಯಿ, ಹೂವು-ಹಣ್ಣು-ಬೆಂಡು ಬೇತಾಸ ಮುಂತಾದ ವಸ್ತುಗಳನ್ನು ಎಸೆಯುತ್ತಾರೆ. ಇದರಿಂದ ತಮ್ಮ ಹರಕೆಯನ್ನು ಸಲ್ಲಿಸುತ್ತಾರೆ. ನಾಗಮ್ಮ ದೇವಿಗೆ ಹಾಲೆರೆಯುವ ಸೇವೆ ವಿಶೇಷ ದಿನಗಳಲ್ಲಿ ಕಂಡು ಬರುತ್ತದೆ. ಈ ಎಲ್ಲ ಜಾತ್ರೆಗಳಲ್ಲಿ ದೇವಸ್ಥಾನಕ್ಕೆ ದೀಪಲಂಕಾರ, ಕುಂಬಮೇಳ, ಕರಡಿ ಮಜಲು, ಹಲಗೆ ಮೇಳ ಮುಂತಾದವುಗಳು ಉತ್ಸವಗಳಲ್ಲಿ ಒಂದಾಗಿವೆ. ಸಂತೂಬಾಯಿಯ ದೇವಾಲಂಯದ ಆಲದ ಮರಕ್ಕೆ ಮದುವೆಯಾದವರು ಹಡೆದ ಬಾಣಂತಿಯರು ಹಾಗೂ ಹೆಣ್ಣು ಮಕ್ಕಳು ಮೈನೆರೆದಾಗ ಅರಿಶಿಣ ಕುಂಕುಮ ಪೂಜೆ ಸಲ್ಲಿಸಿ ನೂಲು ಸುತ್ತು ತ್ತಾರೆ. ಈ ಮರ ಸುಮಾರು ಮೂರುನೂರು ವರ್ಷಗಳ ಇತಿಹಾಸವನ್ನು ಹೊಂದಿದೆ.

ವೈಷ್ಣವ ಸಮುದಾಯದ ದೇವಾಲಯವಾದ ದತ್ತಮಂದಿರ, ರಾಮಮಂದಿರದಲ್ಲಿ ದಿನ ನಿತ್ಯ ವೇದಗಳ ಮಂತ್ರ ಪಠಣ, ಅಗ್ನಿಹೋವ ಮುಂತಾದ ಯಜ್ಞ-ಯಾಗಾದಿಗಳು ನೆಡೆಯುತ್ತದೆ. ಈ ಎಲ್ಲ ದೇವಾಲಯಗಳೂ ಭಕ್ತರು ತಮ್ಮ ಬೇಡಿಕೆಗಾಗಿ ದೇವಾಲಯದ ಸುತ್ತಲೂ ಪ್ರದಕ್ಷಿಣೆ ದೀಡ ನಮಸ್ಕಾರ ಉರುಳು ಸೇವೆ, ಮುಂತಾದವು ಸಂಪ್ರದಾಯ ಆಚರಣೆಗಳನ್ನು ಭಯ ಭಕ್ತಿಯಿಂದ ನಡೆಸಿಕೊಂಡು ಬರುತ್ತಿದ್ದಾರೆ. ಮದುವೆಯಾದ ನವ ವಧು ವರರು, ತಮ್ಮ ತಮ್ಮ ಸಮುದಾಯದ ದೇವರುಗಳಿಗೆ ಪೂಜೆ ಸಲ್ಲಿಸಿ ತಮ್ಮ ಲೌಕಿಕ ಜೀವನದಲ್ಲಿ ಭಾಗಿಯಾಗುತ್ತಾರೆ. ಮದುವೆಯಾಗುವ ಪೂರ್ವದಲ್ಲಿ ದೇವರಿಗೆ ಮಾಡುವ ಕಾರ್ಯ ಶೈವ ಧರ್ಮದಲ್ಲಿ ವಿಶಿಷ್ಟವಾದದ್ದು. ಗುಗ್ಗುಳೋತ್ಸವದಲ್ಲಿ ಒಡಪುಗಳನ್ನು ಹೇಳುವ ಪರಿ ನೋಡಿದರೆ ಮೈಜುಮ್ಮೆನ್ನುತ್ತದೆ. ಪುರವಂತರು

ಆ ಸಂದರ್ಭದಲ್ಲಿ ಶಸ್ತ್ರಗಳನ್ನು ನಾಲಗೆ, ತುಟಿ, ಕೈ, ಕಪಾಳ ಮುಂತಾದ ದೇಹದ ನಾನಾ ಭಾಗಗಳಲ್ಲಿ ಚುಚ್ಚಿಕೊಳ್ಳುವ ಆಚರಣೆಗಳು ನೆಡೆಯುತ್ತದೆ.

ಒಟ್ಟಾರೆಯಾಗಿ ರಾಯಬಾಗ ದೇವಾಲಯದಲ್ಲಿ ಹತ್ತು ಹಲವು ವಿಶೇಷತೆಗಳನ್ನು ಒಳಗೊಂಡ ಸಂಪ್ರದಾಯಿಕ ಆಚರಣೆಗಳು ಅರ್ಥ ಸಹಿತ ಮತ್ತು ಅರ್ಥರಹಿತವಾಗಿ ಶತ-ಶತಮಾನಗಳಿಂದ ನೆಡೆದುಕೊಂಡು ಬಂದಿದೆ. ಎಂಬುದಕ್ಕೆ ಈ ಮೇಲಿನ ಎಲ್ಲ ಆಚರಣೆ ಮತ್ತು ನಂಬಿಕೆಗಳು ಕಾರಣಗಳಾಗಿವೆ.

ಅಡಿ ಟಿಪ್ಪಣಿಗಳು

೧. *ಸಂಗಮರ ದೇವಾಲಯಗಳು*, ಡಾ.ಶ್ರೀಮತಿ ಸಿ.ಎಸ್. ಅಪರ್ಣ. (ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ. ೨೦೦೭-೨೦೦೮) ಪುಟ ಸಂಖ್ಯೆ- ೧೩೨

೨. *ಏಳು ಊರಿನ ದೇವತೆಗಳು ಒಂದು ಅಧ್ಯಯನ*, ಡಾ.ಸಿ.ಟಿ. ಗುರುಪ್ರಸಾದ್, (ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೫) ಪುಟ ಸಂಖ್ಯೆ- ೨೭

೩. *ಹರತಿ ಸಿರಿ*, ಲಕ್ಷ್ಮಣ್ ತೆಲಗಾವಿ, (ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ. ೧೯೮೭) ಪುಟ ಸಂಖ್ಯೆ- ೭೬

೪. *ರಾಯಬಾಗ ತಾಲೂಕಿನ ಹಾಲುಮತ ದೈವಗಳು*, ಟಿ.ಎಸ್. ವಂಟಗೂಡಿ. (ವಿದ್ಯಾಪ್ರಕಾಶನ ಹಿಡಕಲ್ ೨೦೧೦) ಪುಟ ಸಂಖ್ಯೆ- ೭೬

೫. ಅದೇ ಪುಟ ಸಂಖ್ಯೆ- ೭೭

೬. *ಕುರುಬ ಸಮುದಾಯ ಭಾಷೆ ಮಾನವಭಾಷಾಶಾಸ್ತ್ರ ಅಧ್ಯಾಯನ*, ಡಾ.ಎಸ್.ಎಸ್. ಅಂಗಡಿ, (ಆನಂದ ಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ. ೨೦೦೯) ಪುಟ ಸಂಖ್ಯೆ- ೧೧೧

೭. ಅದೇ ಪುಟ ಸಂಖ್ಯೆ-೧೫೧

೮. *ಸಂಗಮರ ದೇವಾಲಯಗಳು*, ಡಾ.ಶ್ರೀಮತಿ ಸಿ. ಎಸ್. ಅಪರ್ಣಾ. (ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ. ೨೦೦೭-೦೮) ಪುಟ ಸಂಖ್ಯೆ- ೧೮೨

ಅಧ್ಯಾಯ–6

ಸಮಾರೋಪ

ಸಮಾರೋಪ

ಬೆಳಗಾವಿ ಜಿಲ್ಲೆಯು ಅನೇಕ ಪ್ರಾಗೈತಿಹಾಸಿಕ ಹಾಗೂ ಸಾಮ್ರಾಜ್ಯಗಳ ಆಡಳಿತ ಕಾಲದಿಂದಲೂ ಅನೇಕ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ದೇವಾಲಯಗಳು ದೊರೆತಿವೆ. ಅಂತೆಯೇ ರಾಯಬಾಗದಲ್ಲಿ ದೊರೆತ ಅನೇಕ ದೇವಾಲಯಗಳು ಹಾಗೂ ಶಿಲ್ಪಕಲೆಗಳನ್ನು ಅಧ್ಯಯನ ದೃಷ್ಟಿಯಿಂದ ಇಲ್ಲಿ ಗಮನಿಸಲಾಗಿದೆ. ಇಲ್ಲಿ ದೊರೆತಿರುವ ದೇವಾಲಯಗಳನ್ನು ವಿಶಿಷ್ಟ ರೀತಿಯಿಂದ ಹಾಗೂ ವಿಶೇಷ ಲಕ್ಷಣಗಳ ಅಧ್ಯಯನಗಳಿಂದ ಹಲವು ಮಾಹಿತಿಯನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ. ಇಲ್ಲಿನ ಶಿಲ್ಪಕಲೆಗಳು ದೇವಾಲಯಗಳು ಇವುಗಳ ಧರ್ಮಕ್ಕನುಗುಣವಾಗಿ ಮಾಡಿ ಬಂದಿರುವುದು ವಿಶೇಷವಾಗಿದೆ.

ದೇವಾಲಯ ಒಂದು ನಾಡಿನ ಭವ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ತನ್ನದೇ ಆದ ಅನನ್ಯತೆಯನ್ನು ಉಳಿಸಿಕೊಂಡು ಮುಂದುವರಿಸಿಕೊಂಡು ಬಂದಿವೆ. ಹಾಗೆಯೇ ರಾಯಬಾಗದಲ್ಲಿ ಜೈನ ಸಮುದಾಯದ ಜಿನಾಲಯ ಸೌದತ್ತಿ ರಟ್ಟರ ಆಳರಸರ ಕಾಲದಲ್ಲಿ ದೇವಾಲಯಗಳ ಸೃಷ್ಟಿಗೊಂಡ ಬಗೆ ಆ ಕಾಲದ ಧರ್ಮ ಮತ್ತು ರಾಜಕೀಯಕ್ಕೆ ಪೋಶಿಸಿಕೊಂಡ ಬಗೆಯನ್ನು ಇಲ್ಲಿ ಗಮನಿಸಲಾಗಿದೆ.

ವಿವಿಧ ಸಮುದಾಯದ ಜನರು ತಮ್ಮ ಧಾರ್ಮಿಕ ದೈವದ ಸುಲುವಾಗಿ ನಂಬಿಕೆ ಹರಕೆಗೊಸ್ಕರ ದೇವಾಲಯವನ್ನು ರಚಿಸಿರುವುದರ ಜೊತೆಗೆ ಮುಂದಿನ ಪೀಳಿಗೆಯೂ ಸಹ ಆ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗಲು ಪ್ರೇರೆಪಿಸುವ ಸಂಗತಿ ಸ್ಪಷ್ಟವಾಗಿ ಗೋಚರಿಸುತ್ತದೆ.

ರಾಯಬಾಗದ ದೇವಾಲಯಗಳು ಕೇವಲ ದಾನದತ್ತಿಯಿಂದ ರಚಿತವಾಗಿರದೇ ಅಲ್ಲಿನ ಜನ ಸಮುದಾಯದ ದ್ಯೋತಕವಾಗಿ ಕಂಡು ಬರುತ್ತವೆ. ಆ ಮೂಲಕ ತಮ್ಮ ಧರ್ಮವನ್ನು ಪ್ರಾದೇಶಿಕವಾಗಿ ಬೆಳೆಸುವ ನೆಲೆಗಳನ್ನು ಆ ದೇವಾಲಯಗಳು ಪಡೆದುಕೊಂಡಿವೆ. ಕಾಲಕಾಲಕ್ಕೆ ಧರ್ಮಗಳ ಅವನತಿ ಪ್ರಾರಂಭವಾದಾಗ ಮತ್ತೊಂದು ಧರ್ಮ ಆ ಧರ್ಮದ ಮೇಲೆ ಪ್ರಭಾವ ಬೀರುವುದಷ್ಟೇ ಅಲ್ಲ. ಉದ್ದೇಶಪೂರ್ವಕವಾಗಿ ಕೆಲವು ಸಂಪ್ರದಾಯ ಆಚರಣೆಯನ್ನು ಹೇರಿರುವುದು ಸ್ಪಷ್ಟವಾಗಿ ಈ ಅಧ್ಯಯನದಿಂದ ತಿಳಿದು ಬರುತ್ತದೆ. ರಾಯಬಾಗ ಪ್ರದೇಶದ ದೇವಾಲಯಗಳ ಅಧ್ಯಯನದಿಂದ ವಿವಿಧ ಕಾಲಘಟ್ಟದಲ್ಲಿ ನೆಡೆಸಲಾದ ಸಾಂಸ್ಕೃತಿಕ ಸಂಬಂಧದ ಗಾಢತೆ ಗೊತ್ತಾಗುತ್ತದೆ.

ರಾಯಬಾಗದ ದೇವಾಲಯಗಳು ಕರ್ನಾಟಕದ ದೃಷ್ಟಿಯಿಂದ ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡಿವೆ. ಇಲ್ಲಿ ಅನೇಕ ಜೈನ, ವೈಷ್ಣವ, ಹಾಗೂ ಶೈವ ದೇವಾಲಯಗಳು ವಿಶಿಷ್ಟತೆಯನ್ನು ಪಡೆದುಕೊಂಡಿವೆ. ಈ ದೇವಾಲಯಗಳು ಮೂರ್ತಿ ಶಿಲ್ಪ, ಕೆತ್ತನೆ, ವಾಸ್ತುಶಿಲ್ಪ ಸಾಮಾಜಿಕ ಪರಂಪರೆಯ ಮತ್ತು ಸುಂದರವಾದ ವೈವಿದ್ಯಮಯವಾದ ಸಂಸ್ಕೃತಿಯನ್ನು ನನ್ನ ಅಧ್ಯಯನವು ತಿಳಿಸಿಕೊಡುತ್ತದೆ.

ರಾಯಬಾಗ ದೇವಾಲಯಗಳ ಈ ಅಧ್ಯಯನವನ್ನು ರಾಯಬಾಗದ ದೇವಾಲಯಗಳನ್ನು ಮಾತ್ರ ಇಟ್ಟುಕೊಂಡು ಆ ದೇವಾಲಯಗಳ ಚಾರಿತ್ರಿಕ ವಿಷಯಗಳನ್ನು ಒಂದು ಹಿನ್ನೆಲೆಯಾಗಿ ಇಟ್ಟುಕೊಂಡು ಶಾಸನಗಳ ಆಧಾರದಿಂದ ನಿರೂಪಿಸಲಾಗಿದೆ. ನನ್ನ ಅಧ್ಯಯನವು ಈ ದೃಷ್ಟಿಯಿಂದ ಅನೇಕ ವಿಶಿಷ್ಟತೆಯನ್ನು ಕಟ್ಟಿಕೊಡುತ್ತದೆ. 'ರಾಯಬಾಗದ ದೇವಾಲಯಗಳು' ಎಂಬ ಅಧ್ಯಯನದ ನಂತರ ನನಗೆ ಲಭಿಸಿರುವ ಫಲಕೃತಿಗಳನ್ನು ಈ ಕೆಳಗಿನಂತೆ ಸಿದ್ಧಪಡಿಸಲಾಗಿದೆ.

- ರಾಯಬಾಗ ದೇವಾಲಯಗಳ ಅಧ್ಯಯನ ಮಾಡುವುದರ ಮೂಲಕ ಇತಿಹಾಸದ ದೃಷ್ಟಿಯಲ್ಲಿ ಕಡೆಗಣಿಸಲಾದ ದೇವಾಲಯವನ್ನು ಗುರುತಿಸಿ ಆ ದೇವಾಲಯಗಳ ಅನನ್ಯತೆ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಈ ಅಧ್ಯಯನದಲ್ಲಿ ಸ್ಪಷ್ಟಪಡಿಸಲಾಗಿದೆ.

- ರಾಯಬಾಗದ ದೇವಾಲಯಗಳ ಅಧ್ಯಯನ ಮೂಲಕ ವಿವಿಧ ಪ್ರದೇಶದ ದೇವಾಲಯಗಳಿಗೂ ಹಾಗೂ ರಾಯಬಾಗದ ವ್ಯತ್ಯಾಸವನ್ನು ಕಂಡುಕೊಳ್ಳಲಾಗಿದೆ.

- ಈ ಅಧ್ಯಯನದ ಮೂಲಕ ರಾಯಬಾಗದ ವೈಶಿಷ್ಟತೆಯನ್ನು ಅದರ ಹಿಂದಿರುವ ಸಾಂಸ್ಕೃತಿಕ ಪರಂಪರೆಯ ವೈಭವವನ್ನು ದೇವಾಲಯಗಳು ಹೇಗೆ ಪೋಶಿಸಿಕೊಂಡು ಬರುತ್ತವೆ ಎಂಬುದನ್ನು ಗುರುತಿಸಲಾಗಿದೆ.

- ರಾಯಬಾಗ ದೇವಾಲಯಗಳ ಅಧ್ಯಯನದ ಮೂಲಕ ಅಲ್ಲಿಯ ಮೂರ್ತಿಶಿಲ್ಪಗಳ ಜೊತೆಗಿರುವ ಶಾಸನವನ್ನು ಉಲ್ಲೇಖಿಸುವ ಮೂಲಕ ಆ ಶಿಲ್ಪಗಳು ಪ್ರತಿಷ್ಠಾಪನಗೊಂಡ ಬಗೆಯನ್ನು ಪರಿಶೀಲಿಸಲಾಗಿದೆ.

- ಈ ಅಧ್ಯಯನದ ಮೂಲಕ ಇತಿಹಾಸದ ಗತಕಾಲದಲ್ಲಿ ಅಡಗಿರುವ ರಾಯಬಾಗ ದೇವಾಲಯಗಳ ಸಂಗತಿಗಳು ಘಟನೆಗಳನ್ನು ಹಾಗೂ ಸಂಕೀರ್ಣತೆಯ ವೈವಿದ್ಯತೆಯನ್ನು ವಿಶ್ಲೇಷಣೆ ಮಾಡಲಾಗಿದೆ.

- ರಾಯಬಾಗ ದೇವಾಲಯದ ಅಧ್ಯಯನದಲ್ಲಿ ಕೇವಲ ದೇವಾಲಯಗಳ ಸ್ವರೂಪವನ್ನು ಗ್ರಹಿಸದೇ ಅಲ್ಲಿರುವ ಶಾಸನ ಹಾಗೂ ಚಾರಿತ್ರಿಕ ಅಂಶವನ್ನು ಸ್ಪಷ್ಟ ಪಡಿಸಲಾಗಿದೆ.

- ಈ ಅಧ್ಯಯನದಿಂದ ರಾಯಬಾಗದ ದೇವಾಲಯಗಳ ಬಗೆಗಳನ್ನು ಗುರುತಿಸಲಾಗಿದೆ.

- ಪ್ರಾಚೀನ ಮತ್ತು ಆಧುನಿಕ ದೇವಾಲಯಗಳ ವ್ಯತ್ಯಾಸವನ್ನು ಹಾಗೂ ಅವುಗಳ ಸಹ ಸಂಬಂಧವನ್ನು ಈ ಅಧ್ಯಯನ ಮೂಲಕ ಸ್ಪಷ್ಟಪಡಿಸಲಾಗಿದೆ.

- ರಾಯಬಾಗ ದೇವಾಲಯದ ಆಚರಣೆಗಳು ಮತ್ತು ಆ ದೇವಾಲಯಗಳ ಸಮುದಾಯದವರು ಒಂದೂಗೂಡಿ ಜಾತ್ರೆ ಹಬ್ಬ ಹರಿದಿನಗಳನ್ನು ಆಚರಿಸುವ ಪರಿಯನ್ನು ಕಂಡು ಕೊಳ್ಳಲಾಗಿದೆ.

- ರಾಯಬಾಗ ದೇವಾಲಯಗಳ ಅಧ್ಯಯನವು ಅಲ್ಲಯ ಜನರು ಆಚಾರ-ವಿಚಾರ ಸಂಪ್ರದಾಯ ಗುರುತಿಸುವದರ ಜೊತೆಗೆ ಅವುಗಳ ಮಹತ್ವವನ್ನು ತಿಳಿಸಲಾಗಿದೆ.

- ಪ್ರಸ್ತುತ ಅಧ್ಯಯನದಿಂದ ರಾಯಬಾಗ ದೇವಾಲಯಗಳ ರಚನಾ ವಿನ್ಯಾಸ ಹೆಚ್ಚಾಗಿ ಕಲ್ಯಾಣ ಚಾಲುಕ್ಯರ ಮಾದರಿಗಳಾಗಿದ್ದು ಬೆರಳಣಿಕೆಯಷ್ಟು ಅನಂತರ ಕಲ್ಯಾಣ ಚಾಲುಕ್ಯರ ಮಾದರಿ ಹಾಗೂ ಇತ್ತೀಚಿನ ಅಭಿಯಂತರರ ಶೈಲಿಯನ್ನು ವರ್ಗೀಕರಿಸಲಾಗಿದೆ.

- ಈ ಅಧ್ಯಯನವು ಸ್ಥಳೀಯ ಐತಿಹ್ಯ ಉಲ್ಲೇಖಿಸುವುದರ ಮೂಲಕ ಅವುಗಳ ಸಂಬಂಧವನ್ನು ತೌಲಕಿನವಾಗಿ ಪರಾಮರ್ಶಿಸಲಾಗಿದೆ.

- ಈ ಅಧ್ಯಯನ ಮೂಲಕ ರಾಯಬಾಗದ ದೇವಾಲಯದ ರಚನಾ ವಿನ್ಯಾಸ ಹಾಗೂ ಕಾಲದೇಶವನ್ನು ರಾಜರು ನೀಡಿದ ದತ್ತಿ ದಾನವನ್ನು ಪರಿಶೀಲಿಸಲಾಗಿದೆ.

- ರಾಯಬಾಗದ ದೇವಾಲಯಗಳ ಅಧ್ಯಯನದ ಮೂಲಕ ಅಲ್ಲಿಯ ಸಾಮಾಜಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ತಿಳಿಸಲಾಗಿದೆ.

- ರಾಯಬಾಗ ದೇವಾಲಯಗಳ ಅಧ್ಯಯನ ಮೂಲಕ ಆ ಗ್ರಾಮದ ವಿವೇಚನೆಯನ್ನು ಮಾಡಲಾಗಿದೆ. ರಾಯಬಾಗದ ಪ್ರಾಚೀನತೆ, ಬೌಗೋಳಿಕತೆ ಹಾಗೂ ವೈಶಿಷ್ಟತೆಯ ಗುರುತಿಸುವುದಾಗಿದೆ.

ಒಟ್ಟಿನಲ್ಲಿ ರಾಯಬಾಗ ಪ್ರದೇಶದ ದೇವಾಲಯದ ಅಧ್ಯಯನವು ಈ ಮೇಲೆ ಗುರುತಿಸಿರುವ ಅಂಶಗಳನ್ನು ಒಳಗೊಂಡು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ನಡೆದುಕೊಂಡು ಬಂದ ದೇವಾಲಯಗಳಾದ ವಿವಿಧ ಮಹತ್ವತೆ ಮತ್ತು ಅವಶ್ಯಕತೆಗನ್ನು ಆ ಕಾಲ ಘಟ್ಟದ ಹಿನ್ನೆಲೆಯಲ್ಲಿ ನಿರೂಪಿಸುವುದರ ಮೂಲಕ ಈ ಅಧ್ಯಯನದ ಹೊಸ ಹೆಜ್ಜೆ ಗುರುತುಗಳನ್ನು ಕಂಡುಕೊಳ್ಳಲಾಗಿದೆ.

ರಾಯಬಾಗ ದೇವಾಲಯಗಳ ಕುರಿತ ಈ ಅಧ್ಯಯನವನ್ನು ಇನ್ನು ಹಲವು ಅಧ್ಯಯನಕ್ಕೆ ಸುಳಿವನ್ನು ನೀಡಿದೆ. ಈ ಅಧ್ಯಯನವು ದೇವಾಲಯ ಕುರಿತೇ ಅಧ್ಯಯನ ಮಾಡಿದರೂ ಸಹ ವಾಸ್ತು ಶಿಲ್ಪದ ಅಧ್ಯಯನ ನಡೆಯಬೇಕಾಗಿದೆ. ಬೇರೆ-ಬೇರೆ ಅವಧಿಯ ಧಾನ ಧರ್ಮದ ಕಾಲದಲ್ಲಿ ನಡೆದು ಬಂದ ಪೂಜಾ ವಿಧಿ ವಿಧಾನಗಳ ಕುರಿತು ಪಾರಂಪರಿಸ ಅಧ್ಯಯನ ನಡೆಯಬೇಕಾಗಿದೆ. ಅಲ್ಲದೇ ಪ್ರತಿಯೊಂದು ಆಚರಣೆಯನ್ನು ಆಯಾ ಧರ್ಮದ ಹಿನ್ನೆಲೆಯಲ್ಲಿ ಅಧ್ಯಯನ ನಡೆಯಬೇಕಾಗಿದೆ. ಹಾಗೂ ರಾಯಬಾಗದ ದೇವಾಲಯ ಮತ್ತು ಶಾಸನಗಳನ್ನು ಕುರಿತು ಮುಂದಿನ ಅಧ್ಯಯನಕಾರರು ಅಧ್ಯಯನ ಮಾಡಬೇಕಾಗಿದೆ. ಒಟ್ಟಾರೆಯಾಗ ಇ ರಾಯಬಾಗ ದೇವಾಲಯಗಳ ಅಧ್ಯಯನವು ಸಂಪೂರ್ಣವಾಗಿ ಎಲ್ಲ ಅಂಶಗಳನ್ನು ಗುರುತಿಸಿದ್ದರೂ ಸಹ ಕೆಲವಾರು ದೇವಾಲಯಗಳ ಕುರಿತು ಸ್ಪಷ್ಟವಾದ ಅಧ್ಯಯನ ಮಾಡಲಾಗಿದೆ.

ಅನುಬಂಧಗಳು
ರಾಯಬಾಗದ ದೇವಾಲಯಗಳ ಪಟ್ಟಿ

- ಜೈನ ದೇವಾಲಯಗಳು (ಜಿನಾಲಯಗಳು)

೧ ಆದಿನಾಥ ಬಸದಿ

೨ ಪಾರ್ಶ್ವನಾತನ ಮೂರ್ತಿ

೩ ಚಂದ್ರ ಪ್ರಭಾ ಮುರ್ತಿ

೪ ಗಡದ ಬಸದಿ (ಮಹಾವೀರ ಬಸದಿ)

೫ ಚೌವೀಸ್ ತೀರ್ಥಂಕರರು

೬ ಚಂದ್ರಪ್ರಬಾ ತೀರ್ಥಂಕರ

- **ರಾಯಬಾಗದ ಶೈವ ದೇವಾಲಯಗಳು**

೧ ಸಿದ್ದೇಶ್ವರ ದೇವಾಲಯ

೨ ಸೋಮನಾಥ ದೇವಾಲಯ

೩ ಬಂಕನಾಥ ದೇವಾಲಯ

- **ವೈಷ್ಣವ ದೇವಾಲಯಗಳು**

೧ ನರಸಿಂಹ ದೇವಾಲಯ
೨ ಆಂಜನೇಯ ದೇವಸ್ಥಾನ
೩ ಅನಂತ ಪದ್ಮನಾಭ ದೇವಾಲಯ
೪ ದತ್ತ ಮಂದಿರ
೫ ರಾಮಮಂದಿರ

- **ಹಾಲುಮತ ದೇವಾಲಯಗಳು**

೧. ಬೀರಪ್ಪನ ದೇವಾಲಯ
೨. ಬಿರಪ್ಪನ ದೇವಾಲಯ
೩. ಎಡಿ ಮಾಯಕ್ಕ ದೇವಾಲಯ
೪. ಲಕ್ಕವ್ವನ ದೇವಸ್ಥಾನ

- **ಇತರೆ ದೇವಾಲಯಗಳು**

೧. ಅಂಭಾಬಾಯಿ ದೇವಾಲಯ
೨. ಹನುಮಾನ ಮಂದಿರ
೩. ವಿಠ್ಠಲ ಮಂದಿರ
೪. ಕಾಳಿಕಾ ಮೂರ್ತಿ
೫. ಸಂತೂಬಾತಿ ದೇವಾಲಯ
೬. ನಾಗಮ್ಮನ ದೇವಾಲಯ
೭. ಗಣಪತಿ ಮೂರ್ತಿಗಳು
೮. ರೇಣುಕಾ ದೇವಾಲಯ
೯. ಬ್ರಹ್ಮ ವಿಷ್ಣು ಮಹೇಶ್ವರ ದೇವಾಲಯ
೧೦. ಭರಮಪ್ಪನ ದೇವಸ್ಥಾನ

ರಾಯಬಾಗದ ನಕ್ಷೆ



ವಿವರಣೆಗಳು

…E } ಸ್ಥಳಾಂತರಿಸಲ್ಪಟ್ಟ
…G } ನಗರ
…F }
— ಈಗಿನ ನಗರ

A ಅಂಕಲಿಯಿಂದ ಬಂದ ರಾಜಮಾರ್ಗ
B ಸ್ಟೇಶನಕ್ಕೆ ಹೋದ ರಾಜಮಾರ್ಗ
C ಚಿಂಚಲಿಗೆ ಹೋದ ರಾಜಮಾರ್ಗ

1. ಗಡದ ಬಸದಿ 2. ನಾರಸಿಂಹಮಂದಿರ, 3. ಪಾರ್ಶ್ವನಾಥ ಬಸದಿ 4. ಬಂಕನಾಥ ದೇವಾಲಯ 5. ಸೋಮನಾಥ ದೇವಾಲಯ 6. ವಿಠ್ಠಲ ಮಂದಿರ. 7. ಅಂಬಾಭವಾನಿಮಂದಿರ 8. ಸಿದ್ದೇಶ್ವರ ಗುಡಿ 9. ಅಬುಕರ 10. ರಾಜಮನೆಗಳು 11. ಪ್ರಾಚೀನ ಮಂಟಪಗಳು 12. ರಣದುಲ್ಲಾ ಖಾನನ ಪ್ರಾರ್ಥನಾಮಂದಿರ.

ಕೃಪೆ-"ಕಾಲಗತಿ"ತ್ರೈಮಾಸಿಕ ಕಾಲಗತಿ ಪ್ರಕಾಶನ, ರಾಯಬಾಗ

ಪರಾಮರ್ಶನ ಗ್ರಂಥಗಳು

೧. ಡಾ.ಶ್ರೀಮತಿ ಸಿ. ಎಸ್. ಅಪರ್ಣ : ೨೦೦೭ ಸಂಗಮರ ದೇವಾಲಯಗಳು ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೨. ಡಾ. ಪಿ.ಜಿ.ಕೆಂಪನ್ನವರ : ೧೯೯೦ ಜೈನ ಐತಿಹ್ಯ,

೩. ಡಾ. ಬಿ. ಆರ್, ಹಂದೂರ : ೨೦೦೨ ಜೈನ ಪರಂಪರೆ, ಭಗವಾನ ಮಹಾವೀರರ ೨೬೦೦ ನೇ ಜನ್ಮ ಕಲ್ಯಾಣಕ ಮಹೋತ್ಸವ ಸಮಿತಿ, ಬೆಳಗಾವಿ.

೪. ಸಂ.ಡಾ.ಹೆಚ್.ಎಂ.ಮಹೇಶ್ವರಯ್ಯ : ೨೦೦೮ ಕರ್ನಾಟಕ ಭಾರತಿ ವಾರ್ಷಿಕ ಪತ್ರಿಕೆ ಕ.ವಿ.ವಿ ಧಾರವಾಡ.

೫ ಡಾ. ಪಿ. ಜಿ ಕೆಂಪಣ್ಣವರ : ೨೦೦೮ ಪ್ರಗತಿ ಮತ್ತು ಜಿನ ವಿಜಯ ಪತ್ರಿಕೆ,

೬ ಆರ್, ನರಸಿಂಹಾಚಾರ್ಯ ಕರ್ನಾಟಕ ಕವಿ ಚರಿತೆ, ಕನ್ನಡ ಸಾಹಿತ್ಯ ಪರಿಷತ, ಬೆಂಗಳೂರು.

೭ ಶಿವಾನಂದ .ಬ. ಮೂಲಿಮನಿ. ಬೆಳಗಾವಿ ಸಿರಿ, ಕನ್ನಡ ಸಾಹಿತ್ಯ ಪರಿಷತ, ಬೆಂಗಳೂರ.

೮ ಎಂ.ಮರಿಯಪ್ಪ ಭಟ್ಟ : ೧೯೫೫ 'ರಾಜಾಧಿತ್ಯನ ವ್ಯವಹಾರ ಗಣಿತ',

೯ ಕೆಂಚಪ್ಪಾ. ಪೂಜೇರಿ 'ರಾಯಬಾಗದ ಹಿರಿಯ ನಾಗರಿಕರು'

೧೦ ಶೋಭಾ ಎಸ್.ಕೊಕಟನೂರ : ೨೦೦೮ ಬಾಗೆ ಪರಿಸರದ ಸಾಹಿತ್ಯ ಅಪ್ರಕಟಿತ ಎಂ.ಫೀಲ್ ಸಂಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೧೧ ಡಾ.ಸಿ.ಟಿ. ಗುರುಪ್ರಸಾದ್ : ೨೦೦೫ ಏಳು ಊರಿನ ದೇವತೆಗಳು ಒಂದುಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨ ಲಕ್ಷ್ಮಣ್ ತೆಲಗಾವಿ : ೧೯೮೭ ಹರತಿ ಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

೧೩ ಟಿ.ಎಸ್. ವಂಟಗೂಡಿ : ೨೦೧೦ ರಾಯಬಾಗ ತಾಲೂಕಿನ ಹಾಲುಮತ ದೈವಗಳು,. ವಿದ್ಯಾಪ್ರಕಾಶನ ಹಿಡಕಲ್.

೧೪ ಡಾ.ಎಸ್.ಎಸ್. ಅಂಗಡಿ : ೨೦೦೯ ಕುರುಬ ಸಮುದಾಯ ಭಾಷೆ ಮಾನವ ಭಾಷಾಶಾಸ್ತ್ರ ಅಧ್ಯಾಯನ, ಆನಂದ ಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ.

೧೫ ತ್ರೈಮಾಸಿಕ ಪತ್ರಿಕೆ : ೧೯೯೦ ಇತಿಹಾಸ ಪುಟಗಳಲ್ಲಿ ರಾಯಬಾಗ 'ಕಾಲಗತಿ' ಕಾಲಗತಿ ಪ್ರಕಾಶನ, ರಾಯಬಾಗ.

೧೬ ಡಾ. ಬಿ. ಆರ್, ಹಂದೂರ : ೨೦೧೦ ಜೈನ ಸಾಸನಗಳು, ಪ್ರಕಾಶಕರು ಡಾ. ಬಿ. ಆರ್, ಹಂದೂರ. ಹುಕೇರಿ.

೧೭ ಬಿರಡೆ : ರಾಯಬಾಗ ಪ್ರದೇಶದ ಶಿಲ್ಪಕಲೆ ಒಂದು ಸಮಿಕ್ಷೇ

೧೮ ಬಸವರಾಜ. ಅಕ್ಕಿ : ೨೦೦೫ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಧಾರವಾಡ.

೧೯ ಈರಣ್ಣಾ. ಕೆ. ಪಿ : ೨೦೦೦ ಬಾದಾಮಿ ಚಾಲುಕ್ಯರ ಸಂಸ್ಕೃತಿಕ ಪರಂಪರೆ, ಮನುಸಾಹಿತ್ಯ ಪ್ರಕಾಶನ, ಧಾರವಾಡ.

೨೦ ಪಂಚಮುಖಿ ಆರ್. ಎಸ್. : ೧೯೮೩ ಕರ್ನಾಟಕದ ಶಾಸನಗಳು- ಕನ್ನಡ ಅಧ್ಯಯನ ಸಂಸ್ಥೆ, ಕವಿವಿ ಧಾರವಾಡ.

೨೧ ಕೃಷ್ಣರಾವ್ ಎಂ.ಎಂ : ೧೯೭೦ ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

೨೨ ಕೊಪ್ಪ ಎಸ್. ಕೆ : ೧೯೯೦ ತರ್ದವಾಡಿ ನಾಡು-ಒಂದು ಅಧ್ಯಯನ ಪ್ರತಿಭಾ ಪ್ರಕಾಸನ ಸಿಂಧಗಿ ರೋಡ, ಇಚಿಡಿ.

೨೩ ಮುದ್ದಾಚಾರಿ ಬಿ. : ೧೯೭೫ ದಕ್ಷಿಣ ಭಾರತದ ಇತಿಹಾಸ.

ENGLISH BOOKS

1. Alteksr A. S :1998 State and Govt. in ancient India. Motilal Banarasidas Publishers & Sellars New Dehli.
2. Aruni : 1960 Decany Paintigs, New Dehli Publishers, New Dehli.
3. Basavaraj K. R. : 1996 Administrative System under the Chalukya's of Kalyan.
4. Desai P. B. :1968 Basaveshwar & His Times. Kannada Research Institute K. U. Dharawad
5. Pattar Iranna : 1990 Education in ancient Karnataka, from early times to end of Chalukya's of Kalyan.

ರಾಯಬಾಗದ ದೇವಾಲಯಗಳ ಛಾಯಾಚಿತ್ರಗಳು



ಸೋಮನಾಥ ದೇವಾಲಯದ ಗರ್ಭಗೃಹದಲ್ಲಿರುವ ಲಿಂಗ.



ಸೋಮನಾಥ ದೇವಾಲಯದ ಪ್ರವೇಶ ದ್ವಾರ



ಸೋಮನಾಥ ದೇವಾಲಯದ ಗರ್ಭಗೃಹದ ಮುಂದಿರುವ ನಂದಿ ವಿಗ್ರಹಗಳು




ಸಿದ್ಧೇಶ್ವರ ದೇವಾಲಯದ ಮುಂದಿರುವ ಹನ್ನೆರಡು ಲಿಂಗಗಳು



ಶ್ರೀ ಸಿದ್ಧೇಶ್ವರ ದೇವಾಲಯ ರಾಯಬಾಗ.



ಶ್ರೀ ಸಿದ್ಧೇಶ್ವರ ದೇವಾಲಯದ ಗರ್ಭಗೃಹದಲ್ಲಿರುವ ಲಿಂಗ.



ಶಂಕರನಾಥ ದೇವಾಲಯದ ಗರ್ಭಗೃಹ.



ಗಡದ ಜೈನಬಸ್ತಿಯ ಮುಂದಿರುವ ಸ್ತಂಭ



ಗಡದ ಜೈನಬಸ್ತಿ.




ಚಂದ್ರಪ್ರಭಾ ಜಿನಾಲಯದಲ್ಲಿರುವ ಚಂದ್ರಪ್ರಭಾ ಮೂರ್ತಿ



ಚಂದ್ರಪ್ರಭಾ ಜಿನಾಲಯ



ಪಾರ್ಶ್ವನಾಥ ದೇವಾಲಯದಲ್ಲಿರುವ ಚೌವಿಸ್ ತೀರ್ಥಂಕರರು.



ಪಾರ್ಶ್ವನಾಥ ದೇವಾಲಯದಲ್ಲಿರುವ ಚೌವಿಸ್ ತೀರ್ಥಂಕರರು.



ಇತ್ತೀಚೆಗೆ ದೊರೆತ ಜಿನಮೂರ್ತಿಗಳು.



ಪಾರ್ಶ್ವನಾಥ ಜಿನಾಲಯ ರಾಯಬಾಗ.



ರಾಯಬಾಗದ ಮಹಾಲಕ್ಷ್ಮೀ ದೇವಾಲಯದ ಗರ್ಭಗೃಹ



ದತ್ತಮಂದಿರ ರಾಯಬಾಗ.



ವಿಠ್ಠಲ ಮಂದಿರದ ಗರ್ಭಗೃಹ ರಾಯಬಾಗ.



ಸಂತೂಬಾಯಿ ದೇವಾಲಯದ ಗರ್ಭಗೃಹ ರಾಯಬಾಗ.



ಐಂಕನಾಥ ದೇವಾಲಯ ರಾಯಬಾಗ.



ಐಂಕನಾಥ ದೇವಾಲಯದ ಬಲಕ್ಕಿರುವ ಪ್ರಾಚೀನ ಪುಷ್ಕರಣಿ.




ಸಂತೂಬಾಯಿ ದೇವಾಲಯದ ಬಲಕ್ಕಿರುವ ೩೦೦ವರ್ಷಗಳ ಪ್ರಾಚೀನ ಕಾಲದ ಮರ.



ಬ್ರಹ್ಮ, ವಿಷ್ಣು ಮಹೇಶ್ವರರ ಮೂರ್ತಿಗಳು ರಾಯಬಾಗ.




ಸಂತೂಬಾಯಿ ದೇವಾಲಯ ರಾಯಬಾಗ.



ಬಿರೇಶ್ವರ ದೇವಾಲಯದಲ್ಲಿರುವ ಬೀರಪ್ಪನ ಮೂರ್ತಿಗಳು



ಶ್ರೀ ಸಿದ್ಧಿವಿನಾಯಕ ದೇವಾಲಯ ರಾಯಬಾಗ.



ಬಿರೇಶ್ವರ ದೇವಾಲಯದ ಪ್ರವೇಶ ದ್ವಾರ



ಶ್ರೀ ಹನುಮಾನ ದೇವಾಸ್ಥಾನದ ಪ್ರವೇಶ ದ್ವಾರ.



ಶ್ರೀ ಹನುಮಾನ ದೇವಾಸ್ಥಾನದ ಗರ್ಭಗೃಹ



ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಗರ್ಭಗೃಹದಲ್ಲಿರುವ
ಗಣಪತಿ ಮೂರ್ತಿ.



ಏಡಿ ಮಾಯಕ್ಕ ದೇವಸ್ಥಾನ ರಾಯಬಾಗ.



ಶ್ರೀ ಅಂಬಾಭವಾನಿ ದೇವಸ್ಥಾನದ ಗರ್ಭಗೃಹ



ಶ್ರೀ ಅಂಬಾಭವಾನಿ ದೇವಸ್ಥಾನ ರಾಯಬಾಗ.



ಏಳು ಮಕ್ಕಳ ದೇವಸ್ಥಾನ ರಾಯಬಾಗ.



ಜೀರಪ್ಪನ ಗುಡಿಯ ಪ್ರವೇಶ ದ್ವಾರ.



ನರಸಿಂಹ ದೇವಸ್ಥಾನ ರಾಯಬಾಗ.



ರೇಣುಕಾದೇವಿ ದೇವಸ್ಥಾನದ ಗರ್ಭಗೃಹ



ರೇಣುಕಾದೇವಿ ದೇವಸ್ಥಾನ ರಾಯಬಾಗ



ಏಳು ಮಕ್ಕಳ ತಾಯಿ